# ತಿಳುವಳಿಕೆಯ ಮಾಧ್ಯಮ

**ರಾಷ್ಟ್ರೀಯ ವಿಚಾರ ಸಂಕಿರಣದ ಚರ್ಚೆಯ ಆಧಾರಿತ (2008-2010)**



# ನಾವೂ ಶಾಲೆಯಲ್ಲಿ ಇದ್ದಿದ್ದರೆ



ನಮ್ಮದೇ ಮಾತು ಕೇಳುತ್ತಾ
ಅರ್ಥ ಮಾಡಿಕೊಳ್ಳುತ್ತಾ
ಮಾತನಾಡುತ್ತಿದ್ದೆವು
ಹೊಸ ಗಿಡಗಳನ್ನು ಬೆಳೆಸುತ್ತಿದ್ದೆವು

# ತಿಳುವಳಿಕೆಯ ಮಾಧ್ಯಮ

**ರಾಷ್ಟ್ರೀಯ ವಿಚಾರ ಸಂಕಿರಣದ ಚರ್ಚೆಯ ಆಧಾರಿತ (2008-2010)**

विद्यया ऽमृतमश्नुते

एन सी ई आर टी
NCERT

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ
NATIONAL COUNCIL OF EDUCATIONAL RESEARCH AND TRAINING

**32141 — Samajh ka Madhyam**
**Rashytriya Parisamvad 2008–2010 per Aadharit (Kannada Language)**

**ISBN 978-93-5292-675-6**

**First Edition**

*August 2024 Shravana 1946*

**PD 1T BS**

© ***National Council of Educational Research and Training, 2024***

**ALL RIGHTS RESERVED**

- No part of this publication may be reproduced, stored in a retrieval system or transmitted, in any form or by any means, electronic, mechanical, photocopying, recording or otherwise without the prior permission of the publisher.
- This book is sold subject to the condition that it shall not, by way of trade, be lent, re-sold, hired out or otherwise disposed of without the publisher's consent, in any form of binding or cover other than that in which it is published.
- The correct price of this publication is the price printed on this page, Any revised price indicated by a rubber stamp or by a sticker or by any other means is incorrect and should be unacceptable.

**OFFICES OF THE PUBLICATION DIVISION, NCERT**

NCERT Campus
Sri Aurobindo Marg
**New Delhi 110 016** **Phone : 011-26562708**

108, 100 Feet Road
Hosdakere Halli Extension
Banashankari III Stage
**Bengaluru 560 085** **Phone : 080-26725740**

Navjivan Trust Building
P.O.Navjivan
**Ahmedabad 380 014** **Phone : 079-27541446**

CWC Campus
Opp. Dhankal Bus Stop
Panihati
**Kolkata 700 114** **Phone : 033-25530454**

CWC Complex
Maligaon
**Guwahati 781 021** **Phone : 0361-2674869**

**₹ 65.00**

*Printed on 80 GSM paper with NCERT watermark*

Published at the Publication Division by the Secretary, National Council of Educational Research and Training, Sri Aurobindo Marg, New Delhi 110 016 and printed at Taj Printers, 69/6A, Najafgarh Road Industrial Area, Near Kirti Nagar Metro Station, New Delhi 110 015

**Publication Team**

| | |
|---|---|
| Head, Publication Division | : *Anup Kumar Rajput* |
| Chief Production Officer | : *Arun Chitkara* |
| Chief Editor | : *Bijnan Sutar* |
| Chief Business Manager | : *Amitabh Kumar* |
| Assistant Production Officer | : *Deepak Kumar* |

**ಪರಿಷ್ಕರಿಸಿದ ಆವೃತ್ತಿ**

2024

# ಮುನ್ನುಡಿ

ಮಕ್ಕಳ ಆರಂಭಿಕ ಶಿಕ್ಷಣ ಮೂಲತ: ಭಾಷೆಯನ್ನು ಕಲಿಸುವುದರ ಮುಖಾಂತರವೇ ಆಗುತ್ತದೆ. ಹಾಗಾಗಿಯೇ 2020 ರ ರಾಷ್ಟ್ರೀಯ ಶಿಕ್ಷಣ ನೀತಿಯು ಮತ್ತೊಂದು ಬಾರಿ ಮಾತೃಭಾಷೆಗೆ ಒತ್ತು ಕೊಟ್ಟು ತನ್ನ ನೀತಿಯಲ್ಲಿ ಪ್ರಸ್ತಾಪಿಸಿದೆ. ಈ ಹಿಂದಿನ ಶಿಕ್ಷಣಕ್ಕೆ ಸಂಬಂಧಿಸಿದ ಸಲಹೆಗಳಲ್ಲೂ ಸಹಾ ಮಾತೃಭಾಷೆಯನ್ನು ಮಾಧ್ಯಮವಾಗಿಸುವ ಬಗ್ಗೆ ಚರ್ಚಿಸಲಾಗಿದೆ. ಭಾರತವು ಒಂದು ಬಹುಭಾಷೆಗಳನ್ನಾಡುವ ರಾಷ್ಟ್ರವಾಗಿದ್ದು, ಮಕ್ಕಳ ಶಿಕ್ಷಣ ಅತ್ಯಂತ ಸಹಜವಾಗಿ ಹಾಗೂ ಯಾವುದೇ ಅಡೆ-ತಡೆಗಳಿಲ್ಲದೆ ನಿರಾತಂಕವಾಗಿ ನಡೆಯಬೇಕಾದರೆ, ಭಾರತೀಯ ಭಾಷೆಗಳನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವ ಅವಶ್ಯಕತೆ ಇದೆ. ಮಾತೃಭಾಷೆಯ ಶಿಕ್ಷಣವು ಎಲ್ಲಾ ಪಠ್ಯ ವಿಷಯಗಳಿಗೆ ಭದ್ರ ಅಡಿಪಾಯ ಹಾಕಿ ಮಕ್ಕಳ ಕಲಿಕೆಯನ್ನು ಅತ್ಯಂತ ಪರಿಣಾಮಕಾರಿಯಾಗಿಸುತ್ತದೆ. 2020 ರ ರಾಷ್ಟ್ರೀಯ ಶಿಕ್ಷಣ ನೀತಿಯು 'ಪ್ರಾಥಮಿಕ ಹಂತದ ಶಿಕ್ಷಣವು, ಅಂದರೆ ಒಂದರಿಂದ ಐದನೆಯ ತರಗತಿವರೆಗಿನ ಶಿಕ್ಷಣವು ಮಾತೃಭಾಷೆಯಲ್ಲಿಯೇ ಇರಬೇಕು' ಎಂದು ಸುಸ್ಪಷ್ಟವಾಗಿ ಹೇಳಿದೆ. ಅಲ್ಲದೆ ಎಂಟನೆಯ ಹಾಗೂ ಅದಕ್ಕಿಂತ ಮೇಲಿನ ತರಗತಿಗಳಲ್ಲೂ ಮಾತೃ ಭಾಷೆಯನ್ನು ಮುಂದುವರೆಸುವ ಪ್ರಯತ್ನವೂ ನಡೆಯುತ್ತಿದೆ. ಬಹುಭಾಷೀಯತೆಯನ್ನು ಜನಪ್ರಿಯಗೊಳಿಸಲು ವಿಜ್ಞಾನ ಹಾಗೂ ಅನ್ಯ ವಿಷಯಗಳಲ್ಲಿ ಉತ್ಕೃಷ್ಟವಾದ ಪಠ್ಯವಸ್ತುವನ್ನು ತಯಾರಿಸಿ ಮಕ್ಕಳಿಗೆ ತಲುಪಿಸಬೇಕಾಗಿದೆ. ಇದರಿಂದ ಮಕ್ಕಳ ಭಾಷೆ ಹಾಗೂ ಶಾಲೆಯ ಭಾಷೆಗಳ ನಡುವಿನ ಅಂತರ ಕಡಿಮೆಯಾಗುವುದಲ್ಲದೆ ಭಾಷೆಗಳ ನಡುವೆ ಸೇತುವೆ ನಿರ್ಮಾಣವಾಗುತ್ತದೆ; ಇದರ ತಳಹದಿಯು ಮಾತೃಭಾಷೆಯೇ ಆಗಿರುತ್ತದೆ.

ಈ ಮಹತ್ವದ ಯೋಜನೆಯಲ್ಲಿ ದೇಶದ ವಿವಿಧ ವಿಷಯಗಳ ತಜ್ಞರ ಹಾಗೂ ಭಾಷಾ ಶಿಕ್ಷಣ ವಿಭಾಗದ ಪಾತ್ರ ಅತ್ಯಂತ ಮಹತ್ವಪೂರ್ಣ, ಇದಕ್ಕಾಗಿ ಇವರೆಲ್ಲರಿಗೂ ಅನಂತ ಧನ್ಯವಾದಗಳು. ಈ ಪುಸ್ತಕವು ಮಕ್ಕಳಭಾಷಾ ಕ್ಷೇತ್ರದಲ್ಲಿ ಕೆಲಸ ಮಾಡುವ ವಿಭಿನ್ನ ರಾಜ್ಯಗಳ ಯೋಜನಾಧಿಕಾರಿಗಳಿಗೆ ಒಂದು ಬುನಾದಿ ಪುಸ್ತಿಕೆಯ ರೂಪದಲ್ಲಿ ಸಹಾಯಕವಾಗಬಹುದು ಎಂಬುದು ನನ್ನ ಭರವಸೆ.

ದಿನೇಶ್ ಪ್ರಸಾದ್ ಸಕ್ಲಾನಿ<br>
ನಿರ್ದೇಶಕರು<br>
ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ

ನವ ದೆಹಲಿ<br>
ಮಾರ್ಚಿ2024

**ಮೊದಲ ಆವೃತ್ತಿ**
2010

# ಮುನ್ನುಡಿ

ವಸಾಹತುಶಾಹಿಯ ಸಮಾಜಗಳಲ್ಲಿನ ಮಕ್ಕಳ ಜೀವನ ಹಾಗೂ ಶಿಕ್ಷಣದಲ್ಲಿ ಭಾಷೆಯ ಪಾತ್ರ ಅನೇಕ ಪ್ರಕಾರದ ವಿರೋಧಾಭಾಸಗಳಿಂದ ಕೂಡಿದ್ದು; ಇದರ ಮೇಲೆ ವಿಚಾರಮಾಡುವ ಪ್ರಯತ್ನವೂ ಸಹಾ ಆಗದೆ; ಇದು ಪ್ರಾಯಶ: ಸಮಾಜದ ಪ್ರತಿಷ್ಠೆಯ ಹಾಗೂ ರಾಜಕೀಯ ವಿವಾದಗಳ ಸುಳಿಯಲ್ಲಿ ಸಿಲುಕಿಹಾಕಿಕೊಂಡುಬಿಟ್ಟಿದೆ. ಶಿಕ್ಷಣ ಸಂಬಂಧಿ ಭಾಷಾ ನೀತಿಯು ಸುದೀರ್ಘ ಕಾಲದಿಂದಲೂ ಚರ್ಚೆ ಹಾಗೂ ಸಂಶೋಧನೆ ಇವೆರಡರ ವ್ಯಾಪ್ತಿಯಿಂದ ಹೊರಗುಳಿದಿದ್ದು, ಇದು ಆಶ್ಚರ್ಯಪಡುವ ಸಂಗತಿಯಾಗಿಲ್ಲ. ಈ ಪರಿಸ್ಥಿತಿಯನ್ನು ಬದಲಿಸುವ ಉದ್ದೇಶದಿಂದ ರಾಷ್ಟ್ರೀಯ ಪರಿಷತ್ತು" ಸಮಝ್ ಕಾ ಮಾಧ್ಯಮ್/ ತಿಳುವಳಿಕೆಯ ಮಾಧ್ಯಮ" ಈ ಶೀರ್ಷಿಕೆಯ ಅಡಿಯಲ್ಲಿ ಅನೇಕ ವಿಚಾರ ಸಂಕಿರಣಗಳನ್ನು ಆಯೋಜನೆ ಮಾಡಿತ್ತು. ಉದಯಪುರ, ಪಾಟ್ನಾ, ವಾರಣಾಸಿ ಮತ್ತು ದೆಹಲಿ ನಗರಗಳಲ್ಲಿ ಆಯೋಜನೆ ಮಾಡಲಾದ ಈ ಗೋಷ್ಟಿಗಳ ಚರ್ಚೆಯ ವಿಚಾರದ ಕೇಂದ್ರಬಿಂದುವು 'ಶಾಲೆಯಲ್ಲಿ ಮಕ್ಕಳು ದಿನನಿತ್ಯ ಬಳಸುವ ಭಾಷೆಯಿಂದ ಪಡೆದ ಅನುಭವಗಳ ಬಗ್ಗೆ ಆಗಿತ್ತು. ಭಾಷೆಯ ಪ್ರಯೋಗದ ವಿಷಯದಲ್ಲಿ ಶಿಕ್ಷಣ ನೀತಿಯಲ್ಲಿ ಹಿಂದಿನಿಂದಲೂ ನಿಂತು ಹೋದ ಚರ್ಚೆಗಳು ಹೊಸದಾಗಿ ಮತ್ತೆ ಆರಂಭಿಸಬೇಕಿದೆ. ಈ ಕಾರ್ಯವನ್ನು ಮುನ್ನಡೆಸುವ ಸಲುವಾಗಿಈ ಪುಸ್ತಕವನ್ನು ಪ್ರಕಟಿಸಲಾಗಿದೆ.

ಪುಸ್ತಕದ ವಿಷಯವಸ್ತುವನ್ನು ನಾಲ್ಕೂ ಗೋಷ್ಠಿಗಳಲ್ಲಿ ಬಂದಂತಹ ಪ್ರಶ್ನೆಗಳ ಹಾಗೂ ಅವುಗಳ ಉತ್ತರಗಳನ್ನು ತರ್ಕಬದ್ಧ ವಾದಗಳ ಸಹಾಯದಿಂದ ಸಿದ್ಧಪಡಿಸಲಾಗಿದೆ. ಈ ಪುಸ್ತಕ ದ ಮೂಲಕ ಮಕ್ಕಳ ಶಿಕ್ಷಣಕ್ಕೆ ಸಂಬಂಧಪಟ್ಟ- ಶಿಕ್ಷಕರು, ಅವರ ಪ್ರಶಿಕ್ಷಕರು, ಅಧಿಕಾರಿಗಳು, ಜನ ಪ್ರತಿನಿಧಿಗಳು, ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರು ಹಾಗೂ ಪೋಷಕರು ಒಳಗೊಂಡಿದ್ದಾರೆಂಬ ವಿಶ್ವಾಸವಿದೆ. ಶಿಕ್ಷಣವನ್ನು ಭಾಷಾ ಪ್ರಶ್ನೆಯ ಆಧಾರದ ಮೇಲೆ ಆಲೋಚಿಸುವ ಹಾಗೂ ಸಂವಾದ ನಡೆಸಲು ಉತ್ಸುಕತೆ ಅನುಭವಿಸುವರು; ಈ ರೀತಿಯ ಸಂವಾದವು ಈ ಸಮಯದ ಐತಿಹಾಸಿಕ ಆವಶ್ಯಕತೆಯಾಗಿದೆ. ಶಿಕ್ಷಣದ ಹಕ್ಕಿನ ಕಾನೂನು, ಮಕ್ಕಳ ಮಾತೃಭಾಷೆಯ ಮಹತ್ವವನ್ನು ಪುನರ್ ಸ್ಥಾಪಿಸಲು ಹೊಸ ಪ್ರಯತ್ನಗಳನ್ನು ಮಾಡುತ್ತಿದೆ. ಈ ಹಂತದಲ್ಲಿ ವಸಾಹತುಶಾಹಿ ಇತಿಹಾಸದ ಪರಂಪರೆಯಿಂದ ಜನಿಸಿದ ಮಾನಸಿಕತೆ ಮತ್ತು ಸಾಮಾಜಿಕ ಹಿಡಿತವನ್ನು ದೂರ ಮಾಡುವ ಶಕ್ತಿ ಇದೆ. ನಿಸ್ಸಂಶಯವಾಗಿ, ಯಾವುದೇ ಕಾನೂನಿನಲ್ಲಿ ಅಂತರ್ಗತ ಶಕ್ತಿಯನ್ನು ಅಭಿವ್ಯಕ್ತಿಗೊಳಿಸಲು ಸಾಮಾಜಿಕ ಹಾಗೂ ಸಾಂಸ್ಥಿಕ ಸಹಕಾರದ ಅವಶ್ಯತೆ ಇರುತ್ತದೆ. ಆಂಗ್ಲ ಭಾಷಾ ಮಾಧ್ಯಮ ಶಾಲೆಗಳ ಧೋರಣೆ ಸಮಕಾಲೀನ ವಾಸ್ತವಿಕತೆಯಲ್ಲ, ಇದು ಒಂದು ಸಂಕೀರ್ಣ ಸಾಂಸ್ಕೃತಿಕ ರಚನೆಯಾಗಿದೆ. ಇದನ್ನು ಸಂವಾದಾತ್ಮಕ ಅರಿವಿನ ಮೂಲಕವೇ ಯಾವುದೇ ಬದಲಾವಣೆಯ ಭರವಸೆ ಇಡಬಹುದಾಗಿದೆ.

2005 ರ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟಿನ ಬದಲಾವಣೆಯ ದಿಕ್ಕು ಹಾಗೂ ಲಕ್ಷಣಗಳನ್ನು ಗಮನಿಸಿ ಸಾಕಷ್ಟು ಸಲಹೆ-ಸೂಚನೆಗಳನ್ನು ನೀಡಲಾಗಿತ್ತು. ಈ ಸೂಚನೆಗಳನ್ನು ವಿಸ್ತೃತವಾಗಿ ಭಾರತೀಯ ಭಾಷೆ ಗಳ ಹಾಗೂ ಆಂಗ್ಲ ಭಾಷೆಯ ಕಲಿಕೆಗೆ ಸಂಬಂಧಪಟ್ಟ ರಾಷ್ಟ್ರೀಯ ಫೋಕಸ್ ಸಮೂಹಗಳ

ವರದಿಗಳಲ್ಲಿ ಬಹಿರಂಗ ಪಡಿಸಲಾಗಿದೆ. ಈ ಎರಡು ದಾಖಲೆಗಳು ತರಗತಿಯಲ್ಲಿ ಮಕ್ಕಳುಅರ್ಥಮಾಡಿಕೊಳ್ಳುವ ಸ್ವಾಭಾವಿಕ ವಿಕಾಸದ ಹಂತಗಳ ಮನೋ-ವೈಜ್ಞಾನಿಕ ಉಲ್ಲೇಖಗಳನ್ನು ಕೊಡಲಾಗಿದೆ.

ಭಾರತವು ಬಹುಭಾಷೆಗಳ ಪರಿಸರದಿಂದ ಕೂಡಿರುವುದು ಈ ಸಂದರ್ಭದ ಒಂದು ಮಹತ್ವಪೂರ್ಣ ಆಯಾಮವಾಗಿದೆ. ನಮ್ಮ ಮಕ್ಕಳು ಹುಟ್ಟಿನಿಂದಲೇ ಬಹುಭಾಷಾ ಪರಿಸರದಲ್ಲಿ ಬೆಳೆದು ,ಅವರ ಬೌದ್ಧಿಕ ಬೆಳವಣಿಗೆಯು ಈ ಪರಿಸರದಲ್ಲಿ ಅಂತರ್ಗತವಾಗಿರುವ ಜಾನಪದ ಸೃಷ್ಮಿಯನ್ನು ಗ್ರಹಿಸುವಲ್ಲಿ ಸಫಲವಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಭಾಷೆಯ ಕಲಿಸುವಿಕೆ ಹಾಗೂ ಭಾಷಾಮಾಧ್ಯಮದ ಪ್ರಶ್ನೆಯ ಮೇಲೆ ವ್ಯಾಪಕ ಜಡತ್ವವನ್ನು ಈ ವಿಶಾಲ ದೃಷ್ಟಿಕೋನದಿಂದ ತಿಳಿಯಬೇಕಾದ ಅವಶ್ಯಕತೆ ಇದೆ.

ಭಾಷಾ ಸಂಬಂಧಿತ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಮರು-ಪರಿಶೀಲಿಸಲು ಈ ಪುಸ್ತಕವು ಸ್ಥಾನ ಕಾಗದವಾಗಿ ಕಾರ್ಯನಿರ್ವಹಿಸುತ್ತದೆ ಎಂದು ನನಗೆ ವಿಶ್ವಾಸವಿದೆ. ಮಂಡಳಿಯ ಪರವಾಗಿ, 'ಸಮಝ್ ಕಾ ಮಾಧ್ಯಮ್/ ತಿಳುವಳಿಕೆಯ ಮಾಧ್ಯಮ' ಸರಣಿಯಲ್ಲಿ ಭಾಗವಹಿಸಿದ ಎಲ್ಲರಿಗೂ ನನ್ನ ಕೃತಜ್ಞತೆಗಳನ್ನು ವ್ಯಕ್ತಪಡಿಸಲು ಬಯಸುತ್ತೇನೆ. ವಿಚಾರ ಸಂಕಿರಣಗಳ ಚರ್ಚೆಗಳನ್ನು ಒಟ್ಟುಗೂಡಿಸಿ ಅವಿರತ ಪರಿಶ್ರಮದಿಂದ ಈ ಪುಸ್ತಕದ ರೂಪವನ್ನು ನೀಡಿದ ಭಾಷಾ ವಿಭಾಗದ ಡಾ.ಸಂಧ್ಯಾ ಸಿಂಗ್ ಮತ್ತು ಡಾ.ಕೀರ್ತಿ ಕಪೂರ್ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಚಾರ ಸಂಕಿರಣಗಳ ಸರಣಿಯ ಕಾರ್ಯಕ್ರಮಗಳನ್ನು ಅತ್ಯಂತ ಉತ್ಸಾಹದಿಂದ ನಿರ್ವಹಿಸಿದ ಭಾಷಾ ವಿಭಾಗದ ಮುಖ್ಯಸ್ಥರಾದ ಪ್ರೊ.ರಾಮಜನ್ಮ ಶರ್ಮಾ ಅವರಿಗೆ ನಾನು ಆಭಾರಿಯಾಗಿದ್ದೇನೆ. ಈ ಪುಸ್ತಕದ ಪ್ರಚಾರವು ರಾಜ್ಯ ಮಟ್ಟದ ಸಂಸ್ಥೆಗಳಿಗೆ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ಆಳವಾಗಿ ಯೋಚಿಸಲು ಪ್ರೇರೇಪಿಸುತ್ತದೆ ಎಂದು ನಾನು ಭಾವಿಸುತ್ತೇನೆ.

ನವದೆಹಲಿ
4 ಮಾರ್ಚ್ 2010

ಕೃಷ್ಣ ಕುಮಾರ್
ನಿರ್ದೇಶಕರು
**ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ**

# ಪೀಠಿಕೆ

ಭಾಷೆಯು ನಮ್ಮ ಜೀವನ ಹಾಗೂ ಸಂಸ್ಕೃತಿಯಲ್ಲಿ ಅತ್ಯಂತ ಮಹತ್ವವಾದ ಪಾತ್ರ ವಹಿಸುವುದಲ್ಲದೆ ಸಂಸ್ಕೃತಿಗೆ ಒಂದು ಆಕಾರವನ್ನು ನೀಡುತ್ತದೆ. ಇದು ನಮ್ಮ ಅಸ್ಮಿತೆ ಮತ್ತು ಗುರುತಿನ ಪ್ರತೀಕವಾಗಿದೆಯಲ್ಲದೆ ಮಾತೃಭಾಷೆಯ ಶಿಕ್ಷಣವು ಮಕ್ಕಳ ಸಾಮಾಜಿಕ ಹಾಗೂ ಬೌದ್ಧಿಕ ವಿಕಾಸಕ್ಕೆ ಪುಷ್ಠಿ ನೀಡುತ್ತದೆ.

"ಸಮಜ್ ಕಾ ಮಾಧ್ಯಮ್"(ತಿಳುವಳಿಕೆಯ ಮಾಧ್ಯಮ) ಎಂಬ ಶೀರ್ಷಿಕೆಯ ಈ ಪುಸ್ತಕವು 2008-2010 ರ ನಡುವೆ ದೇಶದಾದ್ಯಂತ ನಡೆದ ವಿಚಾರ ಸಂಕಿರಣಗಳ ಚರ್ಚೆಯಾಧಾರಿತ ವಿಷಯಗಳ ಮೇಲೆ ಮೂಲತ: ಹಿಂದಿ ಭಾಷೆಯಲ್ಲಿ ಸಿದ್ಧಪಡಿಸಲಾಗಿತ್ತು. ಈಗ ಇದರ ಜೊತೆಗೆ 2020 ರ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸ್ಸುಗಳನ್ನೂ ಸಹಾ ಸೇರಿಸಿ, ಹಿಂದಿ ಪುಸ್ತಕದ ಜೊತೆಗೆ ಇಂಗ್ಲಿಷ್ ಸೇರಿದಂತೆ 23 ಭಾರತೀಯ ಭಾಷೆಗಳ ಅನುವಾದದ ಮೂಲಕ ಎಲ್ಲರಿಗೂ ತಲುಪಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಈ ಪ್ರಯತ್ನವನ್ನು ಸಾಕಾರಗೊಳಿಸುವ ಉದ್ದೇಶದಿಂದ ಈ ಪುಸ್ತಕವನ್ನು ಪ್ರಕಟಿಸಲಾಗಿದೆ. ಈ ಪುಸ್ತಿಕೆಯ ವಿಷಯ ವಸ್ತುವನ್ನು ನಾಲ್ಕು ವಿಚಾರ ಸಂಕಿರಣಗಳಲ್ಲಿ ಕೇಳಿ ಬಂದಂತಹ ಪ್ರಶ್ನೆಗಳು ಹಾಗೂ ಅವುಗಳ ಮೇಲೆ ಗಹನವಾಗಿ ಚರ್ಚಿಸಿ ಬಂದಂತಹ ಉತ್ತರಗಳ ಮುಖಾಂತರ ರಚಿಸಲಾಗಿದೆ.

ಈ ಪುಸ್ತಕವು ಭಾಷೆಗೆ ಸಂಬಂಧಿಸಿದ ನೀತಿಗಳು ಹಾಗೂ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವ ಹೊಸ ಆರಂಭಕ್ಕೆ ನಾಂದಿಯಾಗಿದೆ ಎಂಬುದು ನನ್ನ ಅಚಲ ವಿಶ್ವಾಸ.

ಮಂಡಳಿಯ ಪರವಾಗಿ, 'ಸಮಝ್ ಕಾ ಮಾಧ್ಯಮ್'/'ತಿಳುವಳಿಕೆಯ ಮಾಧ್ಯಮ'ದ ಸರಣಿ ಗೋಷ್ಠಿಗಳಲ್ಲಿ ಭಾಗವಹಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಮಹತ್ವದ ಯೋಜನೆಗೆ ಸ್ಫೂರ್ತಿ ನೀಡಿದ ಅಂದಿನ ನಿರ್ದೇಶಕರಾದ ಪ್ರೊಫೆಸರ್ ಕೃಷ್ಣ ಕುಮಾರ್ ಅವರಿಗೆ ವಿಶೇಷವಾದ ಕೃತಜ್ಞತೆಗಳು. ಅವರ ನಿರ್ದೇಶನದಿಂದಾಗಿಯೇ ಈ ಕಾರ್ಯ ಸಾಧ್ಯವಾಯಿತು. ಈ ಪುಸ್ತಕದ ಪ್ರಚಾರದಿಂದಾಗಿ ರಾಜ್ಯ ಮಟ್ಟದ ಸಂಸ್ಥೆಗಳು ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ಆಳವಾದ ಚಿಂತನೆಗೆ ಪ್ರೇರೇಪಿಸುತ್ತದೆ ಎಂದು ನಾನು ಭಾವಿಸುತ್ತೇನೆ.

ಸಂಧ್ಯಾ ಸಿಂಗ್
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಭಾಷಾ ಶಿಕ್ಷಣ ವಿಭಾಗ
ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ

# ಪುಸ್ತಕ ನಿರ್ಮಾಣ ಸಮಿತಿ

**ಲೇಖಕಿ ಹಾಗೂ ಸಂಯೋಜಕಿ**
**ಸಂಧ್ಯಾ ಸಿಂಹ**
**ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು**
**ಭಾಷಾ ವಿಭಾಗ, ಎನ್. ಸಿ. ಇ. ಆರ್. ಟಿ**
**ನವದೆಹಲಿ**

**ಸಹಕಾರ**
**ಕೀರ್ತಿ ಕಪೂರ್**
**ಪ್ರಾಧ್ಯಾಪಕರು**
**ಭಾಷಾ ವಿಭಾಗ, ಎನ್. ಸಿ. ಇ. ಆರ್. ಟಿ**
**ನವದೆಹಲಿ**

**ಅನುವಾದಕರು**
**ಡಾ. ಗಾಯತ್ರಿ. ಎಸ್**
**ಎಂ.ಎ, ಎಮ್. ಇಡಿ, ಎಮ್. ಫೀಲ್, ಪಿ.ಹೆಚ್ ಡಿ, ಯುಜಿಸಿ(ನೆಟ್)**
**ಶಿಕ್ಷಣತಜ್ಞೆ ಹಾಗೂ ಸಂಗೀತ ಚಿಕಿತ್ಸಕರು**
**ನವದೆಹಲಿ**

- ಒಂದು ವೇಳೆ, ಶಿಕ್ಷಣದ ಮಾಧ್ಯಮವು ಮಾತೃಭಾಷೆಯಾಗಿದ್ದರೆ, ಅದು ಭಾಷೆ ಹಾಗೂ ಸಂಸ್ಕೃತಿಯ ನಡುವೆ ಇರುವ ಅಂತರಕ್ಕೆ ಸೇತುವೆಯನ್ನು ಕಟ್ಟಲು ಸಹಾಯ ಮಾಡುತ್ತದೆ. ಮಕ್ಕಳ ಮನೆಯ ಭಾಷೆ ಹಾಗೂ ಶಾಲೆಯ ಭಾಷೆಗಳನ್ನು ಜೋಡಿಸುವುದರಲ್ಲಿ ಶಾಲೆಯು ಅತ್ಯಂತ ಪ್ರಮುಖ ಪಾತ್ರ ವಹಿಸಬೇಕಿದೆ.
- ಪ್ರಾಥಮಿಕ ಶಿಕ್ಷಣ ಒಂದು ಅರ್ಥದಲ್ಲಿ ಭಾಷಾ ಶಿಕ್ಷಣವೇ ಆಗಿದೆ. ಗಣಿತ, ಪರಿಸರ ಹಾಗೂ ಸಮಾಜದ ಪ್ರಾರಂಭಿಕ ವಿಷಯವು ಮಾತೃಭಾಷೆಯಲ್ಲಿಯೇ ಬಹಳ ಚೆನ್ನಾಗಿ ಗ್ರಹಿಸಬಹುದಾಗಿದೆ.
- ಮಾತೃಭಾಷೆ/ಪ್ರಾದೇಶಿಕ ಭಾಷೆಯು ಶಿಕ್ಷಣದ ಎಲ್ಲಾ ಹಂತಗಳಲ್ಲೂಮುಂದುವರೆಯಬೇಕಿದೆ. ಏಕೆಂದರೆ ಈ ಭಾಷೆಗಳಲ್ಲಿನ ಸಾಮರ್ಥ್ಯಗಳ ವಿಕಾಸದಿಂದ ಮಕ್ಕಳ ಮಾನಸಿಕ ವಿಕಾಸ ಹಾಗೂ ಸಂವಹನದ ಎಲ್ಲಾ ಮಾಧ್ಯಮಗಳು ತೆರೆದುಕೊಂಡು ಇತರರೊಂದಿಗಿನ ಸಂಬಂಧ ಆರೋಗ್ಯಕರವಾಗಿ ಇರುವುದಲ್ಲದೆ ಪರಿಕಲ್ಪನೆಗಳ ಸ್ಪಷ್ಟತೆಯೂ ಹೆಚ್ಚುತ್ತದೆ.
- ಆರಂಭಿಕ ಶಿಕ್ಷಣ ಮಾಧ್ಯಮವು ಮಕ್ಕಳ ಮಾತೃಭಾಷೆಯಲ್ಲಿದ್ದರೆ ಮಕ್ಕಳು ಹಿಂದೆ ಕಲಿತ ಜ್ಞಾನ, ಅವರ ಭಾಷಾ ಸಾಮರ್ಥ್ಯಗಳು ಮತ್ತು ಮಾನಸಿಕ ವಿಕಾಸ ಇವುಗಳ ಸರಿಯಾದ ಉಪಯೋಗ ಆಗುವುದು.
- ಮಕ್ಕಳ ಮನೆಯ ಭಾಷೆ, ನೆರೆ ಹೊರೆಯ ಭಾಷೆ ಮತ್ತು ಶಾಲೆಯ ಭಾಷೆಗಳ ನಡುವೆ ಜೋಡಿಸುವ ಕಾರ್ಯಕ್ಕೆ ಎಲ್ಲಾ ಸಾಧ್ಯವಾದ ಪ್ರಯತ್ನಗಳನ್ನು ಮಾಡಬೇಕಿದೆ. ಅದೂ ಕೂಡ ಆಂಗ್ಲ ಮಾಧ್ಯಮ ಶಾಲೆಗಳಲ್ಲಿಯೂ ಸಹಾ ಮಕ್ಕಳ ಮಾತೃ ಭಾಷೆಗಳನ್ನು ಮಧ್ಯವರ್ತಿ ಭಾಷೆಯ ರೀತಿಯಲ್ಲಿ ಬೆಳಸಬೇಕಿದೆ, ಇದರಿಂದ ಒಂದು ಮಾಧ್ಯಮದಿಂದ ಇನ್ನೊಂದು ಮಾಧ್ಯಮಕ್ಕೆ ಶಾಲೆ ಬದಲಿಸದೆ ಸೇರಬಹುದಾಗಿದೆ.
- ಶಾಲಾ ಬೋಧನೆಯ ಸಮಯದಲ್ಲಿ ಸಾಧ್ಯವಾದಷ್ಟು ಬಹು ಭಾಷಾ ಶಿಕ್ಷಣಕ್ಕೂ ಉತ್ತೇಜನ ನೀಡಬೇಕಿದೆ.

*— ಭಾರತೀಯ ಭಾಷೆಗಳ ಶಿಕ್ಷಣ(ಸ್ಥಾನ ಕಾಗದ), ಎನ್. ಸಿ. ಇ. ಆರ್.ಟಿ*

**ಪ್ರಥಮ ಆವೃತ್ತಿ**

# ಕೃತಜ್ಞತೆಗಳು

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತು, ಭಾಷಾ ವಿಭಾಗ ಎನ್.ಸಿ.ಇ.ಆರ್. ಟಿ, ನವದೆಹಲಿ; ಯುನಿಸೆಫ್, ಪಾಟ್ನಾ; ಆರ್. ಐ. ಇ., ಭುವನೇಶ್ವರ; ಆರ್. ಐ.ಇ., ಮೈಸೂರು; ಆರ್. ಐ. ಇ., ಅಜ್ಮೀರ್; ಎಸ್. ಸಿ. ಇ. ಆರ್. ಟಿ., ಪಾಟ್ನಾ; ವಿದ್ಯಾ ಭವನ ಸೊಸೈಟಿ, ಉದಯಪುರ; ವಾರಣಾಸಿಯ ಕಾಶಿ ಹಿಂದೂ ವಿಶ್ವವಿದ್ಯಾನಿಲಯದ ವಿಷಯ ತಜ್ಞರಿಗೆ ಕೃತಜ್ಞತೆಗಳು.

ಅನೀತಾ ರಾಂಪಾಲ್, ಪ್ರೊಫೆಸರ್, ಶಿಕ್ಷಣ ವಿಭಾಗ (ಸಿ.ಐ.ಇ), ದೆಹಲಿ ವಿಶ್ವವಿದ್ಯಾಲಯ, ದೆಹಲಿ; ಅರುಣ್ ಕಮಲ್, ಪ್ರೊಫೆಸರ್, ಪಾಟ್ನಾ ವಿಶ್ವವಿದ್ಯಾಲಯ, ಪಾಟ್ನಾ; ರಮಾಕಾಂತ್ ಅಗ್ನಿಹೋತ್ರಿ, ಪ್ರಾಧ್ಯಾಪಕರು, ಭಾಷಾಶಾಸ್ತ್ರ ವಿಭಾಗ, ದೆಹಲಿ ವಿಶ್ವವಿದ್ಯಾಲಯ, ದೆಹಲಿ; ರೋಹಿತ್ ಧನಕರ್, ನಿರ್ದೇಶಕರು, ದಿಗಂತರ್, ಜೈಪುರ; ಎಚ್.ಕೆ. ದಿವಾನ್, ಕಾರ್ಯಕ್ರಮ ನಿರ್ದೇಶಕರು, ವಿದ್ಯಾಭವನ ಸೊಸೈಟಿ, ರಾಜಸ್ಥಾನ; ರಾಜೇಶ್ ಸಚ್‌ದೇವ, ಪ್ರಾಧ್ಯಾಪಕರು, ಸಿ.ಐ. ಐ ಎಲ್., ಮೈಸೂರು; ಹಸನ್ ವಾರಿಸ್, ಮಾಜಿ ನಿರ್ದೇಶಕರು, ಎಸ್.ಸಿ.ಇ.ಆರ್. ಟಿ., ಪಾಟ್ನಾ; ಪ್ರಿಯದರ್ಶನ್, ಸುದ್ದಿ ಸಂಪಾದಕ, ಎನ್.ಡಿ.ಟಿ.ವಿ ಇಂಡಿಯಾ, ನವದೆಹಲಿ; ಅವಧೇಶ್ ಪ್ರಧಾನ್, ಪ್ರಾಧ್ಯಾಪಕರು, ಹಿಂದಿ ವಿಭಾಗ, ಕಾಶಿ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ; ಅಹ್ಮದ್ ಸಜ್ಜದ್, ಮಾಜಿ ಪ್ರೊಫೆಸರ್, ರಾಂಚಿ ವಿಶ್ವವಿದ್ಯಾಲಯ, ರಾಂಚಿ; ಶುಭಾ ರಾವ್, ಸಂಚಾಲಕರು, ಮಹಿಳಾ ಅಧ್ಯಯನ ಮತ್ತು ಅಭಿವೃದ್ಧಿ ಕೇಂದ್ರ, ಕಾಶಿ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ; ರಿಯಾಜ್ ಅಹ್ಮದ್, ಉಪಕುಲಪತಿ, ವಿದ್ಯಾಭವನ ಸೊಸೈಟಿ, ರಾಜಸ್ಥಾನ; ಪ್ರೇಂಪಾಲ್ ಶರ್ಮಾ, ಜಂಟಿ ಕಾರ್ಯದರ್ಶಿ, ರೈಲ್ ಭವನ, ರೈಲ್ವೆ ಸಚಿವಾಲಯ, ನವದೆಹಲಿ; ಸದಾನಂದ ಶಾಹಿ, ಪ್ರಾಧ್ಯಾಪಕರು, ಹಿಂದಿ ವಿಭಾಗ, ಕಾಶಿ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ; ಜ್ಞಾನದೇವ್ ಮಣಿ ತ್ರಿಪಾಠಿ, ಪ್ರಾಂಶುಪಾಲರು, ತಪೇಂದು ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಸ್ಟಡೀಸ್; ಎಸ್.ರಘುನಾಥನ್, ಮಾಜಿ ಶಿಕ್ಷಣ ಕಾರ್ಯದರ್ಶಿ, ದೆಹಲಿ ಸರ್ಕಾರ; ಅಪೂರ್ವಾನಂದ್, ಪ್ರೊಫೆಸರ್, ಹಿಂದಿ ವಿಭಾಗ, ದೆಹಲಿ ವಿಶ್ವವಿದ್ಯಾಲಯ; ರಾಜೇಶ್ ಭೂಷಣ್, ಕಾರ್ಯದರ್ಶಿ, ಮಾಹಿತಿ ಮತ್ತು ಪ್ರಸಾರ ಸಚಿವಾಲಯ, ಪಾಟ್ನಾ; ಶಾರದಾ ಕುಮಾರಿ, ಹಿರಿಯ ಉಪನ್ಯಾಸಕರು, ಎಸ್.ಸಿ.ಇ.ಆರ್.ಟಿ. ನವ ದೆಹಲಿ; ಉಷಾ ಶರ್ಮಾ, ರೀಡರ್, ಆರ್. ಐ.ಇ., ಅಜ್ಮೀರ್, ನೂತನ್ ಝಾ, ಶಿಕ್ಷಕಿ, ಮೀರಾಂಬಿಕಾ ವಿದ್ಯಾಲಯ, ನವ ದೆಹಲಿ; ಮಣೀಂದ್ರ ನಾಥ್ ಠಾಕೂರ್, ಸಹ ಪ್ರಾಧ್ಯಾಪಕರು, ಜೆ. ಎನ್ ಯು; ಪ್ರೊ. ಕೃಷ್ಣ ಕುಮಾರ್, ನಿರ್ದೇಶಕರು, ಎನ್.ಸಿ.ಇ.ಆರ್. ಟಿ, ನವದೆಹಲಿ; ರಾಮಜನ್ಮ ಶರ್ಮಾ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಭಾಷಾ ವಿಭಾಗ, ಎನ್.ಎಸ್. ಸಿ.ಇ.ಆರ್.ಟಿ, ನವದೆಹಲಿ; ಎ.ಕೆ. ಮಿಶ್ರಾ, ಪ್ರೊಫೆಸರ್, ಎನ್, ಶಿಲ್ಲಾಂಗ್; ಸಂಧ್ಯಾ ಸಿಂಗ್, ರೀಡರ್, ಭಾಷಾ ವಿಭಾಗ, ಎನ್.ಸಿ.ಇ.ಆರ್. ಟಿ, ನವದೆಹಲಿ; ಕೀರ್ತಿ ಕಪೂರ್, ಹಿರಿಯ ಉಪನ್ಯಾಸಕರು, ಎನ್.ಸಿ.ಇ.ಆರ್.ಟಿ, ನವದೆಹಲಿ ಇವರಿಗೆಲ್ಲಾ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಉತ್ತರ ಪ್ರದೇಶ ಮಂಡಳಿ, ಬಿಹಾರ, ಜಾರ್ಖಂಡ್, ಉತ್ತರಾಖಂಡ, ಗುಜರಾತ್, ಮಧ್ಯಪ್ರದೇಶ, ಛತ್ತೀಸ್‌ಗಢ, ಹರಿಯಾಣ, ಮಹಾರಾಷ್ಟ್ರ, ಕರ್ನಾಟಕ, ರಾಜಸ್ಥಾನ

ಮತ್ತು ದೆಹಲಿಯಿಂದ ಶಿಕ್ಷಕರು, ಶಿಕ್ಷಕ-ತರಬೇತುದಾರರು ಮತ್ತು ಪುಸ್ತಕದ ವಿವಿಧ ಹಂತಗಳಲ್ಲಿ ಸಹಾಯಕ್ಕಾಗಿ ರುಚಿ ಸೈನಿ ಹಾಗೂ ನರೇಂದ್ರ ವರ್ಮಾ, ಡಿ.ಟಿ.ಪಿ. ಆಪರೇಟರ್; ರಾಧಾ, ಕಾಪಿ ಎಡಿಟರ್, ಧನಂಜಯ್ ಸಿಂಹ ಸತ್ಯಾರ್ಥಿ, ಪ್ರಾಜೆಕ್ಟ್ ಫೆಲೋ ಇವರೆಲ್ಲರಿಗೂ ಸಹಾ ಕೃತಜ್ಞತೆಗಳು.

**ಪರಿಷ್ಕೃತ ಆವೃತ್ತಿ**

ಸಂಯೋಜನೆಗಾಗಿ ಡಾ. ಸಂಧ್ಯಾ ಸಿಂಹ , ಪ್ರಾಧ್ಯಾಪಕರು ಭಾಷಾ ಶಿಕ್ಷಣ ವಿಭಾಗ , ಎನ್. ಸಿ. ಇ. ಆರ್. ಟಿ.; ವಿಮರ್ಶೆಗಾಗಿ ಶ್ರೀ ಮದನ್ ಕಶ್ಯಪ್, ಕವಿಗಳು ಹಾಗೂ ಸಾಹಿತಿಗಳು, ಡಾ. ರಚನಾ ಸಿಂಹ, ಪ್ರಾಧ್ಯಾಪಕರು, ಹಿಂದೂ ಕಾಲೇಜ್, ದೆಹಲಿ ವಿಶ್ವವಿದ್ಯಾಲಯ, ಜಿತಿನ್ ಕುಮಾರ್(ಕನಿಷ್ಟ ಯೋಜನಾ ಸಹಾಯಕ); ನೀಲಂ ಕುಮಾರಿ(ಕನಿಷ್ಟ ಯೋಜನಾ ಸಹಾಯಕಿ) ಮತ್ತು ಅಮ್ಜದ್ ಹುಸೇನ್ (ಗ್ರಾಫಿಕ್ ಡಿಸೈನರ್) ಇವರೆಲ್ಲರ ಕೊಡುಗೆಯೂ ಇದೆ.

# ಪರಿವಿಡಿ

**ಮುನ್ನುಡಿ** (ಪರಿಷ್ಕರಿಸಿದ ಆವೃತ್ತಿ) **v**

ಮೊದಲ ಆವೃತ್ತಿ **vii**

**ಪೀಠಿಕೆ** **vii**

**1. ಶೈಕ್ಷಣಿಕ ದಾಖಲೆಗಳಲ್ಲಿ ಭಾಷೆ** **1-10**

- ಶಿಕ್ಷಣ ಆಯೋಗದ ವರದಿ: 1964-66 ರ ಶಾಲಾ ಪಠ್ಯಕ್ರಮ
- 1968 ರ ರಾಷ್ಟ್ರೀಯ ಶಿಕ್ಷಣ ನೀತಿ
- 1986 ರ ರಾಷ್ಟ್ರೀಯ ಶಿಕ್ಷಣ ನೀತಿ
- 1992 ರ ಅನುಷ್ಠಾನ ಕಾರ್ಯಕ್ರಮ(POA)
- 1988-2000 ರಾಷ್ಟ್ರೀಯ ಪಠ್ಯಕ್ರಮದ ನೆಲೆಗಟ್ಟು
- 2005 ರ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು
- 2020 ರ ರಾಷ್ಟ್ರೀಯ ಶಿಕ್ಷಣ ನೀತಿ

**2. ಭಾಷೆ ಮತ್ತು ತಿಳುವಳಿಕೆ** **11-18**

- ಮಗುವಿನ ತಿಳುವಳಿಕೆ ಮತ್ತು ಭಾಷೆ
- ತಿಳುವಳಿಕೆಯ ಆಧಾರವಾಗಿ ಭಾಷೆ
- ಭಾಷೆ ಮತ್ತು ಸಾಮಾಜಿಕ ಸಮಾನತೆ
- ಮಗುವಿನ ಗುರುತಿನ ಪ್ರಶ್ನೆ
- ಅರ್ಥಪೂರ್ಣ ಶಿಕ್ಷಣಕ್ಕಾಗಿ ಪ್ರಯತ್ನಗಳು

**3. ಬಹುಭಾಷೀಯತೆ** **19-28**

- ಬಹುಭಾಷೀಯತೆಯ ಉದ್ದೇಶ
- ಮಗುವಿನ ಭಾಷಾ ಸಾಮರ್ಥ್ಯ
- ಸಾರ್ವತ್ರಿಕ ವ್ಯಾಕರಣದ ಪರಿಕಲ್ಪನೆ
- ಬಹುಭಾಷೀಯತೆ ಮತ್ತು ಅಲ್ಪಸಂಖ್ಯಾತ ಹಾಗೂ ಬುಡಕಟ್ಟು ಭಾಷೆಗಳು
- ಬಹುಭಾಷೀಯತೆ ಮತ್ತು ದಕ್ಷಿಣ ಭಾರತೀಯ ಭಾಷೆಗಳು
- ಬಹುಭಾಷೀಯತೆ ಮತ್ತು ಇಂಗ್ಲೀಷ್ ತರಗತಿ
- ಬಹುಭಾಷಾ ತರಗತಿ
- ಬಹುಭಾಷೀಯತೆ ಸವಾಲುಗಳು

**4. ಎಲ್ಲಾ ವಿಷಯಗಳ ಕೇಂದ್ರ- ಭಾಷೆ** **29-43**

- ಇತಿಹಾಸದ ಪುಟಗಳ ಮೂಲಕ
- ಎಲ್ಲಾ ವಿಷಯಗಳ ಅಧ್ಯಾಪಕರು ಭಾಷೆಯ ಅಧ್ಯಾಪಕರೇ
- ಆಲೋಚನಾ ಸ್ವಾತಂತ್ರ್ಯ ಹಾಗೂ ಮೌಲ್ಯಗಳ ಪ್ರಶ್ನೆ
- ಭಾಷೆ ಮತ್ತುಬೇರೆ ವಿಷಯಗಳು
- ತಾಂತ್ರಿಕ ಶಬ್ದಗಳು ಹಾಗೂ ಮಕ್ಕಳ ತಿಳುವಳಿಕೆ
- ಉನ್ನತ ಶಿಕ್ಷಣ ಹಾಗೂ ಇತರ ವಿಷಯಗಳು

**5. ಭಾಷೆಗಳಲ್ಲಿ ಸಂಭಾಷಣೆ** **44-49**

(ಉಲ್ಲೇಖ: ಆಂಗ್ಲ ಹಾಗೂ ಹಿಂದಿ)

- ಆಂಗ್ಲ ಮತ್ತು ಹಿಂದಿ ಭಾಷೆಗಳ ನಡುವಿನ ಸಂಬಂಧ
- 1967ರ ನಂತರ
- 1987 ರಲ್ಲಿ
- ಬದಲಾವಣೆಯ ಹೊಸ ಕಾಲಘಟ್ಟ
- ಆಂಗ್ಲ ಭಾಷೆಯ ಬೆಳವಣಿಗೆಯ ಇತಿಹಾಸ
- ಹೊಸ ಶಬ್ದಗಳ ಆವಿಷ್ಕಾರದ ಅವಶ್ಯಕತೆ

**6. ಸಮಸ್ಯೆಗಳು ಹಾಗೂ ಸವಾಲುಗಳು** **50-57**

- ಶಿಕ್ಷಕನ ತಯಾರಿ
- ಸಾಮಾಜಿಕ ತಯಾರಿ
- ಆಡಳಿತಾತ್ಮಕ ತಯಾರಿ

**ಅನುಬಂಧ-1** **58-61**

**ಉಲ್ಲೇಖ** **62-63**

# 1

# ಶೈಕ್ಷಣಿಕ ದಾಖಲೆಗಳಲ್ಲಿ ಭಾಷೆ



- **ಶಿಕ್ಷಣ ಆಯೋಗದ ವರದಿ: 1964-66 ರ ಶಾಲಾ ಪಠ್ಯಕ್ರಮ**
- **1968 ರ ರಾಷ್ಟ್ರೀಯ ಶಿಕ್ಷಣ ನೀತಿ**
- **1986 ರ ರಾಷ್ಟ್ರೀಯ ಶಿಕ್ಷಣ ನೀತಿ**
- **1992ರ ಕ್ರಿಯೆಯ ಕಾರ್ಯಕ್ರಮ(POA)**
- **1988-2000 ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು**
- **2005 ರ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು**
- **2020 ರ ರಾಷ್ಟ್ರೀಯ ಶಿಕ್ಷಣನೀತಿ**

"ನಮಗೆರಡು ತುಟಿಗಳಿದ್ದು ಅವುಗಳು ಪರಸ್ಪರ ಮಿಲನವಾಗುತ್ತದೆ. ಇವು ನಾಲಿಗೆಯಿಂದೊಡಗೂಡಿ ಒಂದೇ ಲಯದಲ್ಲಿ ಮೇಳೈಸಿದಾಗ ಮಾತ್ರ ಭಾಷೆಯು ರೂಪುಗೊಳ್ಳುತ್ತದೆ. ಇದರಲ್ಲಿ ಯಾವುದಾದರೂ ಒಂದರ ಚಲನೆಯಾಗಿ ಮತ್ತೊಂದರ ಸ್ಪಂದನೆಯಿಲ್ಲದಿದ್ದಾಗ ಸಂವಾದವು ಅಸಂಭವವಾಗುತ್ತದೆ". (ಭಾಷೆಯ ಮೇಲೆ ಒಬ್ಬ ಕವಿಯ ನೋಟ).1971 ರ ಅಂಕಿ ಅಂಶದ ಪ್ರಕಾರ ನಮ್ಮ ದೇಶದಲ್ಲಿ ಸುಮಾರು 1952 ಭಾಷೆಗಳಿದ್ದು ಅವುಗಳಲ್ಲಿ 47 ಭಾಷೆಗಳು ಮಾತ್ರ ಮಕ್ಕಳ ಗ್ರಹಿಕೆಯ ಮಾಧ್ಯಮವಾಗಿದೆ (ಮೂಲ: 2005ರ ಭಾರತೀಯ ಭಾಷೆಗಳ ಶಿಕ್ಷಣ). ಇನ್ನುಳಿದ ಭಾಷೆಗಳು ಈಗಲೂ ಸಹ ಮಾತಿಲ್ಲದೆ ಮೌನವಾಗಿ ಉಳಿದು ಬಿಟ್ಟಿವೆ. ಕೆಲವು ಭಾಷೆಗಳಂತೂ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಈ ಭಾಷೆಗಳು ಅವನತಿ ಹೊಂದಲು ಕಾರಣ ಏನಿರಬಹುದು? ಇದು ಕೇವಲ ಕಲಿಯುವ ಹಾಗೂ ಕಲಿಸುವ ಮಾಧ್ಯಮವಾಗಿರದ ಕಾರಣ ಈ ಭಾಷೆಗಳು ನಾಶವಾಗುತ್ತಿವೆಯೋ? ಅಥವಾ ಈ ಭಾಷೆಗಳ ಅವನತಿ ಹಲವಾರು ಸಂಸ್ಕೃತಿಗಳ ನಾಶ ಹಾಗೂ ಕೋಟ್ಯಾನುಕೋಟಿ ಮಕ್ಕಳು ತಮ್ಮ ಮಾತೃಭಾಷೆಯನ್ನಾಡದೆ ಶಾಶ್ವತವ ಮೌನಕ್ಕೆ ಜಾರಬೇಕೆಂಬ ಸಂಕೇತವೇ? ಇದು ಯೋಚನೆ ಮಾಡಲೇಬೇಕಾದ ಸಂಗತಿ!

"ಯಾವುದೇ ಭಾಷೆಯು ಪರಸ್ಪರ ಪೂರಕವಾದ ಭಾಷೆಗಳ ಜೊತೆಗೂಡಿ ಬೆಳೆಯುತ್ತದೆ" ಎನ್ನುವುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕಿದೆ. ಈಗ ಹಿಂದಿಯ ಬಗ್ಗೆ ಮಾತ್ರ ಹೇಳುವುದಾದರೆ, ಹಿಂದಿ ಹಲವು ಪ್ರಾದೇಶಿಕ ಭಾಷೆಗಳಿಂದ ಕೂಡಿದೆ ಎಂದು ಹೇಳಬಹುದು. ಮಕ್ಕಳು ತಮ್ಮದೇ ಆದ ಭಾಷೆಯಲ್ಲಿ ಹಾಗೂ ಎಲ್ಲಾ ಒಡನಾಡಿ ಭಾಷೆಗಳ ಜೊತೆಯಲ್ಲಿ ಮೇಳೈಸುವ ಅವರ ಸೊಗಡಿನ ಚಿಲಿಪಿಲಿಗುಟ್ಟುವ ಭಾಷೆಯನ್ನು ಕೇಳಬೇಕಾಗಿದೆ. ತಮ್ಮೆರಡೂ ತುಟಿಗಳನ್ನು ಜೊತೆಗೂಡಿಸಲು ನಮ್ಮ ಅನೇಕ ಮೂಕ ಭಾಷೆಗಳು ಕಾತರದಿಂದ ಕಾಯುತ್ತಿವೆ.

(ಮಕ್ಕಳ ತಿಳುವಳಿಕೆ ಮತ್ತು ಭಾಷೆಯ ಸಾಮರಸ್ಯ ಆಗಬೇಕಿದೆ) ಮತ್ತು ಇವುಗಳು ಇತರ ಭಾಷೆಗಳಂತೆ ಪ್ರಜಾಪ್ರಭುತ್ವದ ಸ್ಥಾನ ಪಡೆಯಬೇಕಿದೆ.

ಸ್ವಾತಂತ್ರ್ಯಾ ನಂತರದ ಎಲ್ಲಾ ಹಿಂದಿನ ಶಿಕ್ಷಣ ಸಂಬಂಧಿತ ದಾಖಲೆಗಳಲ್ಲಿ ಮಾತೃಭಾಷೆಯನ್ನು ವಿಶೇಷವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ತಿಳುವಳಿಕೆಯ/ಅರ್ಥಮಾಡಿಕೊಳ್ಳುವ ಮಾಧ್ಯಮವನ್ನಾಗಿ ಮಾಡಲು ಹೇಳಲಾಗಿದೆ ಮತ್ತು ಮಕ್ಕಳ ತಿಳುವಳಿಕೆಯ ಪ್ರಕ್ರಿಯೆಯಲ್ಲಿ ಮಾತೃಭಾಷೆಯೇ ಅವರ ಮುಕ್ತ ಅಭಿವ್ಯಕ್ತಿಗೆ ಸಹಾಯಕವಾಗಿರುವುದರಿಂದ ಮಾತೃಭಾಷೆಗೇ ಪ್ರಾಮುಖ್ಯತೆ ನೀಡಲಾಗಿದೆ. ಇದರ ಕುರಿತಾಗಿ ವಿವಿಧ ಶಿಕ್ಷಣ ದಾಖಲೆಗಳು ನೀಡಿದ ಭಾಷಾ ಸಲಹೆಗಳ ಬಗ್ಗೆ ಕೆಳಗೆ ವಿವರಣೆ ನೀಡಲಾಗಿದೆ.

## ಶಿಕ್ಷಣ ಆಯೋಗದ ವರದಿ : 1964-66 ರ ಶಾಲಾ ಪಠ್ಯಕ್ರಮ

ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಾತೃಭಾಷೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಹೇಗೆ? ಹಾಗೂ ಅನಕ್ಷರತೆಯನ್ನು ಹೋಗಲಾಡಿಸುವುದು ಹೇಗೆ? ಎನ್ನುವ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ. ಮುಂದುವರಿದ ದೇಶಗಳಲ್ಲಿ, ಔದ್ಯೋಗಿಕ ದೃಷ್ಟಿಯಿಂದ ಪ್ರಾಥಮಿಕ ಶಿಕ್ಷಣದ ಸಂಪೂರ್ಣ ಪಠ್ಯಕ್ರಮವು ಒಂದೇ ಭಾಷೆಯ ಅಧ್ಯಯನದ ಆಧಾರದ ಮೇಲೆಯೇ ನಿಂತಿದೆ. ಅಲ್ಲದೇ ಈ ದೇಶಗಳಲ್ಲಿ, ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿ ಹಾಗೂ ಸಮೃದ್ಧಿಯ ನಂತರವೇ ಪ್ರಾಥಮಿಕ ಹಂತದಲ್ಲಿ ಎರಡನೇ ಭಾಷೆಯನ್ನು ಪರಿಚಯಿಸಲಾಗಿದೆ.

* * *

ಇಂಗ್ಲಿಷ್‌ನಂತಹ ವಿದೇಶಿ ಭಾಷೆಯನ್ನು ಕಲಿಯುವ ಮೊದಲು ಮಾತೃಭಾಷೆಯ ಮೇಲೆ ಸಂಪೂರ್ಣ ಹಿಡಿತವನ್ನು ಸಾಧಿಸಬೇಕು ಎನ್ನುವ ಮಾತಿನ ಮೇಲೆ ನಮಗೆಲ್ಲರಿಗೂ ವಿಶ್ವಾಸವಿದೆ. ಇದರ ಜೊತೆಗೆ ಪ್ರಾಥಮಿಕ ತರಗತಿಗಳಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ದಾಖಲಾಗುತ್ತಾರೆ; ಇಂಗ್ಲಿಷ್ ಮಾಧ್ಯಮದ ಪರಿಣಾಮಕಾರಿ ಬೋಧನೆಗೆ ಹೆಚ್ಚಿನ ಸಂಖ್ಯೆಯ ತರಬೇತಿ ಪಡೆದ ಶಿಕ್ಷಕರ ಅಗತ್ಯವಿರುತ್ತದೆ; ಆದರೆ ಸರಿಯಾದ ತರಭೇತಿ ಪಡೆದ ಶಿಕ್ಷಕರು ಸಿಗುವುದು ಬಹಳ ಕಷ್ಟದ ಕೆಲಸ. ಆಕಸ್ಮಿಕವಾಗಿ ಅದು ಲಭ್ಯವಾದರೂ, ಇದಕ್ಕಾಗಿ ಮೀಸಲಿಟ್ಟ ಹಣಕ್ಕಿಂತ ಹೆಚ್ಚಿನ ಹೊರೆಯಾಗುತ್ತದೆ. ನಮ್ಮ ಅಭಿಪ್ರಾಯದಲ್ಲಿ ಇದು ದೊಡ್ಡ ಸವಾಲಾಗಿದೆ. ಈ ವ್ಯರ್ಥ ಪ್ರಯತ್ನದಲ್ಲಿ ಇಂಗ್ಲಿಷ್‌ನ ಮಟ್ಟ ಸುಧಾರಿಸುವ ಬದಲಿಗೆ ಇದರ ಗುಣಮಟ್ಟ ಕೆಳಗೆ ಜಾರುವ ಸಂಭವವೇ ಹೆಚ್ಚು. ಆದ್ದರಿಂದ ನಾವು ಶಿಫಾರಸ್ಸು ಮಾಡುವುದೇನಂದರೆ, ವಿದೇಶಿ ಭಾಷೆಯ ರೀತಿಯಲ್ಲಿ ಇಂಗ್ಲಿಷ್ ಭಾಷೆಯ ಅಧ್ಯಯನ ಕೇವಲ ಕೆಲವು ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಿ, ಇನ್ನುಳಿದೆಲ್ಲಾ ಕಡೆ ಐದನೇ ತರಗತಿಯ ಮೊದಲು ಇಂಗ್ಲಿಷ್ ಬೋಧನೆ ಮಾಡಬಾರದು.

*— ಶಿಕ್ಷಣ ಆಯೋಗದ ವರದಿ, /1964-66, ಪುಟ 2/8-29*

## 1968 ರ ರಾಷ್ಟ್ರೀಯ ಶಿಕ್ಷಣ ನೀತಿ-

ಭಾರತೀಯ ಭಾಷೆಗಳು ಹಾಗೂ ಸಾಹಿತ್ಯದ ಉತ್ತಮ ಬೆಳವಣಿಗೆ ಮತ್ತು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆ ಒಂದಕ್ಕೊಂದು ಪರಸ್ಪರ ಅವಲಂಬಿತವಾಗಿವೆ. ಇವುಗಳ ಕೊರತೆಯಿಂದ, ಜನರಲ್ಲಿ ಸೃಜನಶೀಲ ಶಕ್ತಿಯು

ಕುಂಠಿತವಾಗುವುದಲ್ಲದೆ ಶಿಕ್ಷಣದ ಮಟ್ಟವೂ ಸಹಾ ಬೆಳವಣಿಗೆಯಾಗುವುದಿಲ್ಲ. ಜ್ಞಾನವು ಜನರಿಗೆ ತಲುಪದೇ, ವಿದ್ಯಾವಂತರು ಮತ್ತು ಸಾರ್ವಜನಿಕರ ನಡುವಿನ ಅಂತರವು ಅಂತರವಾಗಿಯೇ ಉಳಿಯುತ್ತದೆ; ಜೊತೆಗೆ ಅಂತರ ಹೆಚ್ಚಾಗದಿದ್ದರೂ ಕಡಿಮೆಯಂತೂ ಆಗುವುದಿಲ್ಲ. ಈಗಾಗಲೇ ಹಲವು ಭಾಷೆಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದಲ್ಲಿ ಮಾಧ್ಯಮವಾಗಿ ಬಳಕೆಯಾಗುತ್ತಿದೆ. ಉನ್ನತ ಶಿಕ್ಷಣದಲ್ಲೂ ಇದನ್ನು ಜಾರಿಗೊಳಿಸುವ ಅವಶ್ಯಕತೆಯಿದೆ.

**ಹಿಂದಿ:** ಹಿಂದಿಯ ಅಭಿವೃದ್ಧಿಗೆ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಬೇಕಿದೆ. 351 ನೇ ವಿಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂದಿ ಭಾಷೆಯನ್ನು ಸಂಪರ್ಕ ಭಾಷೆಯಲ್ಲದೆ ಭಾರತದ ಒಟ್ಟಾರೆ ಸಂಸ್ಕೃತಿಯನ್ನು ಪ್ರತಿನಿಧಿಸುವ ಭಾಷೆಯನ್ನಾಗಿ ಬೆಳೆಸುವ ಅವಶ್ಯಕತೆ ಇದೆ. ಹಿಂದಿಯೇತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಉನ್ನತ ಶಿಕ್ಷಣದಲ್ಲಿ ಹಿಂದಿ ಭಾಷೆ ಶಿಕ್ಷಣ ಮಾಧ್ಯಮವಾಗಿದೆಯೋ ಆ ಸಂಸ್ಥೆಗಳಿಗೆ ಉತ್ತೇಜನ ನೀಡಬೇಕು. (ಸೂಚನೆ: ಈ ವಿಷಯ ಎಲ್ಲಾ ಭಾರತೀಯ ಭಾಷೆಗಳಿಗೂ ಅನ್ವಯವಾಗುತ್ತದೆ)

**ಅಂತರರಾಷ್ಟ್ರೀಯ ಭಾಷೆಗಳು:** ಇಂಗ್ಲಿಷ್ ಮತ್ತು ಇತರ ಅಂತರರಾಷ್ಟ್ರೀಯ ಭಾಷೆಗಳ ಅಧ್ಯಯನದಲ್ಲಿ ವಿಶೇಷ ಗಮನ ಹರಿಸುವ ಅಗತ್ಯವಿದೆ. ಅದರಲ್ಲೂ ವಿಶೇಷವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದ ಜ್ಞಾನವು ನಿರಂತರವಾಗಿ ಬೆಳೆಯುತ್ತಲೇ ಇದೆ. ಈ ಬೆಳವಣಿಗೆಯೊಂದಿಗೆ, ಭಾರತವು ಜೊತೆ-ಜೊತೆಗೆ ಸಾಗುವುದಲ್ಲದೆ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುವುದು ಅತ್ಯವಶ್ಯಕ. ಈ ಉದ್ದೇಶಕ್ಕಾಗಿ ಇಂಗ್ಲಿಷ್ ಜ್ಞಾನವನ್ನು ವಿಶೇಷ ರೀತಿಯಲ್ಲಿ ಬಲಪಡಿಸಬೇಕಿದೆ.

*— 1968 ರ ರಾಷ್ಟ್ರೀಯ ಶಿಕ್ಷಣ ನೀತಿ-ಪುಟ 3-4*

1968 ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿಯೂ ತ್ರಿಭಾಷಾ ಸೂತ್ರದ ಚರ್ಚೆಗೆ ಒತ್ತು ನೀಡಲಾಗಿದೆ. ಇದು 2005 ರ ರಾಷ್ಟ್ರೀಯ ಪಠ್ಯಕ್ರಮದ ನೆಲೆಟ್ಟಿನ ಪ್ರಕಾರ ಈ ಕೆಳಗಿನಂತೆ ಹೇಳಲಾಗಿದೆ-

**ತ್ರಿಭಾಷಾ ಸೂತ್ರ**

- ಶಾಲೆಯಲ್ಲಿ ಕಲಿಸಬೇಕಾದ ಮೊದಲ ಭಾಷೆ- ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಾಗಿರಬೇಕು.
- **ದ್ವಿತೀಯ ಭಾಷೆ**
  - ಹಿಂದಿ ಮಾತನಾಡುವ ರಾಜ್ಯಗಳಲ್ಲಿ ಎರಡನೇ ಭಾಷೆಯಾಗಿ ಯಾವುದೇ ಆಧುನಿಕ ಭಾಷೆ ಅಥವಾ ಇಂಗ್ಲೀಷ್ ಮತ್ತು ಹಿಂದಿ ಮಾತನಾಡದ ರಾಜ್ಯಗಳಲ್ಲಿ ಎರಡನೇ ಭಾಷೆಯಾಗಿ ಹಿಂದಿ ಅಥವಾ ಇಂಗ್ಲಿಷ್ ಆಗುತ್ತದೆ.
- **ಮೂರನೇ ಭಾಷೆ**
  - ಹಿಂದಿ ಮಾತನಾಡುವ ರಾಜ್ಯಗಳಲ್ಲಿ ಮೂರನೇ ಭಾಷೆಯಾಗಿ ಇಂಗ್ಲಿಷ್ ಅಥವಾ ಆಧುನಿಕ ಭಾರತೀಯ ಭಾಷೆಯಾಗಿರುತ್ತದೆ, ಅಂದರೆ ಯಾವುದನ್ನು ಎರಡನೇ ಭಾಷೆಯಾಗಿ ಕಲಿಸಲಾಗುತ್ತಿಲ್ಲವೋ ಆ ಭಾಷೆ.
  - ಹಿಂದಿಯೇತರ ಮಾತನಾಡುವ ರಾಜ್ಯಗಳಲ್ಲಿ ಮೂರನೇ

ಭಾಷೆಯಾಗಿ ಇಂಗ್ಲಿಷ್ ಅಥವಾ ಯಾವ ಆಧುನಿಕ ಭಾರತೀಯ ಭಾಷೆಯನ್ನು ಎರಡನೇ ಭಾಷೆಯಾಗಿ ಕಲಿಸಲಾಗುತ್ತಿಲ್ಲವೋ ಅದನ್ನು ಕಲಿಸಬೇಕಿದೆ.

*- ಭಾರತೀಯ ಭಾಷೆಗಳ ಬೋಧನಾ ಸ್ಥಾನ ಕಾಗದ ಪುಟ13*

## 1986 ರ ರಾಷ್ಟ್ರೀಯ ಶಿಕ್ಷಣ ನೀತಿ

1968 ರ ಶಿಕ್ಷಣ ನೀತಿಯ ಆಧಾರದ ಮೇಲೆ 1986 ರ ಶಿಕ್ಷಣ ನೀತಿಯು ಭಾಷಾ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿದೆ. ಈ ನೀತಿಯು ಉನ್ನತ ಶಿಕ್ಷಣದ ಹಂತದಲ್ಲಿ ಪ್ರಾದೇಶಿಕ ಭಾಷೆಯನ್ನೇ ಮಾಧ್ಯಮವಾಗಿ ಬಳಕೆ ಮಾಡುವಂತೆ ಒತ್ತಿ ಹೇಳಿದೆ; ತ್ರಿಭಾಷ ಸೂತ್ರವನ್ನು ಅತ್ಯಂತ ಕಟ್ಟುನಿಟ್ಟಾಗಿ ಜಾರಿಗೊಳಿಸುವುದಲ್ಲದೇ ಶಿಕ್ಷಣದ ಪ್ರತಿ ಹಂತದಲ್ಲೂ ಮಕ್ಕಳ ಭಾಷೆಯ ವಿಕಾಸದತ್ತ ಗಮನ ಹರಿಸಬೇಕು. ಇಂಗ್ಲಿಷ್ ಮತ್ತು ಇತರ ವಿದೇಶಿ ಭಾಷೆಗಳನ್ನು ಅಧ್ಯಯನ ಮಾಡಲು ಅನುಕೂಲಮಾಡಿಕೊಡಬೇಕಿದೆ; ಸಂವಿಧಾನದ 351ನೇ ವಿಧಿಯಲ್ಲಿ ಪ್ರಸ್ತಾಪಿಸಿದಂತೆ ಹಿಂದಿಯನ್ನು ಸಂಪರ್ಕ ಭಾಷೆಯಾಗಿ ಬೆಳೆಸಬೇಕಿದೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಪುಸ್ತಕಗಳು ಅನುವಾದ ಕಾರ್ಯಕ್ಕೆ ಮತ್ತು ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಿದೆ.

*— 1992 ರ ಕ್ರಿಯಾ ಕಾರ್ಯಕ್ರಮ- ಪುಟ 94*

1986 ರ ನೀತಿ ಅನುಷ್ಠಾನದ ಸಲಹೆಗಳಲ್ಲಿ ಭಾರತೀಯ ಭಾಷೆಗಳ ಅಭಿವೃದ್ಧಿಗೆ ಸಂಬಂಧಿಸಿದ ಕೆಲವು ಮಹತ್ವಪೂರ್ಣ ಸಲಹೆಗಳನ್ನು ಕೊಡಲಾಗಿದೆ.

1. ಆಧುನಿಕ ಭಾರತೀಯ ಭಾಷೆಗಳಲ್ಲಿ ಓದುವ ಸಾಮಗ್ರಿಗಳು/ ಉಲ್ಲೇಖಿತ ಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸಬೇಕಿದೆ.
2. ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ತರಬೇತಿ ಕೋರ್ಸುಗಳನ್ನು ನಡೆಸಬೇಕು.
3. ಇಂಗ್ಲಿಷ್‌ನಿಂದ ಭಾರತೀಯ ಭಾಷೆಗಳಿಗೆ ಪಠ್ಯಪುಸ್ತಕಗಳು ಮತ್ತು ಉಲ್ಲೇಖ ಪುಸ್ತಕಗಳ ಅನುವಾದ ಮಾಡಬೇಕು. ಮುಂದೆ ಆಗಬೇಕಾದ ಕಾರ್ಯಗಳ ಬಗ್ಗೆ ನಿರಂತರ ನಿಗಾ ವಹಿಸಬೇಕಿದೆ.

ತಿಳುವಳಿಕೆಯ/ಗ್ರಹಿಕೆಯ ಮಾಧ್ಯಮದ ದೃಷ್ಟಿಕೋನದಿಂದಲೂ ಈ ಸಲಹೆಗಳನ್ನು ಗಮನಿಸುವುದು ಯೋಗ್ಯವಾಗಿದೆ.

## ಪಟ್ನಾಯಕ್- 1986 (ಅ)

- ಮಾಧ್ಯಮಿಕ ಅಥವಾ ಉನ್ನತ ಶಾಲಾ ಶಿಕ್ಷಣದಲ್ಲಿ ಕ್ರಮೇಣ ಬೋಧನಾ ಮಾಧ್ಯಮವು ಪ್ರಾದೇಶಿಕ ಭಾಷೆ /ರಾಜ್ಯ ಮಟ್ಟದ ಭಾಷೆ / ಹಿಂದಿ /ಇಂಗ್ಲಿಷ್ ಭಾಷೆಯಾಗಬಹುದು.
- ನಮ್ಮ ಪ್ರಕಾರ, ಪ್ರಾಥಮಿಕ ಶಿಕ್ಷಣವು ಮುಖ್ಯವಾಗಿ ಭಾಷೆಯ ಶಿಕ್ಷಣವಾಗಿದೆ. ಆದ್ದರಿಂದ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯನ್ನೂ ಕಡ್ಡಾಯ ವಿಷಯವಾಗಿ ಕಲಿಸಬೇಕು.
- ಮನುಷ್ಯನಿಗೆ ತನ್ನ ಬಾಲ್ಯದಲ್ಲಿ ಹಲವು ಭಾಷೆಗಳನ್ನು ಕಲಿಯುವ ಅಪಾರ

ಸಾಮರ್ಥ್ಯವಿರುತ್ತದೆ. ಒಂದು ವೇಳೆ ಸಮರ್ಪಕ ಸೌಲಭ್ಯಗಳು ಇದ್ದಾಗ ಮಾತ್ರ ಪ್ರಾಥಮಿಕ ಹಂತದಲ್ಲಿ ಇಂಗ್ಲಿಷನ್ನೂ ಕೂಡ ಕಲಿಸಬಹುದು. ಬಹು ಭಾಷೆಗಳ ಬಳಕೆಯ ಸನ್ನಿವೇಷದಲ್ಲಿ ಕೆಲವು ವರ್ಷ ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು ನೀಡಿ ಕಲಿಸಬೇಕಿದೆ. ಜನ ಸಾಮಾನ್ಯರ ತಿಳುವಳಿಕೆಯ ವಿರೋಧಭಾಸವಾಗಿಯೇ, ಭಾಷೆಗಳು ಒಂದರ ಜೊತೆಗೆ ಮತ್ತೊಂದು ಬೆಳವಣಿಗೆಯಾಗುತ್ತವೆ.

- ತ್ರಿಭಾಷ ಸೂತ್ರದಲ್ಲಿ ಕನಿಷ್ಠ ಮೂರು ಭಾಷೆಗಳು ಇರಬೇಕು ಎಂದು ತಿಳಿಸಿದೆ. ಈ ಸೂತ್ರದ ಮೇಲೆ ಯಾವುದೇ ಗರಿಷ್ಟ ಮಿತಿ ಇಲ್ಲ. ಆಧುನಿಕ ಭಾರತೀಯ ಭಾಷೆಯಾಗಿ ಸಂಸ್ಕೃತವನ್ನು ಕಲಿಸಬೇಕಿದೆ. ಇಲ್ಲಿ ಇದರ ಸ್ವಭಾವ ಶಾಸ್ತ್ರೀಯ ಸಂಸ್ಕೃತಕ್ಕಿಂತ ಬಹಳ ಭಿನ್ನವಾಗಿರಬೇಕಿದೆ.
- ಶಾಸ್ತ್ರೀಯ ಮತ್ತು ವಿದೇಶಿ ಭಾಷೆಗಳನ್ನು ಅದರದೇ ಆದ ರೀತಿಯಲ್ಲಿ ಕಲಿಸುವುದರಿಂದ ಆಯಾ ಭಾಷೆಯ ವ್ಯಾಕರಣದ ಸಮಸ್ಯೆಗಳನ್ನು ಅರಿಯುವುದರ ಜೊತೆಗೆ ಆಯಾ ಸಂಪ್ರದಾಯಗಳನ್ನು ಹಾಗೂ ಸಂಸ್ಕೃತಿಗಳನ್ನು ಜನರಿಗೆ ತಲುಪಿಸಲು ಸಹಾಯ ಮಾಡುತ್ತದೆ.

*ಭಾರತೀಯ ಭಾಷೆಗಳ ಶಿಕ್ಷಣ-ಸ್ಥಾನ ಕಾಗದ, ಪುಟ1*

## 1992 ರ ಕ್ರಿಯಾ ಕಾರ್ಯಕ್ರಮ

## ವ್ಯಾವಹಾರಿಕ ತ್ರಿಭಾಷಾ ಸೂತ್ರದ ಆಧಾರ

ವ್ಯಾವಹಾರಿಕ ತ್ರಿಭಾಷಾ ಸೂತ್ರವನ್ನು ರೂಪಿಸಲು ಈ ಕೆಳಗಿನ ಮಾರ್ಗಸೂಚಿಗಳು ಸಹಾಯ ಮಾಡುತ್ತವೆ.

1. ಎಲ್ಲಿಯವರೆಗೆ ಇಂಗ್ಲಿಷ್ ಭಾಷೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಮುಖ್ಯ ಮಾಧ್ಯಮ ಮತ್ತು ಅನೇಕ ರಾಜ್ಯಗಳಲ್ಲಿ ಆಡಳಿತ ಭಾಷೆಯಾಗಿ ಉಳಿಯುತ್ತದೆಯೋ, ಅಲ್ಲಿಯವರೆಗೆ ಅದಕ್ಕೆ ಉನ್ನತ ಸ್ಥಾನ ಸಿಗುತ್ತಲೇ ಇರುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಪ್ರಾಂತೀಯ ಭಾಷೆಗಳು ಮಾಧ್ಯಮವಾದ ನಂತರವೂ, ಉನ್ನತ ಶಿಕ್ಷಣದಲ್ಲಿ ಇಂಗ್ಲಿಷ್ ನ ವ್ಯಾವಹಾರಿಕ ಜ್ಞಾನವು ಎಲ್ಲಾ ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾಗಿದೆ ಅಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಬಯಸುವವರಿಗೆ ಅದರಲ್ಲಿ ಸಾಕಷ್ಟು ಅರ್ಹತೆ ಹೊಂದಿರುವುದು ಅತ್ಯವಶ್ಯಕವಾಗಿರುತ್ತದೆ.
2. ಶಾಲೆಯಲ್ಲಿ ಯಾವುದೇ ಭಾಷೆಯ ಅಧ್ಯಯನದಲ್ಲಿ ಎಷ್ಟು ಯೋಗ್ಯತೆಯನ್ನು ಗಳಿಸಬಹುದು?ಈ ಮಾತು ಕೇವಲ ಒಂದು ಭಾಷೆ ಎಷ್ಟು ವರ್ಷಗಳು ಕಲಿಸಲಾಗುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುವುದಿಲ್ಲ, ಆದರೆ ವಿದ್ಯಾರ್ಥಿಗಳ ಮುಂದೆ ಯಾವ ಪ್ರೇರಣೆಯಿದೆ, ಭಾಷೆಯನ್ನು ಯಾವ ಅವಸ್ಥೆಯಲ್ಲಿ ಕಲಿಯಲಾಗುತ್ತಿದೆ ಮತ್ತು ಲಭ್ಯವಿರುವ ಶಿಕ್ಷಕರು ಮತ್ತು ಬೋಧನೆಯ ವಿಧಾನ ಮತ್ತು ಆ ವಿಧಾನಗಳು ಯಾವುವು? ಸೂಕ್ತ ಸೌಲಭ್ಯಗಳ ಅನುಪಸ್ಥಿತಿಯಲ್ಲಿ, ದೀರ್ಘಕಾಲದವರೆಗೆ ಭಾಷೆಯನ್ನು ಕಲಿಸುವುದರಿಂದ ಉತ್ತಮ ಫಲಿತಾಂಶವು ಹೊರಬರುವುದಿಲ್ಲ. ಅನುಕೂಲಕರ ಪರಿಸ್ಥಿತಿಯಲ್ಲಿ ಅಲ್ಪಾವಧಿಯಲ್ಲಿಯೂ ಸಹ ಒಳ್ಳೆಯ ಫಲಿತಾಂಶ ಕಾಣಬಹುದಾಗಿದೆ. ತುಂಬಾ ಚಿಕ್ಕ ವಯಸ್ಸಿನಲ್ಲೇ ಮಗುವಿದ್ದಾಗಲೇ ಎರಡನೇ ಭಾಷೆಯನ್ನು ಕಲಿಸುವ ಪರವಾಗಿ ವಾದಗಳನ್ನು ಮಾಡಬಹುದು,

ಆದರೆ ನಮ್ಮ ಅಭಿಪ್ರಾಯದಂತೆ ಪ್ರಾಥಮಿಕ ಶಾಲೆಗಳಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ನೀಡಲು ಅರ್ಹ ಶಿಕ್ಷಕರನ್ನು ನೇಮಿಸುವುದು ತುಂಬಾ ಕಷ್ಟಕರವಾದ ಕೆಲಸ.

3. ಹಿಂದಿ ಅಥವಾ ಆಂಗ್ಲ ಭಾಷೆಯನ್ನು ಯಾವ ಹಂತದಿಂದ ಎರಡನೇ ಭಾಷೆಯಾಗಿ ಪ್ರಾರಂಭಿಸಬೇಕು? ಮತ್ತು ಅದನ್ನು ಎಷ್ಟು ಸಮಯದವರೆಗೆ ಕಲಿಸಬೇಕು? ಇದು ಸ್ಥಳೀಯ ಪ್ರೇರಣೆಯನ್ನು ಹಾಗೂ ಅವಶ್ಯಕತೆಯನ್ನು ಅವಲಂಬಿಸಿರುತ್ತದೆ ಮತ್ತು ಇದನ್ನು ಪ್ರತಿ ರಾಜ್ಯದ ವಿವೇಚನೆಗೆ ಬಿಡಬೇಕು.
4. ಯಾವುದೇ ಹಂತದಲ್ಲೂ ನಾಲ್ಕು ಭಾಷೆಗಳ ಅಧ್ಯಯನ ಅನಿವಾರ್ಯವಾಗಬಾರದು, ಆದರೆ ಸ್ವ ಇಚ್ಛೆಯಿಂದ ನಾಲ್ಕು ಅಥವಾ ಅದಕ್ಕಿಂತಲೂ ಹೆಚ್ಚಿನ ಭಾಷಾಧ್ಯಯನಕ್ಕೆ ಅನುವು ಮಾಡಿಕೊಡಬೇಕಿದೆ.

*— 1992 ರ ಕ್ರಿಯಾ ಕಾರ್ಯಕ್ರಮ*

## 1988-2000 ದ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು

1988 ಮತ್ತು 2000 ದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿ ನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿರುವುದೇನೆಂದರೆ, ಶಾಲಾ ಶಿಕ್ಷಣದ ಸಮಯದಲ್ಲಿ ಎಲ್ಲಾ ಹಂತಗಳಲ್ಲೂ ವಿಶೇಷವಾಗಿ ಆರಂಭಿಕ ಸ್ತರಗಳಲ್ಲಿ ಶಿಕ್ಷಣದ ಮಾಧ್ಯಮ ಮಾತೃಭಾಷೆ ಅಥವಾ ಸ್ಥಳೀಯಭಾಷೆಯಲ್ಲಿ ನಡೆಯಬೇಕಿದೆ (NCFSC-2000). ಆದರೆ, ಮಾತೃಭಾಷೆ ಮತ್ತು ಸ್ಥಳೀಯಭಾಷೆಯ ನಡುವಿನ ಅಂತರದ ಗಂಭೀರ ಸಮಸ್ಯೆಯನ್ನು ನಿರ್ಲಕ್ಷಿಸಲಾಗಿದೆ. ಒಂದು ವೇಳೆ ಸ್ಥಳೀಯ ಭಾಷೆಯು ಮಾತೃಭಾಷೆಯಾಗದಿದ್ದಲ್ಲಿ ಆ ವಿದ್ಯಾರ್ಥಿಯ ಎರಡು ವರ್ಷದ ಶಿಕ್ಷಣವು ಅವನ/ಅವಳ ಮಾತೃಭಾಷೆಯಲ್ಲಿ ಆಗಬೇಕಿದೆ ಎಂದು ಈ ಚೌಕಟ್ಟಿನಲ್ಲಿ ಹೇಳಲಾಗಿದೆ. ಮೂರನೆ ಭಾಷೆ ಹಾಗೂ ಅದರ ನಂತರ "ಸ್ಥಳೀಯಭಾಷೆಯನ್ನು ಬೋಧನ ಮಾಧ್ಯಮದ ಭಾಷೆಯ ರೂಪದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. (NCFSE2000)

*— ಭಾರತೀಯ ಭಾಷೆಗಳ ಶಿಕ್ಷಣ- ಸ್ಥಾನ ಕಾಗದ, ಪುಟ15-16*

## 2005 ರ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು

ದ್ವಿಭಾಷಿಕತೆ ಹಾಗೂ ಬಹುಭಾಷಿಕತೆಯಿಂದ ಬೌದ್ಧಿಕ ಲಾಭವಾಗುತ್ತದೆ" ಎಂಬುದು ನಮಗೆ ನಿಶ್ಚಿತವಾಗಿ ತಿಳಿದಿದೆ. ತ್ರಿಭಾಷಾ – ಸೂತ್ರವು ಭಾರತದ ಭಾಷೆಯ ಸ್ಥಿತಿ ಯ ಸವಾಲುಗಳು ಹಾಗೂ ಅವಶ್ಯಕತೆಗಳನ್ನು ಹೇಳುವ ಪ್ರಯತ್ನ ಮಾಡಲಾಗಿದೆ. ಇದು ಒಂದು ರಣನೀತಿಯಾಗಿ ಹಲವು ಭಾಷೆಗಳನ್ನು ಕಲಿಯುವ ಮಾರ್ಗವನ್ನು ಸುಗಮಗೊಳಿಸಬೇಕಿದೆ. ಇದನ್ನು ಕೆಲಸ ಹಾಗೂ ಭಾವ ಇವೆರಡರ ರೀತಿಯಲ್ಲಿ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಇದರ ಮೂಲ ಉದ್ದೇಶ ಭಾರತದಲ್ಲಿ ಬಹುಭಾಷಿಕತೆ ಹಾಗೂ ರಾಷ್ಟ್ರೀಯ ಸದ್ಭಾವನೆಯನ್ನು ಪ್ರಸರಿಸುವುದಾಗಿದೆ. ಕೆಳಗೆ ನೀಡಲಾದ ಸಲಹೆಗಳು ಈ ಗುರಿಗಳನ್ನು ಸಾಧಿಸಲು ಸಹಾಯಕವಾಗಬಹುದು.

- ಭಾಷೆಯ ಶಿಕ್ಷಣ ಬಹುಭಾಷಿಕವಾಗಿರಬೇಕು. ಇದು ಕೇವಲ ಹಲವು

ಭಾಷೆಗಳನ್ನು ಕಲಿಸುವುದಲ್ಲದೇ ಇದರ ಕಾರ್ಯತಂತ್ರದ ರಚನೆಯ ವಿಷಯದಲ್ಲಿ ಬಹುಭಾಷಿಕ ತರಗತಿಯನ್ನು ಸಂಪನ್ಮೂಲವಾಗಿ ಪ್ರಾಯೋಗಿಕ ರೂಪದಲ್ಲಿ ತರಬೇಕಿದೆ.

- ಮಕ್ಕಳ ಮನೆಯ ಭಾಷೆ ಶಾಲೆಯಲ್ಲಿ ಬೋಧನಾ ಮಾಧ್ಯಮವಾಗಿ ಇರಬೇಕು. (ಏ)3.1 ರಲ್ಲಿ ವ್ಯಾಖ್ಯಾನಿಸಲಾಗಿದೆ)
- ಒಂದು ವೇಳೆ ಶಾಲಾ ಶಿಕ್ಷಣವು ಉನ್ನತ ಹಂತದಲ್ಲಿ ಮಕ್ಕಳ ಮಾತೃಭಾಷೆಗಳ ಮಾಧ್ಯಮಗಳಲ್ಲಿ ನೀಡಲು ಅವಕಾಶವಿರದಿದ್ದಾಗ ಪ್ರಾಥಮಿಕ ಹಂತದಲ್ಲಾದರೂ ಮಕ್ಕಳ ಮಾತೃಭಾಷೆಯನ್ನು ಬೋಧನಾ ಮಾಧ್ಯಮವಾಗಿ ಸಿಗುವಂತೆ ಮಾಡಬೇಕು. ಮಕ್ಕಳ ಮಾತೃಭಾಷೆಗೆ ಮಹತ್ವನೀಡಬೇಕಿದೆ. ನಮ್ಮ ಸಂವಿಧಾನದ ವಿಧಿ '350- ಕ' ದ ಪ್ರಕಾರ ಪ್ರತ್ಯೇಕ ರಾಜ್ಯ ಮತ್ತು ರಾಜ್ಯದ ಪ್ರತ್ಯೇಕ ಪ್ರಾದೇಶಿಕ ಭಾಷೀಯ ಪ್ರಾಧಿಕಾರ ಅಲ್ಪಸಂಖ್ಯಾತ- ವರ್ಗಗಳ ಬಾಲಕರಿಗೆ ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯ ಶಿಕ್ಷಣದಲ್ಲಿ ಸಾಕಾಗುವಷ್ಟು ವಿಶಿಷ್ಟ ಅನುಕೂಲಗಳನ್ನು ಮಾಡುವ ಪ್ರಯತ್ನ ಮಾಡುತ್ತದೆ.

*— 2005 ರ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು, ಪುಟ 42*

ಇದಕ್ಕೆ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು (2005) ಅದರ ನಿರ್ಮಿತ ಫೋಕಸ್ ಸಮೂಹ ವು "ಭಾರತೀಯ ಭಾಷೆಗಳ ಶಿಕ್ಷಣ" ದ ಬಗ್ಗೆ ಈ ಸಲಹೆಗಳನ್ನು ಕೊಟ್ಟಿದೆ. ಶಾಲಾ ಹಂತದಲ್ಲಿ ವಿಶೇಷವಾಗಿ ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಮಾರ್ಗದರ್ಶನದ/ಬೋಧನಾ ಮಾಧ್ಯಮ ಮಾತೃಭಾಷೆಯೇ ಆಗಿರಬೇಕು. 1986 ರಲ್ಲಿ ಎನ್.ಸಿ.ಇ.ಆರ್.ಟಿ ಯ ಮೂಲಕ ಭಾಷೆಯ ಅಧ್ಯಯನಕ್ಕಾಗಿ ರಚಿಸಲಾದ ಸಮಿತಿ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಯನ್ನು ಮಾತ್ರ ಮಾಧ್ಯಮವಾಗಿ ಬಳಸಬೇಕು ಎಂದು ಸಲಹೆ ನೀಡಿದೆ. ಭಾರತೀಯ ಸಂದರ್ಭದಲ್ಲಿ ಇದು ಅತ್ಯಂತ ಅವಶ್ಯಕವಾಗುತ್ತದೆ ಏಕೆಂದರೆ

- ಇದು ರಾಷ್ಟ್ರೀಯ ಪುನರ್ ನಿರ್ಮಾಣದಲ್ಲಿ ಭಾಗವಹಿಸಲು ಜನರನ್ನು ಶಕ್ತಗೊಳಿಸುತ್ತದೆ.
- ಜ್ಞಾನವನ್ನು ಕೆಲವೇ ಕೆಲವು ವ್ಯಕ್ತಿಗಳ ಹಿಡಿತದಿಂದ ಮುಕ್ತಗೊಳಿಸುತ್ತದೆ.
- ಇದು ಪರಸ್ಪರ ಸಹಕಾರ ಮತ್ತು ಪರಸ್ಪರ ಅವಲಂಬಿತ ಸಮಾಜವನ್ನು ನಿರ್ಮಿಸಲು ಸಹಾಯ ಮಾಡುತ್ತದೆ.
- ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹೆಚ್ಚಿನ ಜನರಿಗೆ ಅವಕಾಶವನ್ನು ಒದಗಿಸುತ್ತದೆ ಹಾಗಾಗಿ ಪ್ರಜಾಪ್ರಭುತ್ವಕ್ಕೆ ಉತ್ತಮ ಭದ್ರತಾ ನೆಲೆಯನ್ನು ನೀಡುವಲ್ಲಿ ಇದು ಪರಿಣಾಮಕಾರಿಯಾಗಿದೆ.
- ಮಾಹಿತಿಯ ವಿಕೇಂದ್ರೀಕರಣಕ್ಕೆ ಕಾರಣವಾಗುವುದಲ್ಲದೇ ನಿಯಂತ್ರಿತ ಮಾಧ್ಯಮವನ್ನೂ ಸಹಾ ಬದಲಾಯಿಸುತ್ತದೆ. ಸ್ವತಂತ್ರ ಮಾಧ್ಯಮದ ಅಭಿವೃದ್ಧಿಯಲ್ಲಿ ಪೋಷಕ ಪಾತ್ರವನ್ನು ವಹಿಸುತ್ತದೆ. ಎಲ್ಲರೊಂದಿಗೆ ಹೆಚ್ಚು ಹೆಚ್ಚು ಜನರಿಗೆ ಶಿಕ್ಷಣ ಮತ್ತು ವ್ಯಕ್ತಿತ್ವ ವಿಕಸನಕ್ಕಾಗಿ ಅವಕಾಶಗಳನ್ನು ಒದಗಿಸುತ್ತದೆ.

*— ಭಾರತೀಯ ಭಾಷೆಗಳ ಶಿಕ್ಷಣ-ಸ್ಥಾನ ಕಾಗದ, ಪುಟ 14-15*

## 2020 ರ ರಾಷ್ಟ್ರೀಯ ಶಿಕ್ಷಣ ನೀತಿ

- ಮಕ್ಕಳು ತಮ್ಮ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಮನೆಯ ಭಾಷೆ/ ಮಾತೃಭಾಷೆಯಲ್ಲಿ ಅರ್ಥಪೂರ್ಣವಾದ ಪರಿಕಲ್ಪನೆಗಳನ್ನು ಅತ್ಯಂತ

ಸುಲಭವಾಗಿ ಮನದಟ್ಟು ಮಾಡಿಕೊಳ್ಳುವುದಲ್ಲದೆ ಅತಿ ವೇಗವಾಗಿ ಗ್ರಹಿಸುವರೆಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ! ಮನೆ ಭಾಷೆಯು ಸಾಮಾನ್ಯವಾಗಿ ಮಾತೃಭಾಷೆ ಅಥವಾ ಸ್ಥಳೀಯ ಸಮುದಾಯಗಳು ಮಾತನಾಡುವಂತಹ ಭಾಷೆಯಾಗಿರುತ್ತದೆ. ಆದರೂ ಕೆಲವೊಮ್ಮೆ ಬಹುಭಾಷೆಗಳನ್ನಾಡುವ ಕುಟುಂಬಗಳಲ್ಲಿ, ಕುಟುಂಬದ ಇತರೆ ಸದಸ್ಯರು ಮಾತನಾಡುವ ಮನೆಯ ಭಾಷೆಯೂ ಆಗಿರಬಹುದು ಅಥವಾ ಕೆಲವು ಸಾರಿ ಮಾತೃಭಾಷೆ ಅಥವಾ ಸ್ಥಳೀಯ ಭಾಷೆಗಿಂತ ಭಿನ್ನವಾಗಿಯೂ ಇರಬಹುದು. ಸಾಧ್ಯವಾದಷ್ಟು, ಕನಿಷ್ಠ 5 ನೇ ತರಗತಿಯವರೆಗೆ ಸಾಧ್ಯವಾದರೆ 8 ನೇ ತರಗತಿ ಮತ್ತು ಆನಂತರದ ತರಗತಿಗಳಲ್ಲಿ ಬೋಧನಾ ಮಾಧ್ಯಮವು ಮನೆ ಭಾಷೆ, ಮಾತೃಭಾಷೆ / ಸ್ಥಳೀಯ ಭಾಷೆ/ ಪ್ರಾದೇಶಿಕ ಭಾಷೆಯಾಗಿರುವುದು. ಅದರ ನಂತರ, ಮನೆ/ಸ್ಥಳೀಯ ಭಾಷೆಯನ್ನು ಸಾಧ್ಯವಿರುವಲ್ಲೆಲ್ಲಾ ಭಾಷೆಯಾಗಿ ಕಲಿಸುವುದಕ್ಕೆ ಅವಕಾಶವಿರಬೇಕಿದೆ ಅಲ್ಲದೆ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಇದನ್ನು ಜಾರಿಗೆ ತರಲಾಗುತ್ತದೆ.

*ರಾಷ್ಟ್ರೀಯ ಶಿಕ್ಷಣ ನೀತಿ 2020, ಕ್ರ.4.11-*

- ಇತ್ತೀಚಿನ ಸಂಶೋಧನೆಗಳು ಸ್ಪಷ್ಟವಾಗಿ ಸಾರುವುದೇನೆಂದರೆ, ಮಕ್ಕಳು ತಮ್ಮ ಎರಡನೇ ವಯಸ್ಸಿನಿಂದ ಎಂಟನೇ ವಯಸ್ಸಿನವರೆಗೂ ಭಾಷೆಯನ್ನು ಅತ್ಯಂತ ವೇಗವಾಗಿ ಕಲಿಯುವರು ಮತ್ತು ಈ ವಯಸ್ಸಿನ ವಿದ್ಯಾರ್ಥಿಗಳಿಗೆ ಬಹುಭಾಷಾವಾದವು ಅಗಾಧವಾದ ಬೌದ್ಧಿಕ ಬೆಳವಣಿಗೆಗೆ ಸಹಾಯಕಾರಿಯಾಗಿದೆ. ಅಡಿಪಾಯದ ಹಂತದ ಆರಂಭದಿಂದ ಹಾಗೂ ನಂತರ ಮಕ್ಕಳಿಗೆ ಬಹು ಭಾಷೆಗಳಲ್ಲಿ (ಆದರೆ ಮಾತೃಭಾಷೆಗೆ ವಿಶೇಷ ಒತ್ತು ನೀಡುವುದರ ಜೊತೆಗೆ) ಎಕ್ಸಪೋಶರ್ ನೀಡಲಾಗುವುದು. ಎಲ್ಲಾ ಭಾಷೆಗಳನ್ನು ಮನೋರಂಜನೆ ಮತ್ತು ಸಂವಾದಾತ್ಮಕ ಶೈಲಿಯಲ್ಲಿ ಕಲಿಸಲಾಗುತ್ತದೆ. ಅವುಗಳಲ್ಲಿ ಸಾಕಷ್ಟು ಸಂವಾದಾತ್ಮಕ ಮಾತುಕತೆಯಿರುತ್ತದೆ, ಆರಂಭಿಕ ವರ್ಷಗಳಲ್ಲಿ ಓದುವುದು ಮತ್ತು ಮಾತೃಭಾಷೆಯಲ್ಲಿ ಬರೆಯುವುದರ ಜೊತೆಗೆ ಮೂರನೇ ತರಗತಿಯಿಂದ ನಂತರದ ತರಗತಿಗಳಲ್ಲಿ ಇತರ ಭಾಷೆಗಳಲ್ಲಿ ಓದುವ ಹಾಗೂ ಬರೆಯುವ ಕೌಶಲ್ಯವನ್ನು ಬೆಳೆಸಲಾಗುವುದು.

*ರಾಷ್ಟ್ರೀಯ ಶಿಕ್ಷಣ ನೀತಿ 2020, ಕ್ರ.4.12*

- ಈ ನಿಟ್ಟಿನಲ್ಲಿ, ವಿಜ್ಞಾನ ಮತ್ತು ಗಣಿತಶಾಸ್ತ್ರದಲ್ಲಿ ಉತ್ತಮ ಗುಣಮಟ್ಟದ ದ್ವಿಭಾಷಾ ಪಠ್ಯಪುಸ್ತಕಗಳು ಮತ್ತು ಬೋಧನಾ ಕಲಿಕಾ ಸಾಮಗ್ರಿಗಳನ್ನು ತಯಾರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಇದರಿಂದ ವಿದ್ಯಾರ್ಥಿಯು ಎರಡೂ ವಿಷಯಗಳ ಬಗ್ಗೆ ತನ್ನ ಮನೆ ಭಾಷೆ/ಮಾತೃಭಾಷೆ ಹಾಗೂ ಆಂಗ್ಲ ಭಾಷೆಯಲ್ಲಿ ಯೋಚಿಸಲು ಮತ್ತು ಮಾತನಾಡಲು ಸಾಧ್ಯವಾಗುತ್ತದೆ.

*ರಾಷ್ಟ್ರೀಯ ಶಿಕ್ಷಣ ನೀತಿ 2020, ಕ್ರ.4.14*

- ಭಾರತೀಯ ಭಾಷೆಗಳ ಬೋಧನೆ ಮತ್ತು ಕಲಿಕೆಯನ್ನು ಶಾಲೆ ಮತ್ತು ಉನ್ನತ ಶಿಕ್ಷಣದ ಪ್ರತಿಯೊಂದು ಹಂತದಲ್ಲೂ ಸಮನ್ವಯಗೊಳಿಸುವ ಅವಶ್ಯಕತೆಯಿದೆ. ಭಾಷೆಗಳು ಪ್ರಸ್ತುತ ಮತ್ತು ಜೀವಂತವಾಗಿ ಉಳಿಯಲು, ಪಠ್ಯ ಪುಸ್ತಕಗಳನ್ನು ಒಳಗೊಂಡಂತೆ ಈ ಭಾಷೆಗಳಲ್ಲಿ ಉತ್ತಮ ಗುಣಮಟ್ಟದ ಕಲಿಕೆ ಮತ್ತು ಮುದ್ರಣ ಸಾಮಗ್ರಿಗಳ ನಿರಂತರ ಪೂರೈಕೆ ಇರಬೇಕು. ಅಭ್ಯಾಸ

ಪುಸ್ತಕಗಳು, ವೀಡಿಯೊಗಳು, ನಾಟಕಗಳು, ಕವಿತೆಗಳು, ಕಾದಂಬರಿಗಳು, ನಿಯತಕಾಲಿಕೆಗಳು ಇತ್ಯಾದಿಗಳನ್ನು ಒಳಗೊಂಡಿದೆ. ಭಾಷೆಗಳ ನಿಘಂಟುಗಳು ಮತ್ತು ಶಬ್ದಕೋಶಗಳನ್ನು ಅಧಿಕೃತವಾಗಿ ನಿರಂತರವಾಗಿ ನವೀಕರಣವಾಗಬೇಕಿದೆ ಹಾಗೂ ಅದನ್ನು ವ್ಯಾಪಕವಾಗಿ ಪ್ರಚುರಪಡಿಸುವ ಅಗತ್ಯತೆ ಇದೆ. ಪ್ರಪಂಚದಾದ್ಯಂತದ ದೇಶಗಳು ಈ ರೀತಿಯ ಕಲಿಕಾ ಸಾಮಗ್ರಿಗಳನ್ನು ಇಂಗ್ಲಿಷ್, ಫ್ರೆಂಚ್, ಜರ್ಮನ್, ಹೀಬ್ರೂ, ಕೊರಿಯನ್, ಜಪಾನೀಸ್ ಮುಂತಾದ ಭಾಷೆಗಳಲ್ಲಿ ಮುದ್ರಿಸುತ್ತವೆ. ಆದರೆ ಭಾರತವು ತನ್ನ ಭಾಷೆಗಳನ್ನು ಜೀವಂತವಾಗಿ ಮತ್ತು ಪ್ರಸ್ತುತವಾಗಿಡಲು ಸಹಾಯ ಮಾಡುವ ರೀತಿಯ ಕಲಿಕಾ ಸಾಮಗ್ರಿಗಳು, ಮುದ್ರಣ ಸಾಮಗ್ರಿಗಳು ಮತ್ತು ನಿಘಂಟುಗಳನ್ನು ರಚಿಸುವ ಕಾರ್ಯ ಮಂದಗತಿಯಲ್ಲಿ ಸಾಗುತ್ತಿದೆ.

*ರಾಷ್ಟ್ರೀಯ ಶಿಕ್ಷಣ ನೀತಿ 2020, ಕ್ರ.22.6*

- ಭಾರತೀಯ ಭಾಷೆಗಳ ಅಭಿವೃದ್ಧಿ ಮತ್ತು ಪ್ರಚಾರಗಳು ಸಂಭವಿಸುವುದು- ಯಾವಾಗ ಅವನ್ನು ನಿಯಮಿತವಾಗಿ ಪ್ರಯೋಗ ಮಾಡುವೆವೋ ಮತ್ತು ಶಿಕ್ಷಣ ಕಲಿಸುವುದಕ್ಕೆ ಬಳಕೆ ಮಾಡುವೆವೋ ಆಗ ಮಾತ್ರ ಸಾಧ್ಯ. ಭಾರತೀಯ ಭಾಷೆಗಳಲ್ಲಿ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಕಾವ್ಯ ಮತ್ತು ಗದ್ಯಕ್ಕಾಗಿ ಪ್ರಶಸ್ತಿಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಹಾಗಾಗಿ ಭಾರತೀಯ ಭಾಷೆಗಳಲ್ಲಿ ಜೀವಂತಿಕೆಯಿಂದ ಕೂಡಿದ ಕವನಗಳು, ಕಾದಂಬರಿಗಳು, ಪಠ್ಯಪುಸ್ತಕಗಳು, ಕಾಲ್ಪನಿಕ ಸಾಹಿತ್ಯ ಮತ್ತು ಪತ್ರಿಕೋದ್ಯಮದಂತಹ ಇತರ ಕಾರ್ಯಗಳನ್ನು ಖಾತ್ರಿಪಡಿಸಿಕೊಳ್ಳಬೇಕಿದೆ. ಉದ್ಯೋಗದ ಅರ್ಹತೆಯ ಮಾನದಂಡದ ಭಾಗವಾಗಿ ಭಾರತೀಯ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಸೇರಿಸಲಾಗುವುದು.

*— 2020 ರ ರಾಷ್ಟ್ರೀಯ ಶಿಕ್ಷಣನೀತಿ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ*

ಮೇಲಿನ ಎಲ್ಲಾ ದಾಖಲೆ ಹಾಗೂ ಸಂಶೋಧನೆಗಳು ಎಷ್ಟೇ ಸಲಹೆಗಳನ್ನು ನೀಡಿದರೂ ,ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವೂ ಈ ಸಮಸ್ಯೆಗೆ ಸಂಪೂರ್ಣವಾಗಿ ಪರಿಹಾರ ಸಿಕ್ಕಿಲ್ಲ. ಎನ್ ಸಿ ಇ ಆರ್ ಟಿ ಮಾಡಿದ ಎರಡು ಭಾಷಾ ಸಂಬಂಧಿ ಸಂಶೋಧನೆಗಳಲ್ಲಿಯೂ ಮಾಧ್ಯಮ ಭಾಷೆಗಳ ರಾಜ್ಯವಾರು ನೆಲೆಗಟ್ಟುನ್ನು ಪ್ರಸ್ತುತಪಡಿಸಲಾಗಿದೆ (ಪುಟ 51-54 ನೋಡಿ) ಅದರಲ್ಲಿ ಹೆಚ್ಚಿನ ರಾಜ್ಯಗಳಲ್ಲಿ ಅನೇಕ ಭಾಷೆಗಳನ್ನು ಮಾಧ್ಯಮ ಭಾಷೆಯಾಗಿ ಬಳಸಲಾಗುತ್ತದೆ. **ದಾಖಲಾತಿಗಳಲ್ಲಿ ಎಷ್ಟೇ ಸಲಹೆ ಶಿಫಾರಸ್ಸುಗಳು ಹಾಗೂ ನೆಲೆಗಟ್ಟುಗಳಿಂದ ಉತ್ಸಾಹವನ್ನುಂಟು ಮಾಡಿದರೂ ಏನೂ ಪ್ರಯೋಜನವಿಲ್ಲದಂತಾಗಿದೆ.** ಏಕೆಂದರೆ ಮನೆಯ ಭಾಷೆ ಹಾಗೂ ಶಾಲಾ ಭಾಷೆಯ ಅಂತರ ಇನ್ನೂ ಅಂತರವಾಗಿಯೇ ಉಳಿದುಕೊಂಡಿದೆ. ದಿನದಿಂದ ದಿನಕ್ಕೆ ಮನೆಯ ಭಾಷೆ ಮತ್ತು ಶಾಲೆಯ ಭಾಷೆಯ ನಡುವಿನ ವ್ಯತ್ಯಾಸವು ಹೆಚ್ಚುತ್ತಲೇ ಇದೆ. ಇನ್ನೊಂದು ಕಡೆ ಇಂಗ್ಲಿಷ್ ಜೊತೆಗೆ ಭಾರತೀಯ ಭಾಷೆಗಳ ನಡುವಿನ ಸಂವಹನವೂ ಸಹ ಮುರಿದು ಹೋಗಿದೆ. ಮಾನಸಿಕ ಹೊರೆ ತುಂಬಾ ಹೆಚ್ಚಾಗಿ ಮಕ್ಕಳು ತಮ್ಮ ತಿಳುವಳಿಕೆ ಮತ್ತು ಅಭಿವ್ಯಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿಯೇ 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಈ ಅಂಶವನ್ನು ಬಲವಾಗಿ ಪುನರುಚ್ಚಿಸಲಾಗಿದೆ. ಅಂದರೆ, ಮಕ್ಕಳಿಗೆ ಅವರ ಮನೆಯ ಭಾಷೆಯು ಶಾಲೆಯಲ್ಲೂ ತಿಳುವಳಿಕೆಯ ಭಾಷೆಯಾಗಿ ಮಕ್ಕಳು ಕಂಠಪಾಠ ಮಾಡುವ ಬದಲು ಅರ್ಥಮಾಡಿಕೊಂಡು ಓದಿ

ಜೀವನದಲ್ಲಿ ಮುಂದೆ ಬರಲಿ. ಮಕ್ಕಳಿಗೆ ಶಿಕ್ಷಣ ಹೊರೆಯಾಗಬಾರದು, ಆದರೆ ಆನಂದದಾಯಕ ಅನುಭವವಾಗಬೇಕು. ಖಂಡಿತವಾಗಿ ಇದರ ಹಿಂದೆ ಒಂದಷ್ಟು ಭ್ರಮೆ ಹಾಗೂ ಗೊಂದಲಗಳಿವೆ. ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, NCERT ಭಾಷಾ ವಿಭಾಗವು ದೇಶಾದ್ಯಂತ ಶಿಕ್ಷಣತಜ್ಞರು ಮತ್ತು ಅಧ್ಯಾಪಕರೊಂದಿಗೆ ಚರ್ಚಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತು . ಈ ಕಾರ್ಯಕ್ರಮ ಪಾಟ್ನಾ, ವಾರಣಾಸಿ, ಉದಯಪುರ ಮತ್ತು ದೆಹಲಿಯಲ್ಲಿ ಸಂವಾದವು ಸರಣಿಯ ರೂಪದಲ್ಲಿ ಆಯೋಜಿಸಲಾಗಿತ್ತು. ಮಕ್ಕಳ ಭಾಷೆಯೇ ಅವರ ತಿಳುವಳಿಕೆಯ ಮಾಧ್ಯಮವಾಗಬೇಕಿದೆ ಎಂಬ ಮಾತಿಗೆ ಎಲ್ಲರೂ ಒಪ್ಪಿಕೊಂಡರು. ಆದರೆ ದೊಡ್ಡ ಸಮಸ್ಯೆ ಇದರ ಅನುಷ್ಠಾನದ ವಿಚಾರದಲ್ಲಿ ಉದ್ಭವಿಸಿತು. ಈ ಸೆಮಿನಾರ್‌ಗಳಲ್ಲಿ ಶೋಧಿಸಿ ಮಥಿಸಿದ ನಂತರ ಈ ದಿಶೆಯಲ್ಲಿ 'ಸಮಗ್ರ ಸಿದ್ಧತೆಯ' ಅಗತ್ಯವಿದೆ ಎಂದು ತಿಳಿದು ಬಂತು. ಕೇವಲ ಶೈಕ್ಷಣಿಕ ರಂಗದಲ್ಲಿ ಮಾತ್ರವಲ್ಲದೆ ಸಾಮಾಜಿಕ ಹಾಗೂ ಆಡಳಿತಾತ್ಮಕ ಭೂಮಿಕೆಯಲ್ಲಿ ಪ್ರಜ್ಞಾಪೂರ್ವಕ ಸಿದ್ಧತೆ ಬೇಕಿದೆ ಹಾಗೂ ತಿಳುವಳಿಕೆಯ ಮಾಧ್ಯಮದ ಸಂಬಂಧವಾಗಿ ಅರ್ಥ ನಿರ್ಮಿಸುವಲ್ಲಿ ಕ್ರಿಯಾಶೀಲ ಹೆಜ್ಜೆಗಳನ್ನು ತೆಗೆದುಕೊಳ್ಳಬೇಕಿದೆ.

* * *

# 2

# ಭಾಷೆ ಮತ್ತು ತಿಳುವಳಿಕೆ



- ➤ **ಮಗುವಿನ ತಿಳುವಳಿಕೆ ಮತ್ತು ಭಾಷೆ**
- ➤ **ತಿಳುವಳಿಕೆಯ ತಳಹದಿ ಭಾಷೆ**
- ➤ **ಭಾಷೆ ಮತ್ತು ಸಾಮಾಜಿಕ ಸಮತೆ**
- ➤ **ಮಕ್ಕಳ ಅಸ್ಮಿತೆಯ ಪ್ರಶ್ನೆ**
- ➤ **ಸಾರ್ಥಕ ಶಿಕ್ಷಣದ ಪ್ರಯತ್ನ**

ಭಾಷೆ ಮತ್ತು ತಿಳುವಳಿಕೆಯು ನಿಕಟ ಸಂಬಂಧವನ್ನು ಹೊಂದಿದ್ದರೂ ಸಹಾ ಶಿಕ್ಷಣದಲ್ಲಿ ಮಕ್ಕಳ ತಿಳುವಳಿಕೆ ಮಟ್ಟದ ಅಗತ್ಯವನ್ನು ಅಲ್ಲಗೆಳೆಯಲಾಗಿತ್ತು. ಅಂದರೆ ಕೇವಲ ಕಂಠಪಾಠ ಮಾಡಿ ಕಾಗದದ ಮೇಲೆ ಭಟ್ಟಿ ಇಳಿಸಿದರಾಯಿತು ಎನ್ನುವ ಅಸಡ್ಡೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಹೊಸ ಶೈಕ್ಷಣಿಕ ನೀತಿಗಳು ಮೊದಲ ಬಾರಿಗೆ ಶಿಕ್ಷಣದಲ್ಲಿ ಮಕ್ಕಳ ತಿಳುವಳಿಕೆಯ ಬಗ್ಗೆ ಬಲ ಪಡಿಸುವಂತಹ ಮಾತುಗಳನ್ನು ಹೇಳಿದ್ದಾರೆ. ಇದಕ್ಕೂ ಮೊದಲು ತಿಳುವಳಿಕೆ ಎಂದರೇನು ಅನ್ನುವುದರ ಬಗ್ಗೆ ಯಾರಿಗೂ ಸರಿಯಾಗಿ ಅರಿವು ಇರಲಿಲ್ಲ. ಜ್ಞಾನವನ್ನು ಕೊಡುವ ಮತ್ತು ಪಡೆಯುವ ರೂಢಿಯಿತ್ತು. ಈಗಲೂ ಸಹ ಇದೇ ಬಹಳಷ್ಟು ಮುಂದುವರೆಯುತ್ತಾ ಬಂದಿದೆ. ಮೊದಲನೆಯದಾಗಿ, ಮಕ್ಕಳ ಭಾಷೆ ಯಾವುದು? ಈ ವಿಷಯದ ಬಗ್ಗೆ ನಮ್ಮ ತಿಳುವಳಿಕೆ ಹೆಚ್ಚಿಸಿಕೊಳ್ಳಬೇಕಿದೆ-

## ಮಗುವಿನ ತಿಳುವಳಿಕೆ ಮತ್ತು ಭಾಷೆ

- ಮಕ್ಕಳು ಶಾಲೆಗೆ ಬರುವ ಮೊದಲೇ ಭಾಷೆಯ ಮುಖಾಂತರವೇ ತನ್ನ ಸುತ್ತಮುತ್ತಲಿನ ಪರಿಸರವನ್ನು ಅರಿತಿರುತ್ತಾರೆ.
- ಮಕ್ಕಳು ಭಾಷೆಯನ್ನು ಕಲಿಯುವುದಿಲ್ಲ ಆದರೆ ಅವರ ಮನಸ್ಸಿನಲ್ಲೇ ಭಾಷೆಯು ಮೂಡುತ್ತದೆ.
- ಮಕ್ಕಳು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ.
- ಮಕ್ಕಳ ಸುತ್ತ-ಮುತ್ತಲೂ ಅನೇಕ ಭಾಷೆಗಳಿರುವುದು ಸಮಸ್ಯೆಯಲ್ಲ, ಅದು ಒಂದು ಸಂಪನ್ಮೂಲವೇ ಆಗಿದೆ. ಈ ಬಹು-ಭಾಷೆಗಳು ಶಿಕ್ಷಣದಲ್ಲಿ ಸಮಾನತೆಯನ್ನು ಎತ್ತಿ ಹಿಡಿಯುವುದು.
- ವೈಯಕ್ತಿಕ ಜೀವನದೊಂದಿಗೆ ಪಠ್ಯಕ್ರಮ ಮತ್ತು ಭಾಷೆಗಳೆರಡು ಕೂಡಿಕೊಂಡರೆ ಇವು ಇನ್ನೂ ಸಮೃದ್ಧವಾಗುವುದು.
- ಆರು ವರ್ಷದ ಮಗುವಿನ ಭಾಷೆಯಲ್ಲಿ ಅದರದ್ದೇ ಆದ ವ್ಯಾಕರಣ ಹೊಂದಿದ್ದು ಅದು ಏನನ್ನು ಬೇಕಾದರೂ ವ್ಯಕ್ತ ಪಡಿಸುವ ಸಾಮರ್ಥ್ಯ ಇರುತ್ತದೆ. ಆದರೆ ಇನ್ನೊಂದು ಭಾಷೆಯನ್ನು ಮಾಧ್ಯಮವನ್ನಾಗಿ ಆ ಮಗುವಿನ ಮೇಲೆ ಹೇರಿದರೆ ಅದನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಇರುವುದಿಲ್ಲ .

*ಚಾಮ್ಸ್ಕಿ(1959) ಅವರ "ರಿವ್ಯೂ ಆಫ್ ಸ್ಕಿನ್ನರ್ಸ ವರ್ಬಲ್ ಬಿಹೇವಿಯರ್" ವ್ಯವಹಾರವಾದದ (ವರ್ತನೆಯ ಅಧ್ಯಯನ) ಅಡಿಪಾಯವನ್ನೇ ಅಲುಗಾಡಿಸಿತು. ಚಾಮ್ಸ್ಕಿಯು ಭಾಷಾ ಸಾಮರ್ಥ್ಯವು ಜನ್ಮಜಾತವಾಗಿದೆ ಎಂದು ವಾದಿಸುತ್ತಾರೆ. ಇಲ್ಲದಿದ್ದರೆ ಭಾಷಾ ವ್ಯವಸ್ಥೆಯ ಕಲಿಯುವ ಪ್ರಕ್ರಿಯೆಯು ಸಂಭವವೇ ಇರುತ್ತಿರಲಿಲ್ಲ. ಆದರೆ ಪಿಯಾಜೆ (1962-/1983 ಇತರ ಹಲವು) ಇನ್ಹೇಲ್ಡರ್ ಮತ್ತು ಪಿಯಾಜೆ(1958) ಮತ್ತು ವೈಗೋಟ್ಸ್ಕಿ (1978, 1986) ಈ ಇಬ್ಬರೂ ತೀವ್ರವಾದದ ದೃಷ್ಟಿಕೋನದ ನಡುವಿನ ಮಾರ್ಗವನ್ನು ಆರಿಸಿಕೊಂಡರು. ಅಲ್ಲಿ ವ್ಯವಹಾರವಾದ(ವರ್ತನೆಯ ಅಧ್ಯಯನ) ಮನೋಭಾವ ಹೊಂದಿರುವವರಿಗೆ ಮೆದುಳು ಒಂದು "ಖಾಲಿ ಸ್ಲೇಟ್" ಆಗಿದೆ. ಆ ಅರಿವಿನ ನಿಲುವು ತೆಗೆದುಕೊಳ್ಳುವವರ (ಚಾಮ್ಸ್ಕಿ ಇತ್ಯಾದಿ) ಪ್ರಕಾರ ಭಾಷೆಯು ಮಾನವ- ಮೆದುಳಲ್ಲಿ ಮೊದಲೇ ಅಸ್ತಿತ್ವದಲ್ಲಿದೆ. ಭಾಷೆಯು ಸಾರ್ವತ್ರಿಕ ವ್ಯಾಕರಣದ ರೂಪದಲ್ಲಿ ಹೆಣೆಯಲಾಗಿದೆ. ಪಿಯಾಜೆ ಪ್ರಕಾರ, ಭಾಷೆಯು ಇತರ ಅರಿವಿನ ತಂತ್ರದಿಂದ ಸ್ನೇಹಮಯ ಪರಿಸರದ ಜೊತೆ ಜೊತೆಗೆ ಅಂತ: ಕ್ರಿಯೆಯ ಮಾಧ್ಯಮದ ಮೂಲಕ ಮಾತ್ರವೇ ಭಾಷೆ ಬೆಳವಣಿಗೆಯಾಗುತ್ತದೆ.*

*— ಭಾರತೀಯ ಭಾಷೆಗಳ ಬೋಧನೆ*
*- ಸ್ಥಾನ ಕಾಗದ, ಪುಟ 8*

## ಗ್ರಹಿಕೆಯ ಮೂಲಸ್ವರೂಪವೇ ಭಾಷೆ

ಭಾಷೆ ಮತ್ತು ತಿಳುವಳಿಕೆಯ ಸಂಬಂಧವು ಗಾಳಿ ಮತ್ತು ಅದರ ತರಂಗಗಳ ಸಂಬಂಧದಂತೆ ಒಂದೇ ತೆರನಾಗಿರುತ್ತದೆ. ನಮ್ಮ ತಿಳುವಳಿಕೆ ನಮ್ಮದೇ ಭಾಷೆಯಲ್ಲಿ ಪರಿಣಾಮಕಾರಿಯಾಗಿರುತ್ತದೆ. ಭಾಷೆ ಇಲ್ಲದೆ ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಆದರೆ ಶಾಲೆಗಳಲ್ಲಿ ಭಾಷೆಯನ್ನು ಕೇವಲ 'ಟೂಲ್' ಆಗಿ ಬಳಸಲಾಗುತ್ತಿದೆ. ನಾವು ಈ ದಿಶೆಯಲ್ಲಿ ಕೆಲಸ ಮಾಡಬೇಕಿರುವುದು ಬಹಳಷ್ಟು ಇದೆ ಹಾಗೂ ಮಾನವನ ತಿಳುವಳಿಕೆಗೆ ಭಾಷೆ ಮಾತ್ರವೇ ಅತ್ಯಂತ ಪ್ರಮುಖವಾದ ಅಂಶ ಎಂಬ ವಿಶ್ವಾಸ ಮೂಡಿಸಬೇಕಿದೆ. ಪ್ರಸ್ತುತದಲ್ಲಿ ನಾವು ಏನು ಮಾಡುತ್ತಿದ್ದೀವೆ. ಇದರ ಬಗ್ಗೆಯೂ ಭಾಷೆಯು ಎಚ್ಚರಿಕೆ ನೀಡುತ್ತದೆ. ಇದು ಪ್ರಸ್ತುತವನ್ನು ಮೀರಿ ಮತ್ತು ಭವಿಷ್ಯದಲ್ಲಿ ಸಂಚಲನ ಮೂಡಿಸುವ ಏಕೈಕ ಅಗತ್ಯ ಸಾಧನವಾಗಿ ಕೆಲಸ ಮಾಡುತ್ತದೆ. ನಿನ್ನೆ ಏನಾಗಿತ್ತು? ನಮಗಿನ್ನೇನು ಬೇಕು ಎಂಬುದನ್ನುಇದರ ಆಧಾರದ ಮೇಲೆಯೇ ಊಹಿಸಬಹುದಾಗಿದೆ. ನಮ್ಮ ಜೀವನದಲ್ಲಿ ವಿವೇಚನೆಯಿಂದ ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳನ್ನು ಭಾಷೆಯೇ ಮಾಡುತ್ತದೆ. ಮಾನವನ ಎಲ್ಲಾ ಸ್ಥಿತಿ ಗತಿಗಳು ಪರಿಸರದಲ್ಲಿ ಸೃಷ್ಟಿಸಲ್ಪಟ್ಟಿದೆ. ಅಲ್ಲದೆ ಈ ಸೃಷ್ಟಿಯ ಕೆಲಸ ತಿಳುವಳಿಕೆಯ ಮೂಲಕವೇ ಸಾಧ್ಯ. ಮನುಷ್ಯನ ಈ ತಿಳುವಳಿಕೆ ಬರುವುದು ಭಾಷೆಯಿಂದ ಮಾತ್ರ. ಭಾಷೆಯ ಮೂಲಕ ನಾವು ಅರ್ಥಪೂರ್ಣ ಪರಿಕಲ್ಪನೆಗಳನ್ನು ರೂಪಿಸುತ್ತೇವೆ ಹಾಗೂ ನಾವು ಸಂಬಂಧಗಳ ಜಾಲವನ್ನು ನಿರ್ಮಿಸುತ್ತೇವೆ. ನಾವು ಅನುಭವಗಳಿಗೆ ಅರ್ಥ ನೀಡಿ, ಒಬ್ಬರ ಉದ್ದೇಶಗಳನ್ನು ನೋಡವುದಲ್ಲದೆ ಮತ್ತು ಇತರರ ಉದ್ದೇಶಗಳನ್ನು ಅರ್ಥಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸಾಧ್ಯವಾಗುತ್ತದೆ . ಆದ್ದರಿಂದ ಮಾನವನ ಬೆಳವಣಿಗೆಗೆ ಅವಶ್ಯಕವಾದ ಈ ಭಾಷೆಯು ತಿಳುವಳಿಕೆಯ ಮಾಧ್ಯಮವಾಗುತ್ತದೆ.

ಮಕ್ಕಳು ತಮ್ಮ ಮನಸ್ಸಿನಲ್ಲಿ ತಮ್ಮದೇ ಆದ ಭಾಷೆಯ ಪರಿಕಲ್ಪನೆಯನ್ನು ಹೊಂದಿರುತ್ತಾರೆ. ಪರಿಕಲ್ಪನೆಗಳ ನೆಲೆಗಟ್ಟು ಈ ಭಾಷೆಯಿಂದಲೇ ರೂಪುಗೊಳ್ಳುತ್ತದೆ. ಅವರು ಹೊಸದನ್ನು ನೋಡಿದಾಗ ಅದರಿಂದ ಹಿಂದಿನ ಅನುಭವಗಳೊಂದಿಗೆ ಅದನ್ನು ಸಂಬಂಧವನ್ನು ಏರ್ಪಡಿಸಿಕೊಳ್ಳುವುದಲ್ಲದೆ ಹೊಸ ವೈಶಿಷ್ಟ್ಯಗಳನ್ನೂ ಕಂಡುಕೊಳ್ಳುವರು. ಆಗ ಮಾತ್ರವೇ ಆ ವಸ್ತುವಿನ ಪರಿಕಲ್ಪನೆ ರೂಪುಗೊಳ್ಳುತ್ತದೆ. ಮನುಷ್ಯ ತನ್ನನ್ನು ತಾನು ಮೀರಿ ತನ್ನ ಕಣ್ಪಟಲದ ಮುಂದೆ ಕಾಣದ ಅಮೂರ್ತ ವಿಷಯ-ವಸ್ತುಗಳ ಬಗ್ಗೆ ಯೋಚಿಸಿ ನಿರರ್ಗಳವಾಗಿ ಮಾತನಾಡಬಲ್ಲ. ಇದು ಭಾಷೆಯಿಂದ ಮಾತ್ರ ಸಾಧ್ಯ. ಆದ್ದರಿಂದ, ಮಗುವಿನ ಮನಸ್ಸಿನಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಮತ್ತು ಹೊಸ-ವಿಭಿನ್ನ ಸಂದರ್ಭಗಳಲ್ಲಿ ಪರಿಕಲ್ಪನೆಗಳನ್ನು ಬಳಸಲು ಅವಕಾಶ ನೀಡಬೇಕಿದೆ. ಆಗ ಮಾತ್ರ ಮಗುವಿಗೆ ಅದರದೇ ಆದ ತಿಳುವಳಿಕೆ ಬರುತ್ತದೆ. ಮಗು ಯಾವಾಗ ದೊಡ್ಡದಾಗುತ್ತಾ ಬೆಳೆಯುತ್ತದೋ ತಿಳಿದಿರುವ ವಸ್ತುಗಳನ್ನು ತಿಳಿಯದೇ ಇರುವ ವಸ್ತುಗಳೊಂದಿಗೆ ಸಂಬಂಧವೇರ್ಪಡಿಸುವುದಲ್ಲದೆ ಅದರ ಬಗ್ಗೆ ಮಾತನಾಡಲು ಪ್ರಯತ್ನಿಸುತ್ತದೆ. ಆಗ ಮಾತ್ರವೇ ಆ ಮಗುವಿನಲ್ಲಿ ತನ್ನದೇ ಆದ ತಿಳುವಳಿಕೆ ಮೂಡುತ್ತದೆ.

*ಒಂದೂವರೆ ವರ್ಷದ ಮಗು ಆಕಾಶದಲ್ಲಿ ಹಾರುವ ನವಿಲನ್ನು ನೋಡಿದರೆ 'ಕಾ-ಕಾ' ಎಂದು ಹೇಳುತ್ತದೆ. ಅದೇ ರೀತಿ ನಡೆಯುತ್ತಿರುವ ನವಿಲನ್ನು ನೋಡಿ ಬೌ-ಬೌ ಎಂದು ಹೇಳುತ್ತದೆ. ಈ ಮಗುವಿನಲ್ಲಿ ಪರಿಕಲ್ಪನೆಗಳ ವಿಕಾಸವಾಗುತ್ತಿರುವುದರಿಂದ ಹಾರುವುದೆಲ್ಲ ಹಕ್ಕಿಗಳು ಹಾಗೂ ನಡೆಯುವುದೆಲ್ಲಾ ಪ್ರಾಣಿಗಳು. ಮತ್ತೆ ಆರು ತಿಂಗಳ ಬಳಿಕ ಗೋಡೆಯ ಮೇಲೆ ಹೋಗುತ್ತಿರುವ ಹಲ್ಲಿಯನ್ನು ನೋಡಿ ಪಲ್ಲಿ ಎಂದು ಹೇಳುತ್ತದೆ. ಯಾವಾಗ ಆ ಮಗುವಿನ ತಾಯಿ ಅದನ್ನು ಕಾಗೆ ಎಂದು ಹೇಳಿದಾಗ ಆ ಮಗು ಆಶ್ಚರ್ಯದಿಂದ ತನ್ನ ತಾಯಿಯನ್ನು ದಿಟ್ಟಿಸಿ ನೋಡುತ್ತದೆ. ಏಕೆಂದರೆ ಈ ವಯಸ್ಸಿನಲ್ಲಿ ಆ ಮಗುವಿಗೆ ವಿಂಗಡಿಸಿ ವಿಭಜಿಸುವ ಬುದ್ಧಿ ಸ್ಪಷ್ಟವಾಗುತ್ತಾ ಹೋಗುತ್ತದೆ. ಇದು ಆ ಮಗುವಿನ ಅರ್ಥೈಸುವಿಕೆ ಹಾಗೂ ಕಲಿಯುವಿಕೆಯ ರೀತಿಯೂ ಆಗಿರುತ್ತದೆ. ಯಾವುದೇ ವಸ್ತುವನ್ನು ನೋಡಿ ಮಕ್ಕಳು ಅದು ಏನೆಂದು ಕೇವಲ ಶಬ್ದಗಳನ್ನು ಮಾತ್ರ ಕೇಳದೆ ಆ ವಸ್ತುವಿನ ಬಗ್ಗೆ ತಿಳಿದುಕೊಳ್ಳಲು ಕೇಳುತ್ತಾರೆ. ಮಕ್ಕಳು ಯಾವ ಭಾಷೆಯನ್ನು ಮೊದಲು ಮಾತನಾಡಲು ಪ್ರಾರಂಭಿಸುವರೋ ಅದೇ ಭಾಷೆಯಲ್ಲಿ ಅವರ ಗ್ರಹಿಕೆಯು ಸಾಧ್ಯವಾಗುತ್ತದೆ ಅದರಲ್ಲೇ ಅರ್ಥವನ್ನು ಹುಡುಕುವರು. ಈ ತಿಳುವಳಿಕೆ ಅವರಲ್ಲಿ ಯಾವ ರೀತಿಯ ಮಹತ್ವ ಪಡೆದಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳುವ ಅವಶ್ಯಕತೆ ಇದೆ.*

## ಭಾಷೆ ಮತ್ತು ಸಾಮಾಜಿಕ ಸಮಾನತೆ

ಸಮುದಾಯ ಜೀವನ, ಭಾಷೆ ಮತ್ತು ಮನುಜ ಇವೆಲ್ಲವೂ ಒಂದಕ್ಕೊಂದು ಬೆಸೆದುಕೊಂಡು ಸೃಷ್ಟಿಯಲ್ಲಿ ದೊಡ್ಡ ಪಾತ್ರವನ್ನು ವಹಿಸುತ್ತದೆ. ಮಗು ತನ್ನ ಅನುಭವಗಳನ್ನು ಭಾಷೆಯ ಮೂಲಕವೇ ವ್ಯಕ್ತಪಡಿಸುತ್ತದೆ. ಈ ಪ್ರಕ್ರಿಯೆಯು ಯಾವುದಾದರೂ ಭಾಷೆಯ ಮೂಲಕವೇ ಆಗುವುದು. ಈ ಭಾಷೆಯು ಮಗುವಿನ ಮನೆ ಭಾಷೆ/ ಮಾತೃ ಭಾಷೆ ಆಗಿರುತ್ತದೆ. ಅಂದರೆ ಸೃಷ್ಟಿಯ ಮೊದಲ

ಪ್ರಯತ್ನ ತನ್ನದೇ ಭಾಷೆಯಲ್ಲಿ ಪ್ರಾರಂಭವಾಗುತ್ತದೆ. ಏಕೆಂದರೆ ಭಾವನಾತ್ಮಕ ಹಾಗೂ ಆಂತರ್ಯದ ಆಳದಿಂದ ಹೊರಡುವ ಶಬ್ದಗಳು ತಮ್ಮದೇ ಆದ ಮಾತೃಭಾಷೆಯಲ್ಲಿ ಮಾತ್ರವೇ ಸಾಧ್ಯ.

ಮಗು ಮೊದಲ ಬಾರಿಗೆ ಶಾಲೆಗೆ ಬಂದಾಗ ಶಿಕ್ಷಕನು ಮಕ್ಕಳಿಗೆ ನಿಮ್ಮ ಭಾಷೆಯಲ್ಲಿ ಮಾತನಾಡಬೇಡಿ ಎಂದು ತಾಕೀತು ಮಾಡುವುದಲ್ಲದೆ ಶಿಕ್ಷಕರು ಹೇಳಿದ ಭಾಷೆಯಲ್ಲೇ ಮಾತನಾಡಬೇಕು ಎಂದು ಹೇಳುವುದು ಅತ್ಯಂತ ಸಾಮಾನ್ಯವಾದವಿಷಯವಾಗಿದೆ.ಆದರೆಮಗುಇನ್ನೂಯೋಚಿಸದೇಇರುವಂತಹ ಹಾಗೂ ಮಾತನಾಡದಿರುವ ಭಾಷೆಯಾಗಿರುತ್ತದೆ. ಇದು ಮಕ್ಕಳ ಬೆಳವಣಿಗೆಗೆ ಅತ್ಯಂತ ಅಪಾಯಕಾರಿ. ನಾವು ಗಮನ ಹರಿಸಬೇಕಾದ ವಿಷಯ ಏನೆಂದರೆ ಮಗು ತನ್ನ ಮಾತೃಭಾಷೆಯಲ್ಲಿ ತನ್ನನ್ನು ತಾನು ನಿರ್ಮಿಸಿಕೊಳ್ಳುವುದಲ್ಲದೆ ತನ್ನ ಅನುಭವಗಳನ್ನು ಹಂಚಿಕೊಳ್ಳುತ್ತದೆ ಹಾಗೂ ವಿವರಿಸುತ್ತದೆ. ನಾವು ಇದನ್ನು ನಿರಾಕರಿಸಿದರೆ ಕೇವಲ ಮಗುವನ್ನು ನಿರಾಕರಿಸಿದಂತಲ್ಲ, ಬದಲಿಗೆ ಸಾಮಾಜಿಕ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಸ್ವಾತಂತ್ರ್ಯದ ನಿರಾಕರಣೆಯಾಗಿರುತ್ತದೆ. ಈ ಪ್ರವೃತ್ತಿಯು ಮೌನ ಸಂಸ್ಕೃತಿಯ ಜೊತೆ ಜೊತೆಗೆ ಒಂದು ಆಕ್ರಮಣ ಪ್ರವೃತ್ತಿಯಿರುವ ಸಮಾಜವನ್ನು ಹುಟ್ಟುಹಾಕುತ್ತದೆ. ಏಕೆಂದರೆ ಪದಗಳ ಮಾಧ್ಯಮದಿಂದ ವ್ಯಕ್ತ ವಾಗದಿದ್ದಾಗ ಅವು ಅಡ್ಡದಾರಿಗಳಿಗೆ ಎಡೆ ಮಾಡಿಕೊಟ್ಟು ಕೆಲಸಕ್ಕೆ ಬಾರದ ವಿಷಯಗಳಿಗೆ ಆಸ್ಪದ ಕೊಡಬಹುದಾದ ಪರಿಸ್ಥಿತಿ ನಿರ್ಮಾಣವಾಗಬಹುದು. ಸಹಿಷ್ಣುತೆಯ ಭಾವ ತರಲು ಮಕ್ಕಳಿಗೆ ಅವರ ಭಾಷೆಯಲ್ಲಿ ಆಲೋಚಿಸುವ, ವಿಚಾರ ಮಾಡುವ, ಮತ್ತು ಓದುವ-ಬರೆಯುವ ಅವಕಾಶ ಕಲ್ಪಿಸಿಕೊಡಬೇಕಿದೆ. ಏಕೆಂದರೆ ಗಾಂಧೀಜಿಯವರು ನೂರು ವರ್ಷಕ್ಕೂ ಮೊದಲು (1909 ರಲ್ಲಿ)ತಮ್ಮ 'ಹಿಂದ್ ಸ್ವರಾಜ್' ಕೃತಿಯನ್ನು ಆಂಗ್ಲ ಭಾಷೆಯಲ್ಲಿ ಬರೆಯದೇ ತಮ್ಮ ಮಾತೃಭಾಷೆ ಗುಜರಾತಿಯಲ್ಲಿ ಬರೆದಿದ್ದಾರೆ.

ನಮ್ಮ ಶಿಕ್ಷಣ ವ್ಯವಸ್ಥೆಯು ಕೆಲವು ಜನರ ಭಾಷೆಗಳನ್ನು ಸ್ವೀಕರಿಸಿದರೆ, ಮತ್ತೆ ಕೆಲವು ಭಾಷೆಗಳನ್ನು ತಿರಸ್ಕರಿಸುತ್ತದೆ. ಈ ನಿರಾಕರಣೆಯು ಶಿಕ್ಷಣವನ್ನು ಪಡೆಯುವ ಅಥವಾ ಜ್ಞಾನ ಸಂಪಾದನೆಯ ಏಕೈಕ ಸಾಧನೆಯ ನಿರಾಕರಣೆಯಾಗಿದೆ. ನಾವು ಹೊಸ ಯಂತ್ರಗಳನ್ನು ರಚಿಸುವುದು, ಹೊಸ ಸಂಶೋಧನೆ ಮಾಡುವುದು, ನಮ್ಮ ಬಗ್ಗೆ ಮತ್ತು ಸಮಾಜದ ಬಗ್ಗೆ ಹೊಸ ರೀತಿಯಲ್ಲಿ ಯೋಚಿಸುವುದು ಇವೆಲ್ಲಾ ಸಾಧ್ಯವಾಗುವುದು ನಮ್ಮ ಭಾಷೆಯಲ್ಲಿ ಯೋಚಿಸಿದಾಗ ಮಾತ್ರ. ಇದು ಯಾವಾಗ ಸಾಧ್ಯವಾಗುವುದೆಂದರೆ ಯಾವಾಗ ಪ್ರತಿಯೊಂದು ಶಾಲೆಯಲ್ಲಿ ಭಾಷಾ ಶಿಕ್ಷಣವನ್ನು ಹೊಂದಿಕೊಳ್ಳುವಂತೆ ಮಾಡಿದಾಗ ಮಾತ್ರ.

## ಮಗುವಿನ ಅಸ್ಮಿತೆಯ ಸವಾಲು

ತಮ್ಮದೇ ಆದಂತಹ ಭಾಷಾ ನೀತಿಯನ್ನು ಹೊಂದಿರುವಂತಹ ಎರಡು ಶಾಲೆಗಳ ಬಗ್ಗೆ ಊಹೆ ಮಾಡಿಕೊಳ್ಳಿ. ಒಂದು ಶಾಲೆಯ ಪರಿಸರದಲ್ಲಿ ಅಲ್ಲಿಬರುವ ಮಗುವಿನ ಭಾಷೆ ಅಥವಾ ಬುಡಕಟ್ಟು ಭಾಷೆ ಅಥವಾ ಅದರ ಸ್ವಂತ ಮನೆಯ ಭಾಷೆಯಾಗಲಿ - ಅದನ್ನು ಸಂಪೂರ್ಣ ಸಹಜವಾಗಿ ಹಾಗೂ ಗೌರವದಿಂದ ಕಾಣಲಾಗುತ್ತದೆ. ಅವರದೇ ಭಾಷೆಯಲ್ಲಿ ಮಾತನಾಡಿದರೂ, ಅವನನ್ನು ತಪ್ಪಾಗಿ ತಿಳಿಯುವುದೂ ಇಲ್ಲ ಅಥವಾ ಅವನನ್ನು "ದಡ್ಡ" ಎಂದು ಕರೆಯುವುದೂ ಇಲ್ಲ. ಅವರ ಭಾಷೆಯಲ್ಲಿ, ಅವರು ತಮ್ಮ ತಂದೆ, ಅಜ್ಜ ಅಥವಾ ಯಾವುದೇ ಹಿರಿಯರನ್ನು 'ನೀನು' ಎಂದು ಏಕವಚನದಲ್ಲೇ ಸಂಭೋಧಿಸಿದರೂ, ಶಿಕ್ಷಕರಿಗೆ "ನೀನು" ಎಂದು

ಏಕವಚನದಲ್ಲೇ ಸಂಭೋಧಿಸಿದರೂ ಅವನನ್ನು ಅವಮಾನಿಸದೆ, ಆ ಮಗುವನ್ನು ಪೆದ್ದ ಅಂತ ಕರೆಯದಿರುವ ಈ ಶಾಲೆಯು ಇಂತಹ ಮಗುವನ್ನು ಕ್ರಮೇಣ ವಿಶಾಲ ಪ್ರಪಂಚ ಹಾಗೂ ಜ್ಞಾನದ ಜೊತೆಗೂಡಿಸಲು ಮತ್ತು ಪ್ರಾದೇಶಿಕ ಭಾಷೆಯ ಕಡೆ ಒಲವು ತರಲು ಪ್ರಯತ್ನಿಸುತ್ತದೆ. ಈ ಕೆಲಸವು ಅವರ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಘಾಸಿಗೊಳಿಸದೆಯೇ ನಿಧಾನವಾಗಿ ಹಾಗೂ ಸಾವಕಾಶವಾಗಿ ಮಾಡಲಾಗುವುದು. ಈ ಶಾಲೆಯಲ್ಲಿ ಮಗು ಮೊದಲು ಗಳಿಸಿದ ಜ್ಞಾನ ಸ್ವಾಗತಾರ್ಹವಾಗಿರುತ್ತದೆ. ಇಲ್ಲಿ ಮಗು ತನ್ನ ಶಿಕ್ಷಣವನ್ನು ಮಾತೃಭಾಷೆಯಿಂದ ಪ್ರಾದೇಶಿಕ ಭಾಷೆಯಲ್ಲಿ ಆರಾಮದಾಯಕವಾಗಿ ಪಡೆಯುತ್ತದೆ.

ಇಲ್ಲಿ ಇನ್ನೊಂದು ರೀತಿಯ ಶಾಲೆ ಇದೆ. ಅಲ್ಲಿ ಮಗುವಿನ ಪ್ರವೇಶದ ಜೊತೆಗೆ ಮಗುವಿನ ಶಿಕ್ಷಣ ಪರ ಭಾಷೆಯಿಂದ ಆರಂಭವಾಗುತ್ತದೆ. ಆ ಮಗು ತನ್ನ ಭಾಷೆಯಲ್ಲಿ ಒಂದು ಶಬ್ದ ಉಪಯೋಗಿಸಿದರೂ ಸರಿ ಅದಕ್ಕೆ 'ದಡ್ಡ' ಎಂದು ಕರೆಯಲಾಗುತ್ತದೆ. ಈ ಶಾಲೆಯಲ್ಲಿ ಮಕ್ಕಳು ತಮ್ಮ ಭಾಷೆಯಲ್ಲಿ ವ್ಯವಹರಿಸಲು ಬಿಡುವುದಿಲ್ಲ. ಈ ಎರಡು ಶಾಲೆಗಳನ್ನು ಹೋಲಿಕೆ ಮಾಡಿ ನೋಡಿದಾಗ, ಮೊದಲನೇ ಶಾಲೆಯಲ್ಲಿ ಕಲಿಯುವ ಮಕ್ಕಳು ಹೆಚ್ಚು ಆತ್ಮವಿಶ್ವಾಸದಿಂದ ಕೂಡಿದವರಾಗಿರುತ್ತಾರೆ. ತಮ್ಮ ಸಂಸ್ಕೃತಿಯ ಬೇರುಗಳಿಗೆ ಅಂಟಿಕೊಂಡಿರುವ ಈ ಮಕ್ಕಳಿಗೆ ತಮ್ಮ ಮನದಲ್ಲಿ ಅವರ ಭಾಷೆಯ ಬಗ್ಗೆ ಹೀನ ಭಾವನೆ ಇರುವುದಿಲ್ಲ. ಈ ಮಕ್ಕಳಲ್ಲಿ ಪ್ರಾಂತೀಯ ಹಾಗೂ ಇಂಗ್ಲಿಷ್ ಭಾಷೆಯ ಜ್ಞಾನ ಅತ್ಯಂತ ಅಧಿಕಾರಯುತವಾಗಿ ಇರುತ್ತದೆ. ಆದರೆ ಮತ್ತೊಂದು ಶಾಲೆಯಲ್ಲಿ ಓದಿದ ಮಕ್ಕಳು ತಮ್ಮ ಭಾಷೆಯನ್ನು ನಿರಾಕರಿಸಿದ್ದರ ಪ್ರಭಾವದಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಕಡಿಮೆಯಾಗಿ ಬೇರೆ ಭಾಷೆಯ ಗೊಂದಲಕ್ಕೆ ಬಿದ್ದು ಆ ಮಕ್ಕಳ ಜ್ಞಾನ ಅಭಿವ್ಯಕ್ತಿ ಪಡಿಸುವುದರ ಬದಲಿಗೆ ಕೇವಲ ಸರಿಯಾದ ಉಚ್ಚಾರಣೆ ಹಾಗೂ ವ್ಯಾಕರಣದ ಮೇಲೆ ಅವರ ಮನಸ್ಸು ಹೋಗಿ ಬಿಟ್ಟಾಗ ನಿರರ್ಗಳ ಚರ್ಚೆಯಲ್ಲಿ ತೊಡಗುವುದರ ಬದಲಿಗೆ ಭಾಷೆಯನ್ನು ಸರಿಯಾಗಿ ಕಲಿಯುವುದರಲ್ಲೇ ನಿರತರಾಗುತ್ತಾರೆ.

*ದುಮಕಾ ಕ್ಷೇತ್ರದಲ್ಲಿ ಸಾಕ್ಷರತೆಯ ಅಭಿಯಾನದ ಮೂಲಕ ಹಿಂದಿಯಲ್ಲಿ ಪಠ್ಯಪುಸ್ತಕಗಳ (ಪ್ರೌಢ ವಯಸ್ಕರಿಗಾಗಿ)ಅಭಿವೃದ್ಧಿ ಪಡಿಸಲಾಯಿತು. ಪುಸ್ತಕಗಳು ಬಹಳ ಚೆನ್ನಾಗಿದ್ದವು ಆದರೆ ಅವುಗಳನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗಿತ್ತು. ನಂತರ ಸ್ಥಳೀಯ ಜನರ ಸಹಾಯದಿಂದ ಹೊಸ ಪಠ್ಯಪುಸ್ತಕಗಳನ್ನು ಅಭಿವೃದ್ಧಿ ಮಾಡಲಾಯಿತು ಮತ್ತು ಅದು ಬಹಳ ಜನಪ್ರಿಯವಾಯಿತು. ಈ ಪುಸ್ತಕಗಳು ಸಂತಾಲಿ ಭಾಷೆಯಲ್ಲಿ ರೂಪುಗೊಂಡಿತು. ಕೆಲವರು ಪ್ರಾರಂಭಿಕ ಹಂತದಲ್ಲಿ ಇದೇ ಸರಿಯಾಗುವುದು ಎಂದು ಅಭಿಪ್ರಾಯಪಟ್ಟರು ಆನಂತರ ವ್ಯಾವಹಾರಿಕ ಭಾಷೆಯನ್ನು ಸೇರಿಸಬೇಕೆಂದು ಅಭಿಪ್ರಾಯಪಟ್ಟರು.*

*ಈ ಅನುಭವದ ಉಪಯೋಗವನ್ನು ಶಾಲಾ ಶಿಕ್ಷಣದಲ್ಲಿಯೂ ಮಾಡಬೇಕಿದೆ ಅಂದರೆ ತಿಳುವಳಿಕೆಗೆ ಅವರ ಭಾಷೆ, ನಂತರ ನಿಧಾನವಾಗಿ ಅಲ್ಲಿನ ವ್ಯಾವಹಾರಿಕ ಭಾಷೆ ಅಥವಾ ಸಂಪರ್ಕ ಭಾಷೆಯಾಗಬೇಕಿದೆ.*

*— ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರು*

ಮಕ್ಕಳು ತಮ್ಮ ಸುತ್ತಮುತ್ತಲಿನ ಪ್ರಪಂಚವನ್ನು ಹಾಗೂ ಇಡೀ ಜಗತ್ತನ್ನು ಅರ್ಥಮಾಡಿಕೊಳ್ಳುತ್ತಾರೆ ಹಾಗೂ ಶಾಲೆಗೆ ತಮ್ಮ ಸಂಪೂರ್ಣ ಗುರುತನ್ನು ತೆಗೆದುಕೊಂಡು ಬರುವರು. ಏನಾದರೂ ಇವರ ಈ ಅಸ್ಮಿತೆಯನ್ನು ಅವರ ಮನೆಯ ಭಾಷೆಯನ್ನು ತಿರಸ್ಕರಿಸಿದರೆ ಇದುವರೆಗೂ ಮಗು ಯಾವ ಭಾಷೆಯಲ್ಲಿ ತಾನು

ಬೆಳೆದಿದೆಯೋ ಅದನ್ನೇ ತಿರಸ್ಕರಿಸಿದಂತಾಗುತ್ತದೆ. ಮಗು ಯಾವ ಭಾಷೆಯಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದೆಯೋ, ಯಾವ ಭಾಷೆಯ ಮುಖಾಂತರ ತನ್ನ ಜಗತ್ತನ್ನು ಅರಿತುಕೊಂಡಿದೆಯೋ ಅದನ್ನು ನಾವು ನಿರಾಕರಿಸಿದರೆ ಕೇವಲ ಮಾತೃಭಾಷೆಯ ನಿರಾಕರಣೆಯಲ್ಲ, ಆದರೆ ಅವರ ಅರಿವಿನ/ತಿಳುವಳಿಕೆಯ ಆಧಾರವನ್ನೇ ನಿರಾಕರಿಸಿದ ಹಾಗೆ ಆಗುತ್ತದೆ. ಅದಕ್ಕಾಗಿಯೇ ನಾವು ಮಗುವಿನ ಭಾಷೆಯನ್ನು ಸ್ವೀಕರಿಸಬೇಕಿದೆ. ಅವನ ಭಾಷೆಗೆ ಇತಿ-ಮಿತಿ ಇರುತ್ತದೆ. ಆದರೆ ನಾವು ಅದನ್ನು ಸ್ವೀಕರಿಸಲೇಬೇಕಿದೆ. ಆರಂಭಿಕ ಹಂತಗಳಲ್ಲಿ ಅವನ ಸ್ವಂತ ಭಾಷೆಯಲ್ಲಿ ಅವನಿಗೆ ಓದಲು (ಅರ್ಥಮಾಡಿಕೊಳ್ಳಲು)ಅವಕಾಶ ನೀಡಬೇಕು. ಕ್ರಮೇಣ ಅವರು ರಾಜ್ಯದ ಹಾಗೂ ವಿಶಾಲ ಜ್ಞಾನ ಇರುವ ಭಾಷೆಗಳೊಂದಿಗೆ ಸಂಬಂಧವೇರ್ಪಡಿಸಬೇಕು. ಈ ಪ್ರಯತ್ನದಲ್ಲಿ ಪ್ರಾಂತೀಯ ಭಾಷೆಗಳ ಹಾಗು ಅವರ ಭಾಷೆಗಳಿಂದ ಪ್ರಭಾವಿತವಾಗುವುದನ್ನು ತಪ್ಪಿಸಬೇಕಿದೆ. ಈ ಪ್ರಯತ್ನ ಹೊಸ ವಿಷಯಗಳನ್ನು ಸಾರ್ಥಕ ರೀತಿಯಲ್ಲಿ ಗ್ರಹಿಸುವುದರಲ್ಲಿ ಸಹಾಯಕವಾಗುವುದಲ್ಲದೇ ಓದು ಕಲಿಕೆಯಲ್ಲಿ ಸ್ವಾವಲಂಬನೆ ಹಾಗೂ ಆತ್ಮವಿಶ್ವಾಸವನ್ನು ತುಂಬುತ್ತದೆ. ಮಗು ಯಾವ ಭಾಷೆಯನ್ನು ಮಾತನಾಡಲು ಪ್ರಾರಂಭಿಸಿತೋ ಅದೇ ಭಾಷೆಯಲ್ಲಿ ಗ್ರಹಿಕೆಯಾಗುತ್ತದೆ ಹಾಗೂ ಅದರಲ್ಲೇ ಅದು ಅರ್ಥವನ್ನು ಹುಡುಕುತ್ತದೆ. ಈ ರೀತಿಯ ತಿಳುವಳಿಕೆಯು/ಗ್ರಹಿಕೆ ಮಕ್ಕಳ ಮೇಲೆ ಯಾವ ರೀತಿಯ ಮಹತ್ವವಾಗಿದೆ ಎಂಬುದನ್ನು ಅರಿಯಬೇಕಿದೆ. ಇದಕ್ಕಾಗಿ ತರಗತಿಯಲ್ಲಿ ನವೀನ ರೀತಿಯಲ್ಲಿ ತಯಾರಿ ನಡೆಸುವ ಅವಶ್ಯಕತೆ ಇದೆ.

*ನಾವು ಸ್ವರಾಜ್ಯದ ಬಗ್ಗೆಯೂ ಪರ ಭಾಷೆಯಲ್ಲಿ ಮಾತನಾಡುತ್ತೇವೆ-ಇದು ಎಷ್ಟು ಶೋಚನೀಯ ಹಾಗೂ ದು:ಖಕರವಾದ ಸಂಗತಿ? ಯಾವ ಶಿಕ್ಷಣವು ಬ್ರಿಟೀಷರಿಂದ ತಿರಸ್ಕರಿಸಲ್ಪಟ್ಟಿದೆಯೋ, ಅದು ನಮಗೆ ಅತ್ಯಂತ ಪ್ರತಿಷ್ಠಿತ ಸಂಗತಿಯಾಗಿದೆ, ಎಂಬುದನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ಬ್ರಿಟೀಷರು ಇದನ್ನೆಲ್ಲಾ ಮರೆತೇ ಹೋಗಿದ್ದಾರೆ. ಆದರೆ ನಾವು ನಮ್ಮ ಅಜ್ಞಾನದಿಂದಾಗಿ ಇದಕ್ಕೇ ಅಂಟಿಕೊಂಡಿದ್ದೇವೆ. ಆದರೆ ಅಲ್ಲಿ ಅವರು ತಮ್ಮ-ತಮ್ಮದೇ ಆದ ಭಾಷೆಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸುತ್ತಿದ್ದಾರೆ. ವೇಲ್ಸ್ ಇಂಗ್ಲೆಂಡ್ ನ ಒಂದು ಸಣ್ಣ ತಾಲೂಕು. ಅವರ ಭಾಷೆ ಧೂಳಿನ ಕಣಕ್ಕೂ ಸಮವಿಲ್ಲದಂತಹ ಭಾಷೆಯನ್ನೇ ಪುನಶ್ಚೇತನಗೊಳ್ಳುತ್ತಿದೆ. ವೇಲ್ಸ್‌ನ ಮಕ್ಕಳು ಕೇವಲ ವೇಲ್ಸ್‌ನ ಭಾಷೆಯಲ್ಲಿ ಮಾತ್ರ ಮಾತನಾಡಬೇಕು ಎಂಬಂತಹ ಪ್ರಯತ್ನ ನಡೆಯುತ್ತಿದೆ. ಇದರಲ್ಲಿ ಇಂಗ್ಲೆಂಡ್ ನ ಖಜಾಂಚಿ ಲಾರ್ಡ್ ಜಾರ್ಜ್ ಪ್ರಮುಖ ಪಾತ್ರವಹಿಸುತ್ತಾರೆ. ಭರತದಲ್ಲಿ ನಮ್ಮ ನಡೆ ಹೇಗಿದೆ? ನಾವು ಒಬ್ಬರಿಗೊಬ್ಬರು ಪತ್ರಗಳನ್ನು ಬರೆಯುತ್ತೇವೆ. ಅದು ತಪ್ಪು ಇಂಗ್ಲಿಷ್ ನಲ್ಲಿ ಬರೆಯುತ್ತೇವೆ. ನಮ್ಮ ಒಳ್ಳೆಯ ವಿಚಾರಗಳ ಅಭಿವ್ಯಕ್ತಿಯನ್ನು ನಾಶ ಮಾಡುವ ಮಾಧ್ಯಮ ಈ ಇಂಗ್ಲೀಷ್. ಹಾಗಾದರೆ ಮುಂಬರುವ ಪೀಳಿಗೆ ನಮ್ಮನ್ನು ತಿರಸ್ಕರಿಸಿ ನಮ್ಮ ಮೇಲೆ ಹಿಡಿ ಶಾಪ ಹಾಕಿದರೆ, ಖಂಡಿತವಾಗಿಯೂ ಅದು ನಮ್ಮ ಆತ್ಮಗಳಿಗೆ ತಗುಲುತ್ತದೆ ಎಂಬುದು ನನ್ನಾಭಿಪ್ರಾಯ. ನಮ್ಮೆಲ್ಲಾಭಾಷೆಗಳನ್ನು ಉಜ್ವಲ ಹಾಗೂ ಪ್ರಕಾಶಮಾನವಾಗಿ ಬೆಳಗಿಸಬೇಕಿದೆ. ನಾವು ನಮ್ಮ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯಬೇಕು. ಇದರ ಅರ್ಥ ಏನು ? ಇದನ್ನು ಹೆಚ್ಚು ತಿಳಿದುಕೊಳ್ಳುವ ಸ್ಥಳ ಇದಲ್ಲ. ಯಾವ ಇಂಗ್ಲಿಷ್ ಪುಸ್ತಕಗಳು ಉಪಯುಕ್ತವಾಗಿವೆಯೋ ಅವನ್ನು ನಮ್ಮ ಭಾಷೆಯಲ್ಲಿ ಅನುವಾದಿಸಬೇಕಾಗುವುದು*

*- ಹಿಂದ್ ಸ್ವರಾಜ್ ನಿಂದ*

- ಸಮಯ, ಭಾಷೆ ಹಾಗೂ ತಿಳುವಳಿಕೆ ಪರಿವರ್ತನಶೀಲವಾಗಿದ್ದು ನಾವು ಈ ಪರಿವರ್ತನೆಯ ಪ್ರಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು ಅರ್ಥವನ್ನು ಹೊರ ತೆಗೆಯುವ ಅವಕಾಶವನ್ನು ಕಲ್ಪಿಸಬೇಕಿದೆ.
- ಪ್ರಪಂಚದ ಹಲವಾರು ಭಾಷೆಗಳನ್ನೂ ಕಲಿಯುವ ಸಾಮರ್ಥ್ಯದೊಂದಿಗೆ ಮಗು ಜನಿಸುತ್ತದೆ. ತರಗತಿಯಲ್ಲಿ ಈ ಸಾಮರ್ಥ್ಯವನ್ನು ಗೌರವಿಸಬೇಕಿದೆ.
- ಮಗುವಿನ ವಿಚಾರ, ಅದರ ಭಾವನೆ ಹಾಗೂ ಭಾಷೆಗೆ ಸ್ಥಾನವನ್ನು ನೀಡಬೇಕಾಗಿದೆ.
- ನಾವು ಅವನಿಗೆ ಶಬ್ದಗಳೊಂದಿಗೆ ಆಡಲು ಅವಕಾಶಗಳನ್ನು ನೀಡಬೇಕಿದೆ.
- ಮಗುವಿಗೆ ಸ್ವಂತ ಅರ್ಥವನ್ನು ಸೃಷ್ಟಿಸಲು ನಾವು ಅವಕಾಶವನ್ನು ನೀಡಬೇಕು.
- ವ್ಯಾಖ್ಯಾನವಿಲ್ಲದೆ ಪರಿಕಲ್ಪನೆಯನ್ನು ಸಮೀಪಿಸಲು ಶಿಕ್ಷಕರಿಗೆ ಒಂದು ವಿಧಾನವನ್ನು ರೂಪಿಸಬೇಕಿದೆ.
- ಪಠ್ಯ-ವಿಷಯದ ಗಡಿಗಳನ್ನು ವಿವರವಾಗಿ ಬದಲಾಯಿಸಬೇಕಾಗಿದೆ.
- ತಾಂತ್ರಿಕವಾದ ಸಾರವಿಲ್ಲದ ಅನುವಾದವನ್ನು ಸೃಜನಶೀಲಗೊಳಿಸಬೇಕಿದೆ.
- ಸನ್ನಿವೇಶ ನಿರ್ಮಾಣ ಮಾಡದೆ ಭಾಷೆಯನ್ನು ಕಲಿಸುವುದು ಸರಿಯಾದ ವಿಧಾನವಲ್ಲ. ಅಂದರೆ ಸಾಂದರ್ಭಿಕ ಭಾಷಾ ಕಲಿಕೆಯನ್ನು ಉತ್ತೇಜಿಸಬೇಕಾಗಿದೆ. ಅಂದರೆ.ಕ ಖ ಗ ಘ ಅಥವಾ ಎಬಿಸಿಡಿ. ಇವುಗಳೇ ಭಾಷೆ ಎಂಬುದರ ಭ್ರಮೆಯನ್ನು ತೆಗೆದುಹಾಕಬೇಕಿದೆ.
- ಭಾಷೆಯು ಮಗುವಿನ ಗುರುತು, ಸಂಸ್ಕೃತಿ ಮತ್ತು ಬೆಳವಣಿಗೆಗೆ ಸಂಬಂಧಿಸಿದೆ.
- ಭಾಷೆ ಮಗುವಿನ ಪ್ರಗತಿಯ ಮಾಧ್ಯಮವಾಗಿದೆ.
- ಮಗುವು ಹೊಸದನ್ನು ನೋಡಿದಾಗ, ಅದು ಭಾಷೆಯೊಂದಿಗೆ ಜೋಡಿಸಿ ನೋಡುತ್ತದೆ.
- ಅನುಭವಗಳನ್ನು ಅರ್ಥೈಸುವ ಮತ್ತು ವಿಶ್ಲೇಷಿಸುವ ಆಧಾರವು ಭಾಷೆಯಾಗಿದೆ.
- ಮಾತನಾಡಲು ಬರದ ಮಕ್ಕಳಿಗೂ ಅವರದೇ ಆದ ಭಾಷೆ ಇರುತ್ತದೆ.
- ಹಿಂದಿ ಭಾಷೆಗೆ ಸಂಬಂಧಿಸಿದ ಸ್ಥಳೀಯ ಭಾಷೆಗಳ ಪ್ರವಾಹವು ನಿರರ್ಗಳವಾಗಿ ಹರಿಯುವಂತೆ ಶಿಕ್ಷಕರು ಖಚಿತಪಡಿಸಿಕೊಳ್ಳಬೇಕಾಗಿದೆ. ಅದು ಉಚ್ಚಾರಣೆ ಆಗಿರಲಿ. ವಾಕ್ಯರಚನೆ ಆಗಿರಲಿ ಅಥವಾ ಭಾಷಾ ವೈಶಿಷ್ಟ್ಯಗಳಿರಲಿ. ಇದರಿಂದ ಸ್ಥಳೀಯ ಸಮುದಾಯಕ್ಕೆ ಬಲ ಸಿಗುತ್ತದೆ.

## ಶಿಕ್ಷಣದ ಅರ್ಥಪೂರ್ಣ ಪ್ರಯತ್ನಗಳು

ನಮ್ಮ ಶಿಕ್ಷಣ ವ್ಯವಸ್ಥೆಯು ಮಕ್ಕಳ ಮೇಲೆ ಇನ್ನೊಂದು ಭಾಷೆ ಅಥವಾ ಪ್ರಾದೇಶಿಕ ಭಾಷೆಯನ್ನು ಹೇರುವ ಮೂಲಕ ಮೌನದ ಸಂಸ್ಕೃತಿಗೆ ಜನ್ಮ ಕೊಟ್ಟು ಮಕ್ಕಳ ತಿಳುವಳಿಕೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಲು ಪ್ರಯತ್ನಿಸಿದೆ. ಪಪುಆ ಗಿನಿ ಎಂಬ ಅನೇಕ ದ್ವೀಪಗಳಿರುವ ಸಣ್ಣ ದೇಶವಿದೆ - ಈ ದೇಶ ಪ್ರಾಥಮಿಕ ಶಿಕ್ಷಣವನ್ನು 400ಕ್ಕೂ ಹೆಚ್ಚು ಭಾಷೆಗಳಲ್ಲಿ ನೀಡಬಹುದೆಂಬುದನ್ನು ತನ್ನ ಭಾಷಾ ನೀತಿಯ ಮೂಲಕ ಸಾಬೀತು ಮಾಡಿದೆ. ಈ ದೇಶವು ಭಾಷೆಯನ್ನು ಅರ್ಥಮಾಡಿಕೊಳ್ಳುವ ವಾಹಕವನ್ನಾಗಿ ಮಾಡಲು ಪ್ರಯತ್ನ ಮಾಡಿದೆ. ಮಕ್ಕಳು ತಮ್ಮ ಸ್ವಂತ ಭಾಷೆಯಲ್ಲಿ ಇಂಗ್ಲಿಷ್ ಅಥವಾ ಪರಭಾಷೆಯೊಂದಿಗೆ ಸಂಬಂಧ ಹೆಣೆಯಲು ಪ್ರಯತ್ನಿಸಿದೆ. ಈ ದಿಶೆಯಲ್ಲಿ ನಾವೂ ಪ್ರಯತ್ನಿಸಬೇಕಿದೆ. ನಾವು

ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಜಪಾನ್, ಕೊರಿಯಾ, ಕ್ಯೂಬಾ, ಫಿನ್ಲ್ಯಾಂಡ್, ಕೆನಡಾದಂತಹ ದೇಶಗಳ ಭಾಷಾ ನೀತಿಯನ್ನು ಅನುಸರಿಸಬೇಕಿದೆ. ಯಾವುದೇ ಮಗು ತನ್ನ ಭಾಷೆಯ ಕಾರಣದಿಂದಾಗಿ ಶಿಕ್ಷಣದಲ್ಲಿ ಹಿಂದುಳಿಯಬಾರದು ಎಂದು ಕೆನಡಾ ದೇಶ ತನ್ನ ಕಾನೂನಿನಲ್ಲಿ ಮಾತೃಭಾಷೆಯನ್ನು ಬಲವರ್ಧನೆಗೊಳಿಸುವ ಈ ಹೇಳಿಕೆಯನ್ನು ನೀಡಿದೆ. ಇಲ್ಲಿ 'ಶಿಕ್ಷಣದ ಅಧಿಕಾರ ಕಾನೂನು' ಇದರಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣದ ಮಾತುಗಳಿಗೆ ಬಲ ನೀಡಿ ಈ ರೀತಿ ಹೇಳಲಾಗಿದೆ, ಅದೇನೆಂದರೆ ಮಕ್ಕಳ ಗುಣಮಟ್ಟದ ಶಿಕ್ಷಣ ಸಾರ್ಥಕವಾಗಲು ಇದು ಅತ್ಯವಶ್ಯಕವಾಗಿದೆ. ನಾವು ಮಾಡಬೇಕಾದ್ದು ಶಿಕ್ಷಣದಲ್ಲಿ ಅವರ ಸಾಮರ್ಥ್ಯದ ಬಗ್ಗೆ ನಂಬಿಕೆಯನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕಿದೆ. ಈ ರೀತಿಯ ಶಿಕ್ಷಣ ಪ್ರಥಮ ಭಾಷೆಯಲ್ಲೇ ಕೊಡಬಹುದಾಗಿದೆ. ಭಾಷಾ ವಿಜ್ಞಾನಿಗಳು ಸಹ ಹೇಳುವುದೇನೆಂದರೆ ಮೊದಲನೇ ಭಾಷೆಯ ಬುನಾದಿ ಚೆನ್ನಾಗಿದ್ದರೆ ಎರಡನೇ ಭಾಷೆ ಕಲಿಯುವುದು ಬಹಳ ಸುಲಭವಾಗುವುದು.

# 3

# ಬಹುಭಾಷೀಯತೆ

- ಬಹುಭಾಷೀಯತೆಯ ಉದ್ದೇಶ
- ಮಕ್ಕಳ ಭಾಷಾ ಸಾಮರ್ಥ್ಯ
- ಸಾರ್ವತ್ರಿಕ ವ್ಯಾಕರಣದ ಪರಿಕಲ್ಪನೆ
- ಬಹುಭಾಷೀಯತೆ ಹಾಗೂ ಅಲ್ಪಸಂಖ್ಯಾತ ಹಾಗೂ
- ಆದಿವಾಸಿ ಭಾಷೆಗಳು
- ಬಹುಭಾಷೀಯತೆ ಹಾಗೂ ದಕ್ಷಿಣ ಭಾರತೀಯ ಭಾಷೆಗಳು
- ಬಹುಭಾಷೀಯತೆ ಹಾಗೂ ಆಂಗ್ಲ ಭಾಷಾ ತರಗತಿಗಳು
- ಬಹುಭಾಷಾ ತರಗತಿ
- ಬಹುಭಾಷೀಯತೆ ಹಾಗೂ ಸವಾಲುಗಳು



ಒಂದು ಗ್ರಾಮದಲ್ಲಿ ಸುಪ್ರಸಿದ್ಧ ಖಗೋಳಶಾಸ್ತ್ರಜ್ಞ ಬರುತ್ತಿದ್ದಾನೆಂದು ಅವನು ನಕ್ಷತ್ರಗಳ ಬಗ್ಗೆ ತಿಳಿದುಕೊಂಡ ದೊಡ್ಡ ಪಂಡಿತನೆಂಬ ವಿಷಯ ಇಡೀ ಹಳ್ಳಿಯಲ್ಲಿ ಗಾಳಿಯಂತೆ ಹರಡಿತು. ಎರಡು ದಿನಗಳು ಆತಿಥ್ಯವನ್ನು ಸ್ವೀಕರಿಸಿ ಆ ಪಂಡಿತ ಕೇವಲ ಆಕಾಶದ ಕಡೆಗೇ ದೃಷ್ಟಿಸಿ ನೋಡುತ್ತಾ ಇದ್ದನು. ಮೂರನೇ ದಿನಕ್ಕೆ ಅವನು ಎಲ್ಲೂ ಕಾಣದಿದ್ದನ್ನು ನೋಡಿ ಎಲ್ಲಾ ಜನರು ಅವನನ್ನು ಹುಡುಕಲು ಪ್ರಾರಂಭಿಸಿದರು.

ಆಗ ಆ ಖಗೋಳಶಾಸ್ತ್ರಜ್ಞನು ಬಾವಿಯಲ್ಲಿ ಬಿದ್ದು ಕೈಗಳನ್ನು ಹೊಡೆಯುತ್ತಾ ಇರುವುದನ್ನು ಗಮನಿಸಿದ ಹಳ್ಳಿಗರು 'ಯಾರಿಗೆ ಭೂಮಿಯ ಮೇಲೆ ನಡೆಯಲು ದಾರಿ ಗೊತ್ತಿಲ್ಲವೋ ಅವರು ಆಕಾಶಕ್ಕೆ ಹೇಗೆ ದಾರಿ ತೋರಿಸುವರು? ಎಂದುಕೊಂಡರಂತೆ. ಅದೇ ರೀತಿ ಮಕ್ಕಳು ತಮ್ಮ ಭಾಷಾ ಶಿಕ್ಷಣಕ್ಕೆ ಸಂಬಂಧದ ಬಗ್ಗೆ ಈ ದೃಷ್ಟಾಂತ ಸಾದೃಶವಾಗಿದೆ. ಮಕ್ಕಳ ಭಾಷೆಯನ್ನು ತಳಮಟ್ಟದಿಂದಲೂ ಅಂದರೆ ಮೂಲಭೂತ ಪರಿಕಲ್ಪನೆಗಳನ್ನು ಗಟ್ಟಿಗೊಳಿಸಬೇಕಿದೆ. ಗಟ್ಟಿಗೊಳಿಸಬೇಕಿದೆ. ಬಹುಭಾಷೀಯತೆಯು ಇದೇ ರೀತಿ ಆಗಿದೆ. ಈ ಪ್ರಕ್ರಿಯೆಯಲ್ಲಿ ಸಿದ್ಧಾಂತಗಳ ಬಗ್ಗೆ ಚರ್ಚಿಸುವ ಅಗತ್ಯತೆ ಇದ್ದು ಇದನ್ನು ಶಿಕ್ಷಣದ ಜಗತ್ತಿನಲ್ಲಿ ಕಾರ್ಯಗತ ಮಾಡಬೇಕಿದೆ. ಇದರಿಂದ ನಮಗೆ ಸ್ಪಷ್ಟವಾಗುವ ಅಂಶವೆಂದರೆ ತಳಮಟ್ಟದಿಂದ ಪ್ರಗತಿಹೊಂದುವ ದಾರಿಯನ್ನು ಹುಡುಕುವ ಅವಶ್ಯಕತೆ ಇದೆ. ಬಹುಭಾಷೀಯತೆಯೂ ಇದೇ ರೀತಿಯ ದಾರಿಯಾಗಿದೆ.

## ಬಹುಭಾಷಿಕವಾದದ ಉದ್ದೇಶ

ಬಹುಭಾಷವಾದವು ನಮ್ಮ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ನಮ್ಮ ಸಂಸ್ಕೃತಿ ನಮ್ಮ ಅಸ್ಮಿತೆಗೆ ಹೊಂದಿಕೊಂಡಿದೆ. ನಾವೆಲ್ಲರೂ ಬಹುಭಾಷಿಗಳು ಹಾಗೂ ನಾವು ಬಹುಭಾಷೆಗಳಾಗುವುದು ಬೇರೆಯವರೊಂದಿಗೆ ಸಾಮರಸ್ಯದಿಂದ ಬೆರೆಯಲು ಹಾಗೂ ಅರಿಯಲು ಸಹಾಯಮಾಡುತ್ತದೆ. ಇತ್ತೀಚೆಗೆ ಒಂದು

ದೇಶದಿಂದ ಮತ್ತೊಂದು ದೇಶದಲ್ಲಿ ಜನರು ಹೋಗಿಬರುವುದು ಸಾಮಾನ್ಯವಾದ ವಿಷಯವಲ್ಲದೆ ಅಲ್ಲಿನ ಆರ್ಥಿಕ ಸಾಮಾಜಿಕ ಜೀವನದಲ್ಲೂ ಪ್ರಭಾವ ಬೀರಿದೆ. ಆದ್ದರಿಂದ ಈ ಸಮಯದಲ್ಲಿ ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿಯ ಪರಿಕಲ್ಪನೆಯು ಯಾವುದೇ ರೀತಿಯ ಅರ್ಥವನ್ನು ಹೊಂದಿರದೆ ಇದರ ಬಗ್ಗೆ ಪ್ರಾಮುಖ್ಯತೆ ಕೊಟ್ಟಾಗ ಬ್ರಹ್ಮಾಂಡದ ಜ್ಞಾನಕ್ಕೇ ಕಣ್ಣನ್ನು ಮುಚ್ಚಿಕೊಂಡ ಹಾಗೆ ಆಗುತ್ತದೆ.

ಈ ಮಾತನ್ನು ನಾವು ಅರ್ಥಮಾಡಿಕೊಳ್ಳುವುದಲ್ಲದೆ ಇದರ ಪೂರ್ಣ ಪ್ರಯೋಗವನ್ನು ಮಾಡುವೆವು. ಇದನ್ನು ಯಾರೂ ನಕಾರ ಮಾಡುವ ಹಾಗಿಲ್ಲ ಏಕೆಂದರೆ ಈ ಮಾತು ಮಕ್ಕಳ ಜೀವನಕ್ಕೂ ಸಂಬಂಧಿಸಿದೆ. ಹಾಗಾದರೆ ಮಕ್ಕಳನ್ನು ಇದರಿಂದ ಏಕೆ ದೂರ ಇಡುವುದು? ಮಕ್ಕಳನ್ನು ಅರಿತುಕೊಳ್ಳಲು ಅವರ ಸಂಬಂಧ ಖಚಿತಪಡಿಸಲು, ಅವರನ್ನು ಶಾಲೆಗೆ ಜೋಡಿಸಲು, ಅವರ ಮನೆಯ ಭಾಷೆ ಹಾಗೂ ಶಾಲೆಯ ಭಾಷೆಯನ್ನು ಒಂದು ಮಾಡಲು ಬಹುಭಾಷೀಯತೆಯ ಪಾತ್ರ ಪ್ರಮುಖವಾಗಿದೆ.

ಮಕ್ಕಳು ಮಾತೃಭಾಷೆಯನ್ನು ಚೆನ್ನಾಗಿಯೇ ತಿಳಿದುಕೊಂಡಿರುವುದಲ್ಲದೇ ತಮ್ಮ ಸುತ್ತಮುತ್ತಲ ಪರಿಸರದಿಂದ ಅದರ ಬಳಕೆಯನ್ನು ಗಮನಿಸುತ್ತಿರುತ್ತಾರೆ. ಈಗ ಈ ಮಾತಿನ ಅವಶ್ಯಕತೆಯೂ ಇದೆ. ಏಕೆಂದರೆ ಅವರ ಭಾಷೆಯಲ್ಲಿ ಬಲವಾದ ಅಡಿಪಾಯವಾನ್ನು ಹಾಕಿ ಅವರ ಭಾಷೆ ಹಾಗೂ ಇತರ ಭಾಷೆಗಳ ನಡುವೆ ಒಂದು ಸೇತುವೆ ನಿರ್ಮಾಣವಾಗಬೇಕಿದೆ. ಇದೇ ರೀತಿಯೇ ಇನ್ನೂ ಎರಡು ಮೂರು ಭಾಷೆಗಳನ್ನು ಅವರಿಗೆ ತಲುಪಿಸಿದಾಗ ಅವರು ಸಹಜವಾಗಿ ಶಿಕ್ಷಣ ಪಡೆಯಬಹುದಾಗಿದೆ..

ಮಾತೃಭಾಷೆಯ ಬಳಕೆ ಬೆನ್ನೆಲುಬಿನ ತರಹ ಸಾಗಬೇಕಿದೆ. ಬರೆಯುವುದು ಮತ್ತು ಓದುವುದನ್ನು ನಾವು ಒಂದೇ ಬಾರಿ ಕಲಿಯುತ್ತೇವೆ. ಮಾತೃಭಾಷೆಯಲ್ಲಿ ಈ ಕೌಶಲ್ಯ ಗಟ್ಟಿಯಾದರೆ ಅನ್ಯ ಭಾಷೆಗಳ ಓದುವಿಕೆ ಹಾಗೂ ಬರೆಯುವಿಕೆ ಬಹಳ ಸುಲಭವಾಗುವುದು.

## ಮಕ್ಕಳ ಭಾಷಾ ಸಾಮರ್ಥ್ಯ

ಮಕ್ಕಳು ಶಾಲೆಗೆ ಬರುವ ಮೊದಲೇ ಒಂದು ಭಾಷೆಯಲ್ಲದೇ ಹಲವು ಭಾಷೆಗಳನ್ನು ಕಲಿತಿರುತ್ತಾರೆ. ಶಾಲೆಗೆ ಬರುವ ಮೊದಲೇ 5000 ಅಥವಾ ಅದಕ್ಕಿಂತ ಹೆಚ್ಚು ಶಬ್ದಗಳನ್ನು ತಿಳಿದಿರುತ್ತಾರೆ. ಆದ್ದರಿಂದ ಬಹುಭಾಷೀಯತೆಯು ನಮ್ಮ ಗುರುತು ಅಥವಾ ಅಸ್ಮಿತೆಯ ನಿರ್ಧಾರಕ ಅಂಶವಾಗಿದೆ. ಇಲ್ಲಿನ ತುಂಬಾ ದೂರದ ಹಳ್ಳಿಗಳಲ್ಲಿ ಹೇಳಿದ 'ಒಂದೇ ಭಾಷೆಯ' ಅನೇಕ ಸಂವಹನಾತ್ಮಕ ಸನ್ನಿವೇಶಗಳಲ್ಲಿ ಸರಿಯಾದ ಭಾಷೆಯ ಉಪಯೋಗ

> *ನಾಲ್ಕು ವರ್ಷ ವಯಸ್ಸಿನೊಳಗಿನ ಎಲ್ಲಾ ಮಕ್ಕಳು ಬಹು ಭಾಷೆಗಳನ್ನು ಕಲಿಯುವ ಸಾಮರ್ಥ್ಯವನ್ನು ಹೊಂದಿರುತ್ತಾರೆ.*
>
> x x x
>
> *ಭಾರತದ ಸಂವಿಧಾನದ 29 ನೇ ವಿಧಿಯು ಹೇಳುವುದೇನೆಂದರೆ, "ನಮ್ಮ ಭಾಷೆ, ಸಂಸ್ಕೃತಿಯನ್ನು ಸಂರಕ್ಷಿಸುವ ಅಧಿಕಾರವಿದೆ" ಎಂದು ಹೇಳುತ್ತದೆ. "30 ಮತ್ತು 350 A ವಿಧಿಯೂ ಸಹ ಆಯಾ ಭಾಷೆಗಳ ಸಂರಕ್ಷಣೆ ಮತ್ತು ಸರಳತೆಯ ಬಗ್ಗೆ ಮಾತನಾಡುತ್ತವೆ.*

ಮಾಡುವ ಸಾಮರ್ಥ್ಯ ಪಡೆದಿರುತ್ತಾರೆ. ಅನೇಕ ಅಧ್ಯಯನಗಳಿಂದ ತಿಳಿದು ಬಂದಿರುವುದೇನೆಂದರೆ, ಬಹುಭಾಷಾವಾದದ ಸಂವಹನಾತ್ಮಕ ಬೆಳವಣಿಗೆ, ಸಾಮಾಜಿಕ ಸಹನಶೀಲತೆ, ವಿಕೇಂದ್ರಿತ ಚಿಂತನೆ ಹಾಗೂ ಶೈಕ್ಷಣಿಕ ಸಾಧನೆಯಿಂದ ಸಕಾರಾತ್ಮಕ ಸಂಬಂಧವೇರ್ಪಡುತ್ತದೆ. ಭಾಷೆಯ ವೈಜ್ಞಾನಿಕ ದೃಷ್ಟಿಯಿಂದ ನಮ್ಮೆಲ್ಲಾ ಭಾಷೆಗಳು ಯಾವುದನ್ನು ನಾವಾಡುತ್ತೇವೆಯೋ, ಆದಿವಾಸಿ ಅಥವಾ ಮಿಶ್ರ ಭಾಷೆಗಳು ಎಂದು ಹೇಳುತ್ತಿದ್ದೇವೆಯೋ ಇವೆಲ್ಲವೂ ಸರಿ ಸಮನಾಗಿ ವೈಜ್ಞಾನಿಕವಾಗಿರುತ್ತದೆ . ಭಾಷೆಗಳು ಜೊತೆ ಜೊತೆಗೆ ಬೆಳೆಯುತ್ತಾ ಅರಳುತ್ತವೆ. ಇದರ ಜೊತೆಗೆ ತಮ್ಮ ವಿಶೇಷ ಗುರುತಾಗಿರುವುದು. ಬಹುಭಾಷಿಕ ತರಗತಿಗಳಲ್ಲಿ ಮಕ್ಕಳಾಡುವ ಎಲ್ಲಾ ಭಾಷೆಗಳಿಗೂ ಪ್ರಾಮುಖ್ಯತೆ ಹಾಗೂ ಗೌರವ ಕೊಡಬೇಕಾಗಿದೆ ಅಲ್ಲದೆ ಮಕ್ಕಳ ಭಾಷಾ ವಿಭಿನ್ನತೆಯನ್ನು ಶಿಕ್ಷಣ ವಿಧಿಗಳ ಭಾಗವೆಂದು ತಿಳಿದು ಭಾಷೆಯನ್ನು ಕಲಿಸಬೇಕಿದೆ.

## ಸಾರ್ವತ್ರಿಕ ವ್ಯಾಕರಣದ ಪರಿಕಲ್ಪನೆ

ಭಾಷಾ ಶಾಸ್ತ್ರಜ್ಞರು ಭಾಷಾ ಶಿಕ್ಷಣದ ಸಂದರ್ಭದಲ್ಲಿ ಹೇಳುವ ಮಾತುಗಳೆಂದರೆ,'ಎಲ್ಲಾ ಭಾಷೆಗಳಲ್ಲೂ ಸ್ವರ ಹಾಗೂ ವ್ಯಂಜನಗಳಿರುತ್ತವೆ', ಎಲ್ಲಾ ಭಾಷೆಗಳಿಗೂ ತನ್ನದೇ ಆದ ವಿಶೇಷತೆ ಇರುತ್ತದೆ ಹಾಗೂ ಅವು ಒಂದಕ್ಕೊಂದು ಸಮಾನವಾಗಿ ಇರುವುದಿಲ್ಲ. ಅವು ಒಂದಕ್ಕಿಂತ ಒಂದು ಅದ್ವಿತೀಯವಾಗಿದ್ದು ವೈಶಿಷ್ಟತೆಯಿಂದ ಕೂಡಿದೆ. ನನ್ನ ಮಾತನ್ನು ಉದಾಹರಣೆ ಸಹಿತ ಹೇಳಲು ಪ್ರಯತ್ನಿಸುತ್ತೇನೆ. "ನಾನು ನನ್ನ ವಿಷಯವನ್ನು ಹೇಳಲು ಪ್ರಯತ್ನಿಸುತ್ತಿದ್ದೇನೆ", 'ಟ್ರೈ ಮಾಡುತ್ತಿದ್ದೇನೆ', 'ನೀವು ತಿನ್ನಲು ಪ್ರಯತ್ನಿಸಿ', ''ಟ್ರೈ ಮಾಡಿ ನೋಡಿ'. ಇಲ್ಲಿ ಎಲ್ಲಾ ವಾಕ್ಯಗಳಲ್ಲಿ ' ಟ್ರೈ ' ಸಂದರ್ಭವು ಬದಲಾಗುತ್ತಿದೆ. ಸಮಾನಾರ್ಥಕ ಪದಗಳು ಯಾವಾಗಲೂ ಒಂದೇ ಅರ್ಥವನ್ನು ನೀಡುವುದಿಲ್ಲ ಎಂಬುದು ಈ ಉದಾಹರಣೆಯಿಂದ ಸ್ಪಷ್ಟವಾಗಿದೆ. ಎರಡು ಅಥವಾ ಹೆಚ್ಚಿನ ಭಾಷೆಗಳ ಜ್ಞಾನವನ್ನು ಹೊಂದಿರುವ ವ್ಯಕ್ತಿಯು ಒಂದೇ ಭಾಷಾ-ವ್ಯವಸ್ಥೆಯ ಎರಡು ಅಂಗಗಳನ್ನು ಹೊಂದಿರುವನು. ಹಾಗೂ ವಿವಿಧ ಭಾಷೆಗಳಲ್ಲೂ ವಿಭಿನ್ನ 'ವ್ಯವಸ್ಥೆಗಳು ಇರುವುದು. "ಮಗು ಬಾಟಲಿಯನ್ನು ಒಡೆದು ಹಾಕಿದೆ." ಈ ವಾಕ್ಯವು ಉರ್ದು, ಪಂಜಾಬಿ, ಹಿಂದಿ ಯಾವ ಭಾಷಾ ಪದ್ದತಿಯಿಂದ ಬಂದಿದೆ? ಇದು ಮೂರು ಭಾಷೆಗಳಲ್ಲೂ ಇರಬಹುದು. "ಮುಂಡೇ ನಾಲ್ ಮೇನ್ ನಿ ಜಾ ಸಕ್ದಿ." (ನಾನು ಹುಡುಗನೊಂದಿಗೆ ಹೋಗಲು ಸಾಧ್ಯವಿಲ್ಲ.) ಪಂಜಾಬಿಯಲ್ಲಿ 'ಮುಂಡೇ'ಗೆ 'ದೇ' ಸೇರಿಸುವ ಅಗತ್ಯವಿಲ್ಲ. ಈ ಎಲ್ಲಾ ಭಾಷೆಗಳಿಗೂ ಅದರದೇ ಆದ ವ್ಯಾಕರಣದ ವ್ಯವಸ್ಥೆ ಇದೆ. ಮಕ್ಕಳು ತಮ್ಮಷ್ಟಕ್ಕೆ ತಾವೇ ನೆರೆ ಹೊರೆಯ ಆಡು ಭಾಷೆಯ ಧ್ವನಿ, ವಾಕ್ಯ ರಚನೆ ಹಾಗೂ ಶಬ್ದಗಳನ್ನು ತಿಳಿದು ಕೊಂಡಿರುತ್ತಾರೆ. ಎರಡು ಭಾಷೆಗಳ

> *ನಾಗಾಲ್ಯಾಂಡ್‌ನಲ್ಲಿ, ಆಂಗ್ಲ ಭಾಷೆಯನ್ನು ಅಧಿಕೃತವಾಗಿ ಆಡಳಿತಾತ್ಮಕ ಭಾಷೆಯನ್ನಾಗಿ ಮಾಡಲಾಗಿದ್ದರೂ, ಅಗತ್ಯಕ್ಕೆ ಅನುಗುಣವಾಗಿ ಪ್ರಾಥಮಿಕ ಹಂತದಲ್ಲಿ (ಶಿಕ್ಷಣ) 17 ಬುಡಕಟ್ಟು ಭಾಷೆಗಳನ್ನು ಸಹ ಸ್ವೀಕರಿಸಲಾಗಿದೆ. ಒಂದು ಭಾಷೆ ನಂತರ ಎಂ.ಎ. ತನಕ ಕಲಿಸಲಾಗುತ್ತದೆ. ಸರ್ವಶಿಕ್ಷಾ ಅಭಿಯಾನದ ಮೂಲಕ ಮಕ್ಕಳಿಗೆ ಅವರದೇ ಭಾಷೆಯಲ್ಲಿ ಕಲಿಸುವ ಪ್ರಯತ್ನ ನಡೆಯುತ್ತಿದೆ.*

ನಡುವಿನ ವ್ಯತ್ಯಾಸವನ್ನು ಸಹ ಅರ್ಥಮಾಡಿಕೊಳ್ಳುತ್ತಾರೆ. ಭಾಷೆಯ ರಚನಾತ್ಮಕ ವಿನ್ಯಾಸವನ್ನು ಸಹ ತಿಳಿದಿರುತ್ತಾರೆ. ಉದಾಹರಣೆಗೆ, ಮೈಸೂರಿನ ವ್ಯಕ್ತಿಯೊಬ್ಬರು 'ಕಂಫಿ'ಯನ್ನು 'ಕಾಂಫೀ' ಎಂದು ಕರೆಯುತ್ತಾರೆ, ಒಂದು ವೇಳೆ, ನಾವು ಭಾಷೆಯ ವ್ಯವಸ್ಥೆಯನ್ನು ಚೆನ್ನಾಗಿ ಅರಿತುಕೊಂಡರೆ, ಕಲಿಕೆಯಲ್ಲಿನ ತೊಂದರೆಗಳನ್ನು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಯಾರ ಬಳಿ ಎರಡು ಅಥವಾ ಹೆಚ್ಚಿನ ಭಾಷೆಗಳ ಜ್ಞಾನ್ತ ಇದೆಯೋ, ಅವರ ಬಳಿ ಒಂದು ದೇಹ, ಎರಡು ಆತ್ಮಗಳು ಇದ್ದ ಹಾಗೆ. ಇದು 'ಅಭಿವೃದ್ಧಿ'ಯ ಭಾಗವಾಗಿದೆ. ಒಂದು ಗಮನಿಸಬೇಕಾದ ಅಂಶವೆಂದರೆ ಭಾಷೆ ಕಣ್ಮರೆಯಾದರೆ ಅದರೊಂದಿಗೆ ಸಂಸ್ಕೃತಿಯೂ ಕಣ್ಮರೆಯಾಗುತ್ತದೆ. ಆದರೆ ಆಫ್ರಿಕಾದಲ್ಲೋ, ಇವರ ಭಾಷೆಯು ವಿನಾಶದ ಅಂಚಿಗೆ ತಲುಪಿತ್ತು, ಆದರೆ ಜನರು ಸಮಯಕ್ಕೆ ಎಚ್ಚರಗೊಂಡರು.

## ಬಹುಭಾಷೀಯತೆ ಮತ್ತು ಅಲ್ಪಸಂಖ್ಯಾತ ಹಾಗೂ ಆದಿವಾಸಿ ಭಾಷೆಗಳು

ಯಾವ ಭಾಷೆಗಳು ಕಡಿಮೆ ಜನರಿಂದ ಮಾತನಾಡಲ್ಪಡುವುದೋ, ಸಾಮಾನ್ಯವಾಗಿ ಅವರ ಮಕ್ಕಳು ಶಾಲೆಗೆ ಬರುವುದಿಲ್ಲ. ಬಹುಭಾಷಾವಾದಕ್ಕೆ ಗೌರವ ನೀಡುವ ಮೂಲಕ ಆ ಎಲ್ಲಾ ಮಕ್ಕಳನ್ನು ಶಿಕ್ಷಣದ ವ್ಯಾಪ್ತಿಗೆ ತರಬಹುದು. ಬಹು ಭಾಷಾ ಸಂದರ್ಭದಲ್ಲಿ ಭಾಷಾ ಅಲ್ಪಸಂಖ್ಯಾತರು ತಮ್ಮ ಸ್ವಂತ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿದ್ದಾರೆ. ಭಾಷಾ ಸಂರಕ್ಷಣೆಗಾಗಿ ಏಜೆನ್ಸಿಯನ್ನೂ ರಚನೆ ಮಾಡಲಾಯಿತು. ಅಲ್ಪಸಂಖ್ಯಾತ ಭಾಷಾ ಆಯೋಗವನ್ನು ರಚಿಸಿ ಇದರ ಪ್ರಕಾರ ಕೆಲವು ಭಾಷೆಗಳು ಅಲ್ಪಸಂಖ್ಯಾತವಲ್ಲದದಿದ್ದರೂ ಅವು ಶಿಕ್ಷಣ ಶ್ರೇಯಾಂಕಗಳಿಂದ ಹೊರಗುಳಿದಿವೆ.

ಆದಿವಾಸಿ ಮಕ್ಕಳನ್ನು ಮುಂದೆ ತರುವ ಉದ್ದೇಶದಿಂದಲೇ ಬಹುಭಾಷಿಕತೆಯ ಬಗ್ಗೆ ಮಾತನಾಡಲಾಗಿದೆ ಎಂದು ಸಂಶೋಧನೆಗಳು ಸಾರುತ್ತವೆ. ಆದಿವಾಸಿ ಮಕ್ಕಳು ಶಾಲೆಗೆ ಬಂದಾಗ ಅವರಿಗೆ ಹೊಸ ಭಾಷೆಯನ್ನು ಕಲಿಯುವ ಅವಕಾಶ ಸಿಗುತ್ತದೆ. ಅದು ಬೇಕಾದರೆ ಅಸ್ಸಾಮಿಯಾಗಲಿ ಅಥವಾ ಯಾವುದೇ ಮತ್ತೊಂದು ಭಾಷೆಯಾಗಲಿ ಅವರನ್ನು ಈ ಉದ್ದೇಶದಿಂದಲೇ ಶಾಲೆಯ ಮುಖ್ಯ ವಾಹಿನಿಗೆ ಜೋಡಿಸಬೇಕಿದೆ. ಅವರ ಭಾಷೆ 'ಚೆಂಚು, ಅಥವಾ ಯಾವುದೇ ಆದರೂ ಸರಿ ಯಾವ ಭಾಷೆಯಲ್ಲಿ ಅವರ ಸ್ವಂತ ಸಂಸ್ಕೃತಿಯ ಅರಿವಾಗಿದೆಯೋ ಆ ಭಾಷೆಯಿಂದಲೇ ದೂರವಾಗಿ ಬಿಡುತ್ತಾರೆ.

## ಬಹುಭಾಷೀಯತೆ ಹಾಗೂ ದಕ್ಷಿಣ ಭಾರತೀಯ ಭಾಷೆಗಳು

ದಕ್ಷಿಣ ಭಾರತದಲ್ಲಿ ಗ್ರಹಿಕೆಗಾಗಿ ಅವರು ತಮ್ಮ ಭಾಷೆಗಳಾದ ತಮಿಳು, ಕನ್ನಡ, ತೆಲುಗು ಅಥವಾ ಮಲಯಾಳಂ ಹಾಗು ಇಂಗ್ಲಿಷ್ ಭಾಷೆಗಳೇ ಸಾಕಾಗುವುದೆಂಬ ನಂಬಿಕೆ ಇದೆ. ತ್ರಿ ಭಾಷಾ ಸೂತ್ರದ ಪ್ರಕಾರ ತೃತೀಯ ಭಾಷೆ ಹಿಂದಿಯು ಮಕ್ಕಳಿಗೆ ಹೊರೆಯಾಗಬಹುದು. ಎಲ್ಲಾ ರಾಜ್ಯಗಳಿಗೂ ತನ್ನದೇ ಆದ ಅಧಿಕೃತ ಭಾಷೆ ಇದೆ. ಮಕ್ಕಳಿಗೆ ಅವರದೇ ಆದ ಭಾಷೆಗಳಿವೆ ಹಾಗೂ ತೃತೀಯ ಭಾಷೆ ಇಂಗ್ಲಿಷ್ ಕೂಡ ಆಗಿದೆ. ನಮ್ಮೆಲ್ಲರ ಮನದಲ್ಲಿ ಮೂಡುವ ಪ್ರಶ್ನೆ ಎಂದರೆ ಇಷ್ಟೆಲ್ಲ ಭಾಷೆಗಳಿದ್ದರೂ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿ ಏಕೆ ಎಂಬುದು?

ಹಲವಾರು ಮಕ್ಕಳು ಐದನೇ ತರಗತಿಯ ನಂತರ ಓದು ಬರಹವನ್ನುಬಿಟ್ಟು ಬಿಡುತ್ತಾರೆ ಎಂಬುವುದಕ್ಕೆ ಗಮನಹರಿಸಬೇಕಿದೆ. ಮಾತೃಭಾಷೆಯನ್ನು ತಮ್ಮ

ಹುಟ್ಟಿನಿಂದಲೂ ತಿಳಿದಿರುತ್ತಾರೆ. ಹಾಗಾಗಿ 5ನೇ ತರಗತಿಯ ವರೆಗೆ ಓದು ಬರಹ ಅದರ ಮಾತೃ ಭಾಷೆಯಲ್ಲಿ ಆದಾಗ ಮಕ್ಕಳ ಶಿಕ್ಷಣ ಬಹಳ ಸುಲಭವಾಗಿ ಆಗುವುದು. ಇಲ್ಲದಿದ್ದರೆ ಐದು ವರ್ಷ ದ್ವಿತೀಯ ಭಾಷೆಯನ್ನು ಕಲಿಯುವುದರಲ್ಲೇ ಕಾಲ ಕಳೆದು ಹೋಗುತ್ತದೆ ಅಲ್ಲದೆ ಅವರು ಸಾರ್ಥಕವಾದದನ್ನು ಏನನ್ನು ಮಾಡಲಾಗುವುದಿಲ್ಲ. ತ್ರಿಭಾಷಾ ಸೂತ್ರವು ಬಹುಭಾಷೀಯತೆಯ ಪರ್ಯಾಯ ಅರ್ಥವಲ್ಲ, ಅಥವಾ ಯಾವುದೇ ನೀತಿಯು ಅಲ್ಲ ಇದು ಕೇವಲ ಒಂದು ಕಾರ್ಯಕ್ರಮ ಎಂದು ಹೇಳಬಹುದು. ಇದರಲ್ಲಿ ಭಾಷೆಗಳ ವೈವಿಧ್ಯತೆಯ ಮಾತನ್ನು ಮತ್ತೆ ಅವಲೋಕಿಸುವ ಅವಶ್ಯಕತೆ ಇದೆ. ಇದು ಬಹುಭಾಷೀಯತೆಯ ಮೂಲಕವೇ ಸಾಧ್ಯವಾಗುತ್ತದೆ.

## ಬಹುಭಾಷೀಯತೆ ಹಾಗೂ ಆಂಗ್ಲ ಭಾಷಾ ತರಗತಿಗಳು

ಆಂಗ್ಲ ಭಾಷಾ ಶಿಕ್ಷಣದ ಉದ್ದೇಶವು ನಮ್ಮೆಲ್ಲಾ ಭಾಷೆಗಳ ಸಮೃದ್ಧಿ ಮಾಡುವಂತಹ ಬಹುಭಾಷಿಕರನ್ನು ತಯಾರು ಮಾಡುವುದಾಗಿದೆ. ಇದು ಅಂಗೀಕೃತವಾಗಿದ್ದು ಹಾಗೂ ರಾಷ್ಟ್ರೀಯ ದೃಷ್ಟಿಕೋನವು ಆಗಿದೆ. ಆದ್ದರಿಂದ ಆಂಗ್ಲ ಭಾಷೆಯನ್ನು ಯಾವುದೇ ತರಗತಿಯಲ್ಲಿ ಆಗಲಿ, ಅಂದರೆ(I-III ಅಥವಾ IV-V / VI) ಪ್ರಾರಂಭಿಸಬಹುದು. ಇದನ್ನು ಅರ್ಥಪೂರ್ಣ ಸನ್ನಿವೇಶಗಳ ಮುಖಾಂತರ ಕಲಿಸಬಹುದಾಗಿದೆ. ಆದರೆ ಸಾಮಾನ್ಯವಾಗಿ ಆಂಗ್ಲ ಭಾಷೆಯ ತರಗತಿಗಳಲ್ಲಿ ಮಾತೃ ಭಾಷೆಯ ಪ್ರವೇಶವು ಗುಪ್ತವಾಗಿ ನುಸುಳುತ್ತದೆ. ಉದಾಹರಣೆಗೆ ಉತ್ತರ ಬರೆಯಿಸುವಾಗ ಶಿಕ್ಷಕನು ಪಾಠದ ಜೊತೆ ಜೊತೆಗೆ ಅನುವಾದ ಹಾಗೂ ವಿವರಣೆ ನೀಡುತ್ತಾ ಅರ್ಥ ಮಾಡಿಸುವ ಕ್ರಮದಲ್ಲಿ ಮಕ್ಕಳ ಮಾತೃಭಾಷೆಯನ್ನು ಭೇದವಿಲ್ಲದೆ ಉಪಯೋಗ ಮಾಡುತ್ತಾ ಆಂಗ್ಲ ಭಾಷೆಗೆ ಸರಿಯಾದ ಸ್ಥಾನವನ್ನು ಕೊಡಲಾಗುವುದು. ಪ್ರಭು ಅವರು 1987ರಲ್ಲಿ ಇದಕ್ಕೆ ಒಂದು ಉದಾಹರಣೆ ಕೊಟ್ಟಿದ್ದಾರೆ. ಬೆಂಗಳೂರಿನ ಯೋಜನೆಯಲ್ಲಿ ಮಾತೃಭಾಷೆಯ ಬಳಕೆಯ ಮಿತಿ ಕೆಲಸದ ಅಗತ್ಯಕ್ಕೆ ಅನುಗುಣವಾಗಿ ನಿರ್ಧಾರವಾಗಿತ್ತು. ಅಲ್ಲಿನ ಪಠ್ಯ ಸಾಮಗ್ರಿಗಳೆಲ್ಲವೂ ಆಂಗ್ಲ ಭಾಷೆಯಲ್ಲಿ ಇತ್ತು. ಉತ್ತರಗಳು ಸಹ ಆಂಗ್ಲ ಭಾಷೆಯಲ್ಲಿ ಬರುತ್ತಿತ್ತು. ಅವಶ್ಯಕತೆ ಬಿದ್ದಲ್ಲಿ ಮಾತೃಭಾಷೆಯು ಆಂಗ್ಲ ಭಾಷೆಯನ್ನು ಅರ್ಥ ಮಾಡಿಕೊಳ್ಳುವ ಸಾಧನವಾಯಿತು. ಆಂಗ್ಲ ಭಾಷೆಯಲ್ಲಿ ವೈವಿಧ್ಯಮಯ ವಿಷಯವಸ್ತುಗಳು ಲಭ್ಯವಿದ್ದುಅದನ್ನು ಅರ್ಥ ಮಾಡಿಕೊಳ್ಳುವ ನಿಜವಾದ ಪ್ರಯತ್ನವಾದರೆ ಮಾತೃಭಾಷೆ ಅಡ್ಡವಾಗದೆ ಸಹಾಯಕಾರಿಯೇ ಆಗಿದೆ. ಕ್ರಾಶನ್ ಹೇಳುವುದೇನೆಂದರೆ ಜೊತೆಜೊತೆಗೆ ಮಾಡಿದ ಅನುವಾದವು ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ. ತರಗತಿಯಲ್ಲಿ ಎರಡು ಭಾಷೆಗಳ ಉಪಯೋಗ ಮಾಡುವಾಗ ಮೊದಲ ಭಾಷೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಕಲಿಸಬೇಕಾದ ಭಾಷೆಯ ವಿಷಯದ ಅರ್ಥೈಸುವಿಕೆಗೆ ಬಳಸಿಕೊಳ್ಳಬೇಕಿದೆ.

ತರಗತಿಯಲ್ಲಿ ಆಂಗ್ಲ ಭಾಷಾ ಶಿಕ್ಷಣದ ವಿಷಯವಸ್ತುವನ್ನು ತಯಾರು ಮಾಡಲು ಮಾತೃಭಾಷೆಯ ಸೂಕ್ತ ಬಳಕೆಯ ಅರಿವುಂಟು ಮಾಡುವಲ್ಲಿ ಶಿಕ್ಷಕರ ಪಾತ್ರವನ್ನು ನಿಶ್ಚಯಗೊಳಿಸುವ ಅವಶ್ಯಕತೆ ಇದೆ. ಭಾಷಾ ಶಿಕ್ಷಣದ ಸೂಕ್ತ ಮಟ್ಟವು ಯಾವುದು ಆಗಬಹುದು, ಈ ವಿಷಯದ ಬಗ್ಗೆ ಶಿಕ್ಷಕರ ಮಾನಸಿಕತೆಯನ್ನು ಸಂಬೋಧಿಸುವ ಅವಶ್ಯಕತೆ ಇದೆ.

## ಕೆಲವು ಸಾಧ್ಯತೆಗಳು

- ಪ್ರಾಥಮಿಕ ಶಾಲೆಗಳಲ್ಲಿ ಭಾಷೆಗಳ ನಡುವೆ ಅಂದರೆ ಭಾಷೆಗಳ ಹಾಗೂ ವಿಷಯಗಳ ನಡುವಿನ ತೊಂದರೆಗಳನ್ನು ನಿವಾರಿಸಲು ಪ್ರಯತ್ನಿಸಬೇಕಿದೆ. ಪೂರ್ವ ಪ್ರಾಥಮಿಕ ಹಂತದಲ್ಲಿ ಅಥವಾ ಕಡಿಮೆ ಎಂದರೆ ಒಂದನೇ ತರಗತಿಯಿಂದ ಮೂರನೇ ತರಗತಿಯವರೆಗೆ ಯಾವ ಚಟುವಟಿಕೆಗಳು ಮಕ್ಕಳಿಗೆ ತಮ್ಮ ಸುತ್ತಮುತ್ತಲಿನ ಜಗತ್ತಿನ ಬಗ್ಗೆ ಅರಿವನ್ನು ಮೂಡಿಸುತ್ತದೆಯೋ ಅದನ್ನು ಇಂಗ್ಲಿಷ್ ಜೊತೆ ಜೊತೆಗೆ ಮಾತೃಭಾಷೆಯಲ್ಲಿ ನೀಡಬಹುದಾಗಿದೆ. (ದಾಸ್ 2005). ಈ ರೀತಿಯ ಬಹುಭಾಷಿ ಚಟುವಟಿಕೆಗಳ ಅಭಿವೃದ್ಧಿಗೆ ವಿಷಯ ವಸ್ತುವನ್ನು ತಯಾರು ಮಾಡುವಲ್ಲಿ ಹಾಗೂ ಶಿಕ್ಷಕರ ಸಹಯೋಗದಿಂದ ಒಂದು ಸ್ಪಷ್ಟ ನಿಬಂಧನೆಯ ಸೂಚನೆ ತಯಾರು ಮಾಡುವ ಅವಶ್ಯಕತೆ ಇದೆ. ಇದರಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳ ಉದಾಹರಣೆ ಇರಬೇಕಿದೆ ಹಾಗೆಯೇ ಕೋಡ್ ಪರಿವರ್ತನೆಯ ಉದಾರತೆಯು ಇರಬೇಕಿದೆ.
- ಒಂದೇ ತೆರನಾದ ಸಮಾಂತರ ವಿಷಯ ವಸ್ತುವನ್ನು ವಿವಿಧ ಭಾಷೆಗಳಲ್ಲಿ ಪಠ್ಯಕ್ಕೆ ಸೇರಿಸುವ ಅಗತ್ಯವಿದೆ. ಇದು ಒಂದೇ ತರಹದ ಕಥೆಗಳಿರಬಹುದು ಯಾವ ರೀತಿ ಎನ್ ಬಿ ಟೀ ಯು ಭಾರತೀಯ ಭಾಷೆಗಳ ಕಥೆಗಳನ್ನು ಆಂಗ್ಲ ಭಾಷೆಯ ಜೊತೆಗೆ ಮುದ್ರಿಸಿದಂತೆ(ಅಮೃತವಳ್ಳಿ ಹಾಗೂ ರಾಮೇಶ್ವರರಾವ್ 2001) ಪ್ರಾಮಿಸ್ ಫೌಂಡೇಶನ್ ಸಹ ನಾಲ್ಕು ಭಾರತೀಯ ಭಾಷೆಗಳಲ್ಲಿ ಹಾಗೂ ಇಂಗ್ಲಿಷ್ ನಲ್ಲಿ ದೊಡ್ಡ ಪುಸ್ತಕಗಳನ್ನು ಹೊರತಂದಿದೆ. ಸಿಐಇಎಫ್‌ಎಲ್ ಸಂಪೂರ್ಣ ಭಾಷಾ ದೃಷ್ಟಿಕೋನದ ಅಡಿಯಲ್ಲಿ ದ್ವಿಭಾಷೆಯ ಪುಸ್ತಕಗಳನ್ನು ಹೊರತಂದಿದೆ. ಈ ಏಕರೀತಿಯ ಪಠ್ಯ ಒಂದಕ್ಕೊಂದು ಯಥಾವತ್ತಾಗಿ ಅನುವಾದ ಆಗಲೇ ಬೇಕೆಂಬ ಅವಶ್ಯಕತೆ ಇಲ್ಲ. ಆದರೆ ಸಮಾನ ಅರ್ಥ ಇರುವ ಹಾಗೂ ಅವುಗಳಲ್ಲಿ ಒಂದೇ ರೀತಿಯ ಚಟುವಟಿಕೆಗಳು, ಪ್ರಾಸಬದ್ಧತೆ, ಧ್ವನಿಯ ಆಟ ಇತ್ಯಾದಿ ಇರುವುದು ಸೂಕ್ತ. ಇದರಿಂದ ಮಕ್ಕಳಿಗೆ ಭಾಷೆಯ ಧ್ವನಿಯ ಬಗ್ಗೆ ಹಾಗೂ ರಚನೆಯ ಬಗ್ಗೆ ಅರಿವು ಬೆಳೆಸಿಕೊಳ್ಳಲಿ, ಓದುವುದು ಒಂದು ರಚನಾತ್ಮಕ ಕೌಶಲ್ಯವಾಗಿದೆ. ಒಂದು ಭಾಷೆಯನ್ನು ಓದುವ ಕೌಶಲ್ಯ ಮತ್ತೊಂದು ಭಾಷೆಯನ್ನು ಕಲಿಯುವಲ್ಲಿ

> *2003 ರ ಯುನೆಸ್ಕೋದ ಶೈಕ್ಷಣಿಕ ಸ್ಥಾನ ಕಾಗದದ ಪ್ರಕಾರ, ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಅತ್ಯಗತ್ಯ ಮತ್ತು ಇದನ್ನು ಎಷ್ಟು ಕಾಲ ಸಾಧ್ಯವೋ ಅಷ್ಟುಕಾಲ ಮುಂದುವರಿಸಬೇಕಾಗಿದೆ. ಕೆಲವು ಅಧ್ಯಯನಗಳು (ಉದಾ ಸೆಹಗಲ್ 1983) ತಮ್ಮ ಮಾತೃಭಾಷೆಯ ಮಾಧ್ಯಮದ ಮೂಲಕ ಶಿಕ್ಷಣವನ್ನು ಪಡೆದ ಮಕ್ಕಳು ಇಂಗ್ಲಿಷ್ ಮಾಧ್ಯಮದ ಮೂಲಕ ಶಿಕ್ಷಣ ಪಡೆದ ತಮ್ಮ ಸಹವರ್ತಿಗಳಿಗೆ ಹೋಲಿಸಿದಾಗ ಭಾಷಾ ಅಥವಾ ಶೈಕ್ಷಣಿಕ ಸಾಧನೆಯ ವಿಷಯದಲ್ಲಿ ಕಡಿಮೆ ಸಾಧನಾ ಮಟ್ಟವನ್ನಂತೂ ತೋರಿಲ್ಲ ಎಂದು ಸಾಬೀತುಪಡಿಸಿವೆ. 1995 ರಲ್ಲಿಗುಪ್ತಾರವರು 15 ರಿಂದ 17 ವರ್ಷ ವಯಸ್ಸಿನ 78 ಮಕ್ಕಳ ಮೇಲೆ ನಡೆಸಿದ ಸಂಶೋಧನೆಯು, 'ಮಾತೃಭಾಷೆಯನ್ನು ಎರಡು ವರ್ಷಗಳ ಕಾಲ ಮಾಧ್ಯಮವಾಗಿ ಬಳಸುವುದರಿಂದ ಆರಂಭಿಕ ಹಂತದಲ್ಲಿ ಮಾತೃಭಾಷೆ ಅಥವಾ ಇತರ ಭಾಷೆಯಲ್ಲಿ ಉತ್ತಮ ಪ್ರಾವೀಣ್ಯತೆ ಉಂಟಾಗುತ್ತದೆ' ಎಂದು ಸಾಬೀತು ಮಾಡಿದೆ.*
>
> *ಭಾರತೀಯ ಭಾಷೆಗಳ ಬೋಧನೆ, ನ್ಯಾಷನಲ್ ಫೋಕಸ್ ಗ್ರೂಪ್ ಸ್ಥಾನ ಕಾಗದ, 1-3, ಪುಟ-15*

ಸಹಾಯಕಾರಿಯಾಗಿರುತ್ತದೆ, ವೆಸ್ಟ್ (1941). ಇದು ಕೇವಲ ಸಮಾನ ಲಿಪಿ ಇರುವ ಭಾಷೆಗಳ ನಡುವೆ ಅಲ್ಲದೆ ಬೇರೆ ಬೇರೆ ಲಿಪಿಗಳ ಭಾಷೆಗಳಲ್ಲೂ ಅತ್ಯಂತ ಪರಿಣಾಮಕಾರಿಯಾಗಿರುತ್ತದೆ. (ವೆಸ್ಟ್ ಬಂಗಾಳಿ ಹಾಗೂ ಇಂಗ್ಲಿಷ್ ಭಾಷೆಗಳ ಕುರಿತಾದ ಅಧ್ಯಯನ ನಡೆಸಿದ್ದಾರೆ. ಎರಡು ಲಿಪಿಗಳ ಪರಿಸ್ಥಿತಿಗಳು ಹಾಗೂ ಓದುವ ಪ್ರಸರಣ ಕಾರ್ಯದ ಬಗ್ಗೆ ಈಗ ಸಾಕಷ್ಟು ಮಾಹಿತಿ ಇದೆ.

- ಮೇಲೆ ಕೊಟ್ಟಂತಹ ಸಲಹೆ ಸಮಾಂತರ(ಏಕರೂಪೀಯ) ಅಥವಾ ಜೊತೆಜೊತೆಗೆ ಕೆಲಸ ಮಾಡುವ ಭಾಷೆಗಳ ಬಗ್ಗೆ ಆಗಿದೆ. ಅದೇ ದ್ವಿಭಾಷಿಯು ಓದುವ ಹಾಗೂ ಕಲಿಸುವವರಿಗಾಗಿ ಅಥವಾ ಮಿಶ್ರಿತ ಕೋಡ್ ನ ದ್ವಿಭಾಷೆ ಪಾಠಗಳ ಮೇಲೆಯೂ ಪ್ರಯೋಗಾತ್ಮಕ ಕಾರ್ಯ ಲಭ್ಯವಿದೆ (ಡೋವೇರಾ 2005, ಫೆಲಿಕ್ಸ್ 1998) ಇವರ ಶೈಕ್ಷಣಿಕ ಸಾಧ್ಯತೆಗಳನ್ನು ಅನ್ವೇಷಿಸಬಹುದಾಗಿದೆ.

*— ಆಂಗ್ಲ ಭಾಷಾ ಬೋಧನೆ, ಪುಟ 13 ರಿಂದ 14*

## ಬಹುಭಾಷಾ ತರಗತಿ

ಯಾವುದೇ ಭಾಷೆಯನ್ನು ಹೇಗೆ ಕಲಿಸಲಾಗುವುದು ?ಇದಕ್ಕಾಗಿ ನಾವು ಬರೆಯುವ ವಿಜ್ಞಾನವನ್ನು ಮೊದಲಿಗೆ ತಿಳಿದುಕೊಳ್ಳಬೇಕಿದೆ. ಇಲ್ಲಿ ಮೆದುಳಿನ ಹಾಗೂ ಕೈಗಳ ಸಂಯೋಜನೆ/ಸಮನ್ವತೆಯ ಅಗತ್ಯವಿದೆ. ಐದಾರು ವರ್ಷ ವಯಸ್ಸಿನವರೆಗೂ ಮೂರ್ತರೂಪ ಪಡೆದಿರುವುದಿಲ್ಲ. ಆದ್ದರಿಂದ ಬರೆಯಲು ಕಷ್ಟಕರವಾಗಬಹುದು. ಆದರೆ ಸಂಶೋಧನೆಗಳು ಸಾರುವುದೇನೆಂದರೆ, ಮಕ್ಕಳ ಮನಸ್ಸಿನಲ್ಲಿ ಅಚ್ಚಳಿಯದಂತೆ ಇರಬೇಕಾದರೆ ಅಥವಾ ಬಹಳ ಚೆನ್ನಾಗಿ ಅರ್ಥವಾಗಬೇಕಿದ್ದರೆ ಓದುವುದರ ಜೊತೆಗೆ ಬರೆಯುವುದನ್ನು ಅಭ್ಯಾಸ ಮಾಡಬೇಕು. ಗೆರೆಗಳನ್ನು ಅಭ್ಯಾಸ ಮಾಡುವುದರ ಮೂಲಕವೂ ಬರೆಯಲು ಕಲಿಯಬಹುದಾಗಿದೆ. ಇದನ್ನು ತಿಳಿಯಬೇಕಾದ ಅವಶ್ಯವಿದೆ. ಆಲಿಸುವುದು ಹಾಗೂ ಮಾತನಾಡುವುದು ಬಹಳ ಮಹತ್ವಪೂರ್ಣ ವಿಷಯವಾಗಿದೆ. ಗಣಿತವನ್ನು ಮಕ್ಕಳು ಬೇಗನೆ ಕಲಿಯುತ್ತಾರೆ. ಟಾಫಿ ಹಂಚುವುದನ್ನು ಮಕ್ಕಳು ಹೇಳಿಕೊಡದೆಯೇ ಕಲಿತಿರುತ್ತಾರೆ. ಅದೇ ರೀತಿ ನೀರಿನ ಮೂರು ರೂಪ ಘನ, ದ್ರುವ್ಯ ಹಾಗೂ ಅನಿಲ ಇವುಗಳನ್ನು ಮಾತೃಭಾಷೆಯ ಸಹಾಯದಿಂದ ಪರಿಣಾಮಕಾರಿಯಾಗಿ ಹೇಳಿಕೊಡಬಹುದಾಗಿದೆ. ಇದು ಮಕ್ಕಳ ಮನಸ್ಸಿನಲ್ಲಿ ಅರ್ಥ ಮೂಡಿಸಿ ಸ್ಪಷ್ಟವಾದ ಮೇಲೆಯೇ. ಮಾತೃಭಾಷೆಯ ಮೂಲಕ ಪಾರಿಭಾಷಿಕ ಶಬ್ದಗಳ ಪರಸ್ಪರ ವಿನಿಮಯವೂ ಆಗುತ್ತದೆ. ಎರಡನೇ ಮೂರನೇ ಭಾಷೆಗಳು ಜೊತೆಗೂಡಿದರೂ ಮಾತೃಭಾಷೆಯ ಪ್ರಯೋಗವಂತೂ ನಡೆಯುತ್ತಲೇ ಇರಬೇಕು. ಮಕ್ಕಳು ಮಾತೃಭಾಷೆಯ ಮೂಲಕ ಭಾಷೆಗಳನ್ನು ಅರ್ಥಮಾಡಿಕೊಳ್ಳಲಾರಂಭಿಸತ್ತಾರೆ. ನಾವುಗಳು ಕೇವಲ ಶಿಕ್ಷಣವೆಂಬ ನದಿಯ ಮೇಲೆ ಒಂದು ಬಲವಾದ ಸೇತುವೆಯ ನಿರ್ಮಾಣ ಮಾಡಬೇಕಿದೆ.

ಇಲ್ಲಿ ನಾವು ಗಮನಹರಿಸಬೇಕಾದ ಅಂಶವೆಂದರೆ ನಾವು ಯಾವುದನ್ನು ಕೇಳಿ ಅರ್ಥ ಮಾಡಿಕೊಳ್ಳುತ್ತೇವೆಯೋ, ಅದು ನಮಗೆ ಮೊದಲಿನಿಂದಲೂ ತಿಳಿದಿರದ ವಿಷಯವಾಗಿರುತ್ತೆ. ಇನ್ನುಳಿದ ಎಲ್ಲವೂ ಮಾಮೂಲಿ ಎಂತೆನಿಸುತ್ತದೆ. ನಾವು ಅದನ್ನು ಬಿಟ್ಟೇ ಬಿಡುತ್ತೇವೆ. ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಕಾರ್ಮಿಕ ಬಿಹಾರದಿಂದ ಅಸ್ಸಾಂ ಪಂಜಾಬ್ ಇನ್ನುಳಿದ ಸ್ಥಳಗಳಿಗೆ ಹೋಗಿ, ಹಾಗೆಯೇ ಅಲ್ಲಿನ ಭಾಷೆಯನ್ನು ಕಲಿತುಬಿಡುತ್ತಾನೆ.

## ಬಹುಭಾಷೀಯತೆಯ ಸವಾಲುಗಳು

- ಮೊದಲಿಗೆ ವಿಚಾರ ಮಾಡಬೇಕಾದ ಅಂಶವೆಂದರೆ ಭಾಷೆ ರೂಪದಲ್ಲಿ ಭಾಷೆಯನ್ನು ಕಲಿಸುವುದು ಬೇರೆಯಾದರೆ, ಭಾಷಾ ಮಾಧ್ಯಮದ ರೂಪದಲ್ಲಿಯೇ ಬೇರೆಯಾಗಿದೆ. ಭಾಷೆಯನ್ನು ಕಲಿಸುವುದು ಕೇವಲ ಭಾಷಾ ಶಿಕ್ಷಕನ ಕೆಲಸವಲ್ಲ. ಬೇರೆ ವಿಷಯಗಳನ್ನು ಕಲಿಯುವುದು ಹಾಗೂ ಕಲಿಸುವುದು ಭಾಷೆಯ ಮುಖಾಂತರವೇ. ಭಾಷೆಯ ವ್ಯಾಕರಣವು ಬೇರೆ ವಿಷಯಗಳಲ್ಲೂ ಅಡಗಿಕೊಂಡಿರುತ್ತದೆ. ಉದಾಹರಣೆಗೆ ವಿಜ್ಞಾನದಲ್ಲೂ ಸಹ ಕ್ರಿಯೆ, ಚಿನ್ಹೆಗಳು ಹಾಗೂ ಸರ್ವನಾಮವಿರುತ್ತದೆ. ಹಿಂದಿ ಅಥವಾ ಯಾವುದೇ ಭಾಷೆಯ ಸಂರಚನೆಯಲ್ಲಿ ಹಾಗು ವಿಜ್ಞಾನದ ಅರ್ಥೈಸುವಿಕೆಯು ಜೊತೆ ಜೊತೆಗೆ ಸಾಗಬೇಕಾಗಿದೆ.
- ಬಹುಭಾಷೀಯತೆಯ ಮತ್ತೊಂದು ಸಮಸ್ಯೆ ಲಿಪಿಯದ್ದಾಗಿದೆ. ಉದಾಹರಣೆಗೆ ಜೆಮೀ (ಅಸ್ಸಾಂ ಹಾಗೂ ನಾಗಾಲ್ಯಾಂಡ್ ನಲ್ಲಿ) ರೋಮನ್ ಲಿಪಿಯನ್ನು ಆರಿಸಿಕೊಂಡಿದ್ದಾರೆ. ಈ ಪ್ರಕ್ರಿಯೆಯಲ್ಲಿ ಅವರು ಮಕ್ಕಳಿಗೆ 'ಎ' ಇಂದ 'ಜೆಡ್'ವರೆಗೆ ಕಲಿಸುವರು. ಆದರೆ ಜೆಮೀ ಯಲ್ಲಿ ಈ ಎಲ್ಲ ಅಕ್ಷರ ಬಳಕೆಯಲ್ಲಿ ಇಲ್ಲ.
- ಮೂರನೇ ಸಮಸ್ಯೆ ಏನೆಂದರೆ, ಶಾಲೆಗಳಲ್ಲಿ ಓದುವ ಬರೆಯುವ ವಿಷಯದಲ್ಲಿ ಬಹಳವೇ ಉತ್ತಮವಾಗಿದ್ದರೆ, ಮಾತನಾಡುವ ಹಾಗೂ ಆಲಿಸುವುದರಲ್ಲಿ ಸ್ವಲ್ಪವೂ ಜ್ಞಾನ ಇಲ್ಲದಿರುವುದು.
- ಶಿಕ್ಷಣದ ಕಲಿಕಾ ಸಾಮಗ್ರಿಗಳ ಉಪಯೋಗವು ಸಹ ಒಂದು ಸಮಸ್ಯೆಯಾಗಿದೆ. ಅವು ಆಸಕ್ತಿದಾಯಕವೂ ಆಗಿಲ್ಲ ಮತ್ತು ಸಂಸ್ಕೃತಿಯ ಜೊತೆ ಹೊಂದಾಣಿಕೆಯಾಗಿಲ್ಲ. ಒಡಿಶಾದ ಬುಡಕಟ್ಟು ಸಂಸ್ಕೃತಿಯಲ್ಲಿ ಜನ್ಮದಿನದಂದು ಉಪಹಾರ ನೀಡುವ ಪದ್ಧತಿ ಇಲ್ಲ. ಆದರೆ ಈ ರೀತಿಯ ಉದಾಹರಣೆಗಳನ್ನು ಸೇರಿಸಲಾಗಿದೆ.
- ಮತ್ತೊಂದು ಸಮಸ್ಯೆ, ಭಾಷಾ ಶಿಕ್ಷಕನ ನೇಮಕಾತಿಯ ಬಗ್ಗೆ ಆಗಿದೆ. ಭಾಷಾ ಶಿಕ್ಷಕರ ನೇಮಕವೇ ಮಾಡಲಾಗುವುದಿಲ್ಲ. ಯಾವುದೇ ಬೇರೆ ವ್ಯಕ್ತಿ ಅಥವಾ ಯಾವುದೇ ಬೇರೆ ವಿಷಯದ ಶಿಕ್ಷಕನಿಗೆ ಈ ಕೆಲಸವನ್ನು ಕೊಡಲಾಗುತ್ತದೆ. ಕೇವಲ ಭಾಷೆ ತಾನೇ, ಅದನ್ನು ಯಾರು ಬೇಕಾದರೂ ಕಲಿಸಬಹುದೆಂಬ ತಾತ್ಸಾರ ಭಾವನೆ.

> *ಆಂಗ್ಲ ಭಾಷೆಯನ್ನು ಈಗಿನ ತರಗತಿಗಳಲ್ಲಿ ಕಲಿಸುವುದನ್ನು ನೋಡಿ ಆಗಾಗ ಬರುವ ವಿಚಾರವೆಂದರೆ, ಹಿಂದಿನ ಕಾಲದಲ್ಲಿ ಆಕ್ರಮಣಕಾರರು ವಜ್ರ-ವೈಢೂರ್ಯ, ಸಂಪತ್ತನ್ನು ಕೊಳ್ಳೆ ಹೊಡೆದು ಲೂಟಿ ಮಾಡುತ್ತಿದ್ದರು. ಆದರೆ ಈಗ ಭಾಷೆಯ ಮೂಲಕ ನಮ್ಮ ಹೃದಯ ಹಾಗೂ ಬುದ್ಧಿಯನ್ನು ಲೂಟಿ ಮಾಡುತ್ತಿದ್ದಾರೆ.*
>
> *-ಒಬ್ಬ ಭಾಗವಹಿಸಿದ ಅಭ್ಯರ್ಥಿ*

- ಸಮುದಾಯವನ್ನು ಯಾವುದೇ ಹಂತದಲ್ಲಿ ಜೋಡಿಸಲು ಯಾವುದೇ ಪ್ರಯತ್ನ ಮಾಡಲಾಗುತ್ತಿಲ್ಲ.ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯು ಇರುವುದು ಕಡ್ಡಾಯವಾಗಿದೆ ಹಾಗೂ ನಂತರ ಇನ್ನೂ ಹಲವು ಭಾಷೆಗಳನ್ನು ಸೇರಿಸಬಹುದಾಗಿದೆ. ಅಡಚಣೆಗಳಂತೂ ಬಂದೇ ಬರುತ್ತವೆ ಆದರೆ ಅದಕ್ಕೆ ಉತ್ತರ ಹುಡುಕಬಹುದಾಗಿದೆ.
- ನಾವು ತರಗತಿಯಲ್ಲಿ ಪಾಠ ಮಾಡುವಾಗ ಒಂದು ಭಾಷೆಯನ್ನು ಮತ್ತೊಂದು

ಭಾಷೆಗೆ ಜೋಡಿಸುವ ಕೆಲಸ ಮಾಡಬೇಕಿದೆ. ಕೇವಲ ಒಂದೇ ಭಾಷೆಯನ್ನು ಉಪಯೋಗಿಸುತ್ತಿದ್ದರೆ, ತರಗತಿಯಲ್ಲಿ ಬೇರೆ ಭಾಷೆಯ ಬಗ್ಗೆ ಮಾತೇ ಹೊರಡುವುದಿಲ್ಲ. ದುಃಖದ ವಿಷಯವೆಂದರೆ ,ಹೇಗೆ ಕೃಷಿ- ಕೊಟ್ಟಿಗೆ, ಪತ್ರ, ಅಳಿದು ಹೋಗುತ್ತಿವೆ ಹೀಗೆ ಅದೇ ರೀತಿ ಹಲವಾರು ಶಬ್ದಗಳು ಸಹ ಅಳಿವಿನ ಅಂಚಿನಲ್ಲಿವೆ. ಉದಾಹರಣೆಗೆ ಪುಆಲ್ ಕಾಟಲ್, ಮೇಹ್, ಗೌನ್, ಡಾಲ್, ಏಂಚ, ಉರೇಬ್, ಭೂಜಬ್ ಇತ್ಯಾದಿ ಶಬ್ದಗಳು ಹಿಂದಿ ಭಾಷೆಯ ಪ್ರಯೋಗದಲ್ಲಿ ಇಲ್ಲವಾಗಿವೆ.

*ಬರ್ಲಿಟ್ಜ್ ಭಾಷೆಯ ಶಾಲೆ..........ಮಾಡುವ ಮೂಲಕ ಕಲಿಯುವವರಿಗಾಗಿ ಸಂಪನ್ಮೂಲಗಳು ಒಂದು ಉತ್ತಮ ಉದಾಹರಣೆಯಾಗಿದೆ. ಈ ಶಾಲೆ ಯಾರಿಗೂ ಕಾನೂನು ಮಾಡಿ ಮತ್ತೊಂದು ಭಾಷೆ ಕಲಿಯಲೇಬೇಕೆಂಬ ನಿರ್ಬಂಧ ಹೇರಿಲ್ಲ.ಇನ್ನೊಂದು ಭಾಷೆಯನ್ನು ಕಲಿಯುವುದರ ಮುಖಾಂತರ ದೊಡ್ಡ ಹುದ್ದೆ ಸಿಗುವುದಾಗಲಿ ಅಥವಾ ನಾವು ಬಹಳ ಸಫಲರಾಗುವುವೆವು ಅಥವಾ ಗೌರವ ಸನ್ಮಾನಗಳು ದೊರಕುವುದು ಎಂದು ಹೇಳಲಾಗದು ಮತ್ತು ಕಲಿತಿಲ್ಲದ ಕಾರಣ ಅಸಫಲತೆ ಅಥವಾ ಬಡತನ ಬರುವುದು ಎಂದು ಹೇಳಲಾಗುವುದಿಲ್ಲ. ಅದೇ ರೀತಿ ಯಾವುದೇ ರೀತಿಯ ಮಾತನ್ನು ಕೊಡುವುದು ಇಲ್ಲ.ಬೆದರಿಕೆಯೂ ಹಾಕುವುದಿಲ್ಲ. ನಾವು ಮತ್ತೊಂದು ಭಾಷೆಯನ್ನು ಕಲಿತರೆ ಜೀವನದ ಆನಂದದ ಮಟ್ಟವನ್ನು ಏರಿಸಬಹುದು.*

ಸಾಹಿತ್ಯಕಾರರಿಗೂ ಇದರ ಬಗ್ಗೆ ಗಮನ ಹರಿಸುವ ಅವಶ್ಯಕತೆ ಇದೆ. ಇದರಿಂದ ನಾವು ಮತ್ತು ನಮ್ಮ ಭಾಷೆಗಳನ್ನು ತಿಳಿಯಬಹುದಾಗಿದೆ. ಕಬೀರರು ಬಹುಭಾಷಾ ಸಂತರಾಗಿದ್ದರು. ಇವರು ಜನರಿಗೆ ಜ್ಞಾನ ತಿಳಿಸುವ ಸಲುವಾಗಿ ಸಧುಕ್ಕಡಿ ಭಾಷೆಯನ್ನು ಅಳವಡಿಸಿಕೊಂಡರು. ಹವೀಬ್ ತನ್ವೀರರ 'ಆಗ್ರ ಬಜಾರ್' ಹಾಗು 'ಭಿಕಾರಿ ಠಾಕೂರ್' ಈ ಬಹುಚರ್ಚಿತವಾದ ನಾಟಕವಾದಂತಹ 'ವಿದೇಶೀಯ' ಬಹು ಭಾಷೀಯತೆಗೆ ಒಂದು ಮಾದರಿಯಾಗಿದೆ.

ನಮ್ಮ ದೇಶ ಬಹು ಭಾಷಿಕರಿಂದ ಕೂಡಿದೆ. ಅದಕ್ಕಾಗಿ ಬಹಳ ಭಾಷೆಗಳನ್ನು ತಿಳಿದುಕೊಳ್ಳುವುದರಿಂದ ಕೇವಲ ಒಬ್ಬರಿಗೊಬ್ಬರು ಬೆಸೆಯುವಂತೆ ಮಾಡುವುದಲ್ಲದೆ, ಬೇರೆ ಬೇರೆ ಭಾಷೆಗಳನ್ನು ಒಂದಕ್ಕೊಂದು ಬೆಸೆಯುವಂತೆ ಮಾಡುತ್ತದೆ. ಭಾಷೆಯು ವಿಚಾರಗಳ ಚಕ್ರವಾಗಿದೆ ಹಾಗೂ ದ್ವಿಭಾಷಿ ಆಗುವುದು ಮನುಷ್ಯನ ಸ್ವಭಾವ. ಹಲವಾರು ಭಾಷೆಗಳನ್ನು ಕೇವಲ ಒಂದು ನಾಲಿಗೆಯಲ್ಲಿ ಮಾತನಾಡುವ ಬಹುಭಾಷಾ ಸಮಾಜವನ್ನು ನಿರ್ಮಾಣ ಮಾಡಬೇಕಿದೆ. ನಾವು ಅಂತಿಮವಾಗಿ ತಿಳಿಯಬೇಕಾದ ಈ ವಿಷಯ ನಮ್ಮ ಬಗ್ಗೆಯೇ ಎಂಬುದಾಗಿದೆ.

ಜಾರ್ಜ್ ಸ್ಟೈನರ್ ಅವರ 'ದ ಮಾಡರ್ನ ವರ್ಸ ಇನ್ ಟ್ರಾನ್ಸ್‌ಲೇಷನ್' ಈ ಪುಸ್ತಕದಲ್ಲಿ ತಮ್ಮ ತಾಯಿಗೆ ಸಮರ್ಪಿಸುತ್ತ ಈ ರೀತಿಯ ವಾಕ್ಯವನ್ನು ಬರೆದಿದ್ದರು. ಅದೇನೆಂದರೆ. ಟು ಮೈ ಮದರ್ ಹು ಸ್ಪೀಕ್ಸ್, ಸೆವೆರೆಲ್ ಲ್ಯಾಂಗ್ವೇಜಸ್, ಬಟ್ ಇನ್ ಹರ್ ಒನ್ ಟಂಗ್. (ನನ್ನ ಅಮ್ಮನಿಗಾಗಿ, ಯಾರು ತನ್ನ ಒಂದೇ ನಾಲಿಗೆಯಲ್ಲಿ ಹಲವಾರು ಭಾಷೆಗಳನ್ನು ಮಾತನಾಡುವಳೋ, ಅವಳಿಗಾಗಿ ಸಮರ್ಪಣೆ).

## ಬೋಆ ಅವರ ಜೊತೆಗೇ ಹೊರಟೇ ಹೋಯಿತು 'ಬೋ' ಭಾಷೆ, ಮುಂದೆಯೂ ಅಪಾಯ ಕಾದಿದೆ!!



*ಅಂಡಮಾನ್ ನಲ್ಲಿ ಒಬ್ಬ 85 ವರ್ಷದ ಮಹಿಳೆ ಬೋಆ(ಸೀನಿಯರ್) ಇವರ ಮರಣದ ಜೊತೆಗೆ ಪ್ರಾಚೀನ ಭಾಷೆಯಾದ ಬೋ ಭಾಷೆಯನ್ನು ಮುಂದೆ ಅದನ್ನು ವರ್ಗಾಯಿಸುವ, ಅದಕ್ಕೆ ಜೀವ ಕೊಡುವ ಆ ಭಾಷೆ ತಿಳಿದಿರುವ ವ್ಯಕ್ತಿಯ ಕೊಂಡಿಯನ್ನು ಶಾಶ್ವತವಾಗಿ ಕಳಚಿಕೊಂಡಿದೆ. ಇದು ಭಾಷಾ ಕ್ಷೇತ್ರಕ್ಕೆ ವಾಸಿಯಾಗದ ಗಾಯವಾಗಿ ಪರಿಣಮಿಸಿದೆ. ಏಕೆಂದರೆ ಪ್ರಪಂಚದಲ್ಲೇ ಅತ್ಯಂತ ಪ್ರಾಚೀನವಾದ ಭಾಷೆಗಳಲ್ಲಿ ಒಂದಾದ 'ಬೋ' ವನ್ನು ಮಾತನಾಡುವ ಕೊನೆಯ ವ್ಯಕ್ತಿಯಾಗಿದ್ದಾರೆ. ಈ ಭಾಷೆಯ ಮೂಲ ಆಫ್ರಿಕಾ ದೇಶಕ್ಕೆ ಸಂಬಂಧಿಸಿದ್ದು ಎಂಬ ಉಲ್ಲೇಖವಿದೆ. ಕೆಲವು ಅಂಡಮಾನಿ ಭಾಷೆಗಳು 70,000 ವರ್ಷಗಳಷ್ಟು ಹಳೆಯವು ಎಂದು ಹೇಳಲಾಗುತ್ತದೆ. ಹಿರಿಯ ಭಾಷಾಶಾಸ್ತ್ರಜ್ಞೆ ಪ್ರೊಫೆಸರ್ ಅನ್ವಿತಾ ಅಬ್ಬಿ ಅವರ ಪ್ರಕಾರ ಬೋಆ ಅವರು ಬೋ ಭಾಷೆಯನ್ನು ಮಾತನಾಡುವ ಕೊನೆಯ ವ್ಯಕ್ತಿ ಆಗಿದ್ದರು. ಅವರ ತಂದೆ ತಾಯಿ ಅಗಲಿದ 30 ವರ್ಷದ ಮೇಲೆ ಬೋ ಭಾಷೆಯನ್ನು ಮಾತನಾಡುವ ಕೊನೆಯ ವ್ಯಕ್ತಿ ಆಗಿದ್ದರು. ಈ ಭಾಷೆಯ ಕಾರಣದಿಂದಾಗಿಯೇ, ತಾವು ಒಂಟಿ ಎನ್ನುವ ಭಾವನೆ ಕಾಡುತ್ತಿತ್ತು. ಬೇರೆಯವರ ಜೊತೆ ಮಾತನಾಡಲು ಅವರು ಅಂಡಮಾನಿ ಹಿಂದಿ ಭಾಷೆಯನ್ನು ಕಲಿಯಬೇಕಾದ ಪರಿಸ್ಥಿತಿ ಒದಗಿತು.*

*ಅಂಡಮಾನೀ ಭಾಷೆಗಳು ಪ್ರಾಚೀನ ಶಿಲಾಯುಗದ ಭಾಷೆಗಳ ಕೊನೆಯ ಅವಶೇಷಗಳೆಂದು ಪರಿಗಣಿಸಲ್ಪಟ್ಟಿರುವುದರಿಂದ, ಬೋವಾ ಸೀನಿಯರ್ ಸಾವಿನೊಂದಿಗೆ, ಭಾಷಾ ಗೊಂಚಲಿನ ಒಂದು ತುದಿಯು ಶಾಶ್ವತವಾಗಿ ಕಳೆದುಹೋಗಿದೆ ಎಂದು ಹೇಳಬಹುದು. ಅಂಡಮಾನಿನ ಬುಡಕಟ್ಟುಗಳನ್ನು ನಾಲ್ಕು ಗುಂಪುಗಳಲ್ಲಿ ಇರಿಸಲಾಗಿದೆ. ಗ್ರೇಟ್ ಅಂಡಮಾನೀ, ಜರಾವಾ, ಒಂಗಿ ಮತ್ತು ಸೆಂಟಿನೆಲೀ. ಬೋವಾ ಸೀನಿಯರ್ ಗ್ರೇಟ್ ಅಂಡಮಾನೀ ಗುಂಪಿಗೆ ಸೇರಿದವರು. ಈಗ ಈ ಬುಡಕಟ್ಟಿನ ಸುಮಾರು 50 ಜನರು ಮಾತ್ರ ಉಳಿದಿದ್ದಾರೆ, ಅವರಲ್ಲಿ ಹೆಚ್ಚಿನವರು ಮಕ್ಕಳು.*

*- ಬಿ.ಬಿ.ಸಿ. ಸುದ್ದಿ ಆಧಾರಿತ*

# 4

# ಎಲ್ಲಾ ವಿಷಯಗಳ ಕೇಂದ್ರ- ಭಾಷೆ



- **ಇತಿಹಾಸದ ಕಿಂಡಿಯಲ್ಲಿ ಭಾಷೆ**
- **ಎಲ್ಲಾ ವಿಷಯಗಳ ಅಧ್ಯಾಪಕರು ಭಾಷಾ ಅಧ್ಯಾಪಕರೇ**
- **ಆಲೋಚನಾ ಸ್ವಾತಂತ್ರ್ಯ ಹಾಗೂ ಮೌಲ್ಯಗಳ ಪ್ರಶ್ನೆ**
- **ಭಾಷೆ ಮತ್ತು ಬೇರೆ ವಿಷಯಗಳು**
- **ತಾಂತ್ರಿಕ ಶಬ್ದಾವಳಿ ಹಾಗೂ ಮಕ್ಕಳ ತಿಳುವಳಿಕೆ**
- **ಉನ್ನತ ಶಿಕ್ಷಣ ಹಾಗೂ ಅನ್ಯ ವಿಷಯಗಳು**

ನಮ್ಮ ಜೀವನವನ್ನು ಅರಿತು, ಅದರೊಂದಿಗೆ ಬೆರೆತು ಹಾಗೂ ಜೀವ-ಜಗತ್ತನ್ನು ಪ್ರಸ್ತುತಪಡಿಸಲು ಭಾಷೆಯು ಒಂದು ಸಾಧನವಾಗಿದೆ. ಭಾಷೆಯು ಕೇವಲ ಸಂವಹನದ ಸಾಧನವಲ್ಲ! ಬದಲಿಗೆ ನಾವು ಇದರ ಮೂಲಕ ಹೆಚ್ಚಿನ ಮಾಹಿತಿಯನ್ನು ಪಡೆಯುವಂತಹ ಸುಲಭ ಮಾಧ್ಯಮವಾಗಿದೆ. ಭಾಷೆ ಒಂದು ವ್ಯವಸ್ಥೆಯಾಗಿದ್ದು, ನಮ್ಮ ಮಿತಿಯೊಳಗೆ ನಮ್ಮ ಸುತ್ತಮುತ್ತಲಿನ ವಾಸ್ತವಿಕತೆಯನ್ನು ಹಾಗೂ ಘಟನೆಗಳನ್ನು ನಮ್ಮ ಮಿದುಳಿನಲ್ಲಿ ವ್ಯವಸ್ಥಿತಗೊಳಿಸುತ್ತದೆ. ಇದು ಹಲವು ರೀತಿಯಲ್ಲಿ ನಮ್ಮ ಗುರುತಿನ ಚಿನ್ಹೆಯಾಗಿದೆ ಹಾಗೂ ಅಂತಿಮವಾಗಿ ಅದು ಸಮಾಜದೊಂದಿಗೆ, ಅಧಿಕಾರ ಮತ್ತು ಶಕ್ತಿಯ ಜೊತೆ ನಿಕಟ ಸಂಬಂಧ ಹೊಂದಿದೆ. ನಾವು ಇತರರೊಂದಿಗೆ ಮಾತನಾಡಲು ಮಾತ್ರವಲ್ಲದೆ ನಮ್ಮೊಂದಿಗೆ ನಾವು ಮಾತನಾಡಲು ಭಾಷೆಯನ್ನು ಬಳಸುತ್ತೇವೆ ಎಂಬುದನ್ನು ನೆನಪಿನಲ್ಲಿಡಬೇಕು. ಇದೇ ಭಾಷೆಯ ಮಹತ್ವಪೂರ್ಣ ಕಾರ್ಯವಾಗಿದೆ. ನಾವು ನಮ್ಮೊಂದಿಗೇ ಮಾತನಾಡಲು ಬಾರದಿದ್ದರೆ ನಾವು ಹೇಗೆ ತಾನೇ ನಮ್ಮ ವಿಚಾರಗಳನ್ನು ಸುಸ್ಪಷ್ಟವಾಗಿ ಅಭಿವ್ಯಕ್ತಗೊಳಿಸಲು ಸಾಧ್ಯ?

ವಿಭಿನ್ನ ವಿಷಯಗಳಾದ ಇತಿಹಾಸ, ಭೌತಶಾಸ್ತ್ರ ಅಥವಾ ಗಣಿತ ಇವುಗಳನ್ನು ಅರ್ಥ ಮಾಡಿಕೊಳ್ಳಲು ನಮಗೆ ಭಾಷೆಯ ಅಗತ್ಯವಿದೆ. ನಾವು ಪ್ರಕೃತಿ ಅಥವಾ ಸಮಾಜವನ್ನು ನಮ್ಮ ಮಿತಿಯೊಳಗೆ ನಮ್ಮ ಭಾಷೆಯ ಸಂರಚನೆಯ ಮಾಧ್ಯಮದ ಮುಖಾಂತರ ನೋಡುತ್ತೇವೆ.

ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಎಲ್ಲಾ ಬಡ ವರ್ಗದ ಮಕ್ಕಳ ಸ್ಥಿತಿ ಒಂದೇ ರೀತಿಯಾಗಿದ್ದು ಅವರ ಕಥೆ ಹೇಳತೀರದು. ಏಕೆಂದರೆ ಅವರಿಗೆ ಭಾಷೆಯನ್ನು ಸರಿಯಾಗಿ ಕಲಿಯಲು ಸಾಧ್ಯವಾಗದೆ ನಿಧಾನವಾಗಿ ತಮ್ಮ ಜೀವನದ ಪಯಣದಲ್ಲಿ ಹಿಂದುಳಿದುಬಿಟ್ಟಿದ್ದಾರೆ. ಮಕ್ಕಳಿಗೆ ಉಚಿತ ಪ್ರವೇಶಕ್ಕೆ ಸರ್ಕಾರವು ಹಲವು ರೀತಿಯ ಯೋಜನೆಗಳನ್ನು ಜಾರಿಗೊಳಿಸಿದ್ದರೂ ಇವರಲ್ಲಿ ಭಾಷೆಯ ಭೇದ ಎಂದಿಗೂ ಹೋಗುವುದಿಲ್ಲ ಎಂಬುದರ ಬಗ್ಗೆ ಶಿಕ್ಷಣ ವ್ಯವಸ್ಥೆಯಲ್ಲಿ ಚಿಂತನೆ ಏಕೆ ನಡೆಯುತ್ತಿಲ್ಲ, ತಿಳಿಯದಾಗಿದೆ!

*ಒಂದು ಮಗುವಿನ ಪೋಷಕರ ಇಂಗಿತ, ತಮ್ಮ ಮಗು ಇಂಗ್ಲಿಷ್ ಮಾಧ್ಯಮದ ಮೂಲಕವೇ ಶಾಲಾ ಶಿಕ್ಷಣ ಪಡೆಯಬೇಕೆಂಬುದು ಆಗಿತ್ತು. ಆದರೆ ಆ ಮಗುವಿನ ಮನೆಯ ಸುತ್ತಮುತ್ತಲಿನ ವಾತಾವರಣ ಆಂಗ್ಲ ಭಾಷೆಯದ್ದಾಗಿರಲಿಲ್ಲ. ಆ ಮಗು ನಿಧಾನವಾಗಿ ಓದುವುದರಲ್ಲಿ ಹಿಂದೆ ಬಿತ್ತು. ಅವನು ಏಳನೇ-ಎಂಟನೇ ತರಗತಿ ತಲುಪುವ ಹೊತ್ತಿಗೆ, ಅವನು ಅನೇಕ ವಿಷಯಗಳಲ್ಲಿ ಅನುತ್ತೀರ್ಣನಾದ. ಇದರಿಂದಾಗಿ ಅವನ ಸ್ವಾಭಿಮಾನ ಮತ್ತು ಸೃಜನಶೀಲತೆ ಕ್ರಮೇಣ ಕಡಿಮೆಯಾಗತೊಡಗಿತು. ಇಂಗ್ಲಿಷ್ ಮಾಧ್ಯಮದ ಆ ಶಾಲೆಯು ಒಂಬತ್ತು ಮತ್ತು ಹತ್ತನೇ ತರಗತಿಯಲ್ಲಿ ಆ ಮಗುವನ್ನುಮುಂದುವರೆಯಲು ನಿರಾಕರಿಸಿದ್ದರಿಂದ ಆ ಮಗುವನ್ನು ಹಿಂದಿ ಮಾಧ್ಯಮದ ಶಾಲೆಗೆ ಕಳುಹಿಸಬೇಕಾಯಿತು. ಮೊದಲ ಮೂರ್ನಾಲ್ಕು ತಿಂಗಳು ಇವನಿಗೆ ಹೊಸ ಪರಿಸರವನ್ನು ಅರ್ಥಮಾಡಿಕೊಳ್ಳಲು ಸಮಯ ಹಿಡಿಯಿತು. ಆದರೆ ನಂತರ ಈ ವಿದ್ಯಾರ್ಥಿ ತನ್ನ ಓದಿನಲ್ಲಿ ಹಿಂತಿರುಗಿ ನೋಡಲೇ ಇಲ್ಲ. ಏಕೆಂದರೆ ಈಗ ವಿಷಯಗಳನ್ನು 'ತನ್ನದೇ ಭಾಷೆಯಲ್ಲಿ' ಅರ್ಥಮಾಡಿಕೊಳ್ಳುತ್ತಿದ್ದ. ಅವನು ತನ್ನ ತಿಳುವಳಿಕೆಯನ್ನು ತನ್ನ ಸುತ್ತಮುತ್ತಲಿನ ಪರಿಸರದೊಂದಿಗೆ ಸಂಪರ್ಕಿಸುತ್ತಿದ್ದ. ಕೆಲವೇ ಸಮಯದಲ್ಲಿ, ಈ ವಿದ್ಯಾರ್ಥಿ 9 ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಅಗ್ರಸ್ಥಾನ ಪಡೆದ.*

*-ಒಬ್ಬ ಭಾಗವಹಿಸಿದ ಅಭ್ಯರ್ಥಿ*

## ಇತಿಹಾಸದ ಕಿಂಡಿಯಲ್ಲಿ ಭಾಷೆ

ಇತಿಹಾಸದ ಪುಟಗಳನ್ನು ತಿರುಗಿಸಿದಾಗ, ಮಧ್ಯಕಾಲೀನ ಹಾಗೂ ಆನಂತರದ ಯುಗದಲ್ಲಿ ಬೆಳೆದು ಬಂದ ಕರಕುಶಲ ಕಲೆಗಳು ಅವರ ಸ್ವಂತ ಭಾಷೆಗಳ ಮೂಲಕವೇ ಬೆಳೆದು ಬಂದಿದೆ ಎಂಬುದು ತಿಳಿಯಬೇಕಾದ ಸಂಗತಿ. ಕರಕುಶಲ ವಸ್ತುಗಳಿಗೆ ಪ್ರತ್ಯೇಕ ಕೇಂದ್ರಗಳಿದ್ದವು. ಅಲ್ಲಿ ಅವರು ತಮ್ಮದೇ ಆದ ಭಾಷೆಗಳಲ್ಲಿ ಜ್ಞಾನ ಮತ್ತು ಪಾಂಡಿತ್ಯವನ್ನು ಹೊಂದಿದ್ದರು ಮತ್ತು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಈ ಜ್ಞಾನವನ್ನು ವರ್ಗಾಯಿಸಲಾಗುತ್ತಿತ್ತು. ಈಗ ಅದು ಕೂಡ ಕೊನೆಗೊಂಡಿದೆ, ಏಕೆಂದರೆ ಬಂಡವಾಳಶಾಹಿಯ ಆರ್ಥಿಕ ವ್ಯವಸ್ಥೆಯು ಈ ಎಲ್ಲಾ ಕಸುಬುಗಳನ್ನು ನಾಶಪಡಿಸಿ ಇದರೊಂದಿಗೆ ಆ ಕಸುಬುಗಳಿಗೆ ಸಂಬಂಧಿಸಿದ ಭಾಷಾವೈಶಿಷ್ಟ್ಯಗಳೂ ನಶಿಸುವಂತೆ ಮಾಡಿದೆ. ನಂತರ ಈ ಭಾಷೆಗಳ ಅಸ್ತಿತ್ವವೇ ಇಲ್ಲದಂತಾಗಿದೆ. ತಿಳುವಳಿಕೆಯ ಸಾಧನವಾಗಿದ್ದ ಆ ಕರಕುಶಲ ವಸ್ತುಗಳೂ ಸಹ ಕಾಣದಂತಾಗಿದೆ. ಅದೇ ರೀತಿ ಬುಡಕಟ್ಟು ಭಾಷೆಗಳು ಎಂದು ಯಾವುದನ್ನು ಹೇಳಲಾಗುವುದೋ ಅದು ಜ್ಞಾನದ ಬಹು ದೊಡ್ಡ ಭಂಡಾರವಾಗಿ ಅದು ಆದಿವಾಸಿ ಗುಂಪುಗಳ ಬಳಿ ಇತ್ತೋ, ಅದು ಸರ್ವ ನಾಶವಾಗಿ ಹೋಗಿದೆ. ಅಲ್ಲದೆ ಅಳಿದುಳಿದ ಜ್ಞಾನವನ್ನು ಸಹಾ ನಾಶಮಾಡಲಾಗುತ್ತಿದೆ. ಈಗ ಬುಡಕಟ್ಟು ಪ್ರದೇಶಗಳಲ್ಲಿ ಶಿಕ್ಷಣದ ಮಾಧ್ಯಮವು ಇಂಗ್ಲಿಷ್ ಅಥವಾ ಹಿಂದಿಯಾಗಿದೆ.

ಅದರಲ್ಲೂ ಹೆಚ್ಚಿನ ಒಲವು ಆಂಗ್ಲ ಭಾಷೆಯ ಮೇಲೆಯೇ. ಅವರದೇ ಭಾಷೆಯಲ್ಲಿ ಶಿಕ್ಷಣವೂ ಕಡಿಮೆ. ಇದರಿಂದ ದೇಶಿಯ ಜನಪದ ಕಲೆ, ಕಸುಬುಗಳು ನಶಿಸಿ ಹೋಗುವ ಅಪಾಯವಿದೆ. ಈ ಕಲೆಗಳನ್ನು, ಕಸುಬುಗಳನ್ನು, ಸಂಗೀತವನ್ನು, ಸಂಸ್ಕೃತಿಯನ್ನು ಉಳಿಸಲು ನಮ್ಮ ಹತ್ತಿರ ಇರುವುದೊಂದೇ ದಾರಿ ನಮ್ಮ ಭಾಷೆಯ ಮೇಲೆ ಅಧಿಕಾರಯುತವಾದ ಹಿಡಿತವನ್ನು ಸಾಧಿಸುವುದು.

*ಕ್ರಿಸ್ತ ಪೂರ್ವ 500 ವರ್ಷಗಳ ಹಿಂದೆ ವಾರಣಾಸಿಯಲ್ಲಿ ಒಂದು ಘಟನೆ ಸಂಭವಿಸಿತ್ತು. ಭಗವಾನ್‌ಬುದ್ಧನು ದೇಶೀಯ ಭಾಷೆಯಲ್ಲಿ ಮೊದಲ ಧರ್ಮೋಪದೇಶವನ್ನು ನೀಡಿದನು ಮತ್ತು ಆ ಧರ್ಮೋಪದೇಶವು ಭಾಷೆಗಳ ಗಡಿಯನ್ನು ದಾಟಿ ಭಾರತದಾದ್ಯಂತ ಮತ್ತು ಏಷ್ಯಾದಾದ್ಯಂತ ಜ್ಞಾನಜ್ಯೋತಿಯನ್ನು ಬೆಳಗಿಸಿತು. ವಾರಣಾಸಿಯಲ್ಲಿ ಮಧ್ಯಕಾಲೀನ ಯುಗದಲ್ಲಿ ಸಂತ ಕಬೀರರು 'ಸಂಸ್ಕೃತ ಭಾಷೆಯು ಬಾವಿಯ ನೀರಿನಂತಾಗಿಬಿಟ್ಟಿದೆ. ಆದರೆ ಯಾವುದೇ ಭಾಷೆಯು ನೀರಿನಂತೆ ಹರಿಯಬೇಕಿದೆ', ಆಗಲೇ ಅದು ಶುದ್ಧವಾಗಿರುತ್ತದೆ ಎಂದು ಹೇಳಿದ್ದಾರೆ. ಆ ಸಮಯದಲ್ಲಿ ಅನೇಕ ಭಾಷೆಗಳು ಇದ್ದವು. ಈ ಧ್ವನಿ ಭಾರತದ ಎಲ್ಲಾ ಭಾಷೆಗಳನ್ನು ತಲುಪಿ, ಭಕ್ತಿ ಆಂದೋಲನವು ಇಡೀ ದೇಶವನ್ನು ಏಕತೆಯ ಎಳೆಯಲ್ಲಿ ಕಟ್ಟಿ ಸಮರಸತೆಯ ಧಾರೆ ಎಲ್ಲರಲ್ಲೂ ಹರಿಸುವ ಕಾರ್ಯಮಾಡಿತು.*

*— ಒಬ್ಬ ಭಾಗವಹಿಸಿದ ಅಭ್ಯರ್ಥಿ*

## ಎಲ್ಲಾ ವಿಷಯಗಳ ಶಿಕ್ಷಕರು ಭಾಷಾ ಶಿಕ್ಷಕರೇ

ಭಾಷೆಯ ಮುಖಾಂತರ ಮನಸ್ಸಿನಲ್ಲೇ ಯಾವ ರೀತಿ ಸಮಸ್ಯೆಗಳನ್ನು ಪರಿಹರಿಸುವ ಪ್ರಕ್ರಿಯೆಯು ಹೇಗೆ ಸಾಗುವುದು ಮತ್ತು ಪರಿಕಲ್ಪನೆಗಳ ಬೆಳವಣಿಗೆಗೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಂಡರೆ, ತಿಳುವಳಿಕೆಯ ಮಾಧ್ಯಮವನ್ನು ನಿರ್ಧರಿಸಲು ಸುಲಭವಾಗುತ್ತದೆ.

ಪರಿಕಲ್ಪನೆಗಳ ವಿಕಾಸ ಪರಿಕಲ್ಪನೆಗಳನ್ನು ನೀಡುವ ಮೂಲಕ ಸಾಧ್ಯವಿಲ್ಲ. ಸಾಹಿತ್ಯವು ಅಮೂರ್ತವಾದರೂ ಅಲ್ಲಿಯೂ ಸಹಾ ಪರಿಕಲ್ಪನೆಗಳ ಬೆಳವಣಿಗೆಯು ಮುಂದುವರಿಯುತ್ತಾ ಸಾಗುತ್ತದೆ. ಸಾಮಾಜಿಕ ಅಧ್ಯಯನದ ಅನೇಕ ಪರಿಕಲ್ಪನೆಗಳು ನಕ್ಷೆಗಳ ಸಹಾಯದಿಂದ ರೂಪುಗೊಳ್ಳುತ್ತವೆ ಹಾಗೂ ತೆರೆಯಲ್ಪಡುತ್ತವೆ. ಗಣಿತದ ಸಹಾಯದಿಂದ ನಕ್ಷೆಗಳನ್ನು ಅರ್ಥಮಾಡಿಕೊಳ್ಳಬಹುದು. ನಕ್ಷೆಯನ್ನು ಅರ್ಥಮಾಡಿಕೊಳ್ಳಲು ಗಣಿತವು ವಿಶೇಷ ತಿಳುವಳಿಕೆಯನ್ನು ಅಭಿವೃದ್ಧಿಪಡಿಸುತ್ತದೆ. ಇತಿಹಾಸದ ಮೇಲೆಯೂ ಕಣ್ಣಾಡಿಸಲು ನಕ್ಷೆಗಳು ಸಹಾಯ ಮಾಡುತ್ತವೆ. ಗಣಿತದ ಪರಿಕಲ್ಪನೆಗಳು ಸ್ಥೂಲ ಮತ್ತು ಶಾಶ್ವತವಾಗಿವೆ. ಅಂದರೆ ಅವು ಸಾರ್ವತ್ರಿಕವಾಗಿವೆ. ಆದ್ದರಿಂದ ಅದರ ರಚನೆಯು ಬಹಳ ಸುಲಭವಾಗಿ ಅರಿಯಬಹುದಾಗಿದೆ. ಆದರೆ ಸಾಮಾಜಿಕ ಅಧ್ಯಯನದ ರಚನೆಯು ಬದಲಾಗುತ್ತಲೇ ಇರುವುದರಿಂದ ಅದು ತನ್ನದೇ ಭಾಷೆಯಿಂದ ಮಾತ್ರವೇ ಬಹಳ ಪರಿಣಾಮಕಾರಿಯಾಗಿ ಅರ್ಥವಾಗಲು ಸಾಧ್ಯವಾಗುತ್ತದೆ.

*ಪ್ರಾಥಮಿಕ ಶಿಕ್ಷಣದ ಸಂಪೂರ್ಣ ಪಠ್ಯಕ್ರಮದಲ್ಲಿ ಭಾಷೆಯ ದೃಷ್ಟಿಕೋನವು ವಿಶೇಷ ಪ್ರಾಮುಖ್ಯತೆ ಪಡೆದಿದೆ. ವಿವಿಧ ಸನ್ನಿವೇಶಗಳ ಮುಖಾಂತರ ಭಾಷೆಯನ್ನು ಉತ್ತಮವಾಗಿ ಕಲಿಯಬಹುದಾಗಿದೆ. ಆದ್ದರಿಂದ ಪ್ರತಿಯೊಂದು ವಿಷಯವನ್ನು ಕಲಿಸುವುದು ಒಂದು ಅರ್ಥದಲ್ಲಿ ಭಾಷೆಯನ್ನು ಕಲಿಸುವುದೇಆಗಿದೆ. ಈ ದೃಷ್ಟಿಕೋನವು ಮಾಧ್ಯಮಿಕ ಶಿಕ್ಷಣದಲ್ಲಿ ಅಮೂರ್ತ ವಿಚಾರಗಳ ಸನ್ನಿವೇಶಗಳಲ್ಲಿ ಭಾಷೆಯ ಒಳಗೊಂಡಿರುವಿಕೆಯನ್ನು ಎತ್ತಿ ತೋರುತ್ತದೆ. ಕಲಿಯುವ ಪ್ರಾರಂಭಿಕ ಹಂತದಲ್ಲಿ, ಸಾಂದರ್ಭಿಕ ಅರ್ಥವು ಭಾಷಾ ಬಳಕೆಯನ್ನುಹೆಚ್ಚು ಮಾಡುತ್ತಾ ಉನ್ನತ ಹಂತಗಳಲ್ಲಿ, ಅರ್ಥವನ್ನು ಕೇವಲ ಭಾಷೆಯ ಮೂಲಕ ಮಾತ್ರವೇ ಪಡೆಯಬಹುದಾಗಿದೆ. ಭಾಷೆಯು ಶಿಕ್ಷಣದ ಕೇಂದ್ರ ಬಿಂದುವಾಗಿದ್ದು, ಪ್ರತಿಯೊಬ್ಬ ಶಿಕ್ಷಕನೂ ಮೊದಲು ಭಾಷಾ ಶಿಕ್ಷಕ ನಂತರವೇ ಇತರ ವಿಷಯಗಳ ಶಿಕ್ಷಕನಾಗಿದ್ದಾನೆ.*

*- ಭಾಗವಹಿಸಿದವರು*

## ಆಲೋಚನಾ ಸ್ವಾತಂತ್ರ್ಯ ಮತ್ತು ನೈತಿಕತೆಯ ಸವಾಲು

ಗಾಂಧೀಜಿಯವರು ಹೊಸ ಶಿಕ್ಷಣವನ್ನು(ನಯೀ ತಾಲೀಮ್) ಯೋಜಿಸುವಾಗ, ಸ್ನೇಹಿತರ ಶಾಲೆಯಲ್ಲಿ ಮಕ್ಕಳಿಗೆ ಕೇಳಿದರು, "ಒಬ್ಬ ವ್ಯಕ್ತಿ ನಾಲ್ಕು ಆಣೆಗಳಿಗೆ ಸೇಬು ಖರೀದಿಸುತ್ತಾನೆ ಮತ್ತು ಅದನ್ನು ಒಂದು ರೂಪಾಯಿಗೆ ಮಾರುತ್ತಾನೆ, ಹಾಗಾದರೆ ಅವನಿಗೆ ಏನು ಸಿಗುತ್ತದೆ?" "ಅವನಿಗೆ ಜೈಲಿನ ಶಿಕ್ಷೆ ಸಿಗುತ್ತದೆ" ಎಂದು ಪ್ರತಿಕ್ರಿಯಿಸದಿದ್ದರೆ, ಭಾಷೆಯನ್ನು ಗಣಿತದೊಂದಿಗೆ ಜೋಡಿಸಿ ನೋಡುವ ಮಗು ಸ್ವತಂತ್ರ ಭಾರತದ ಮಗು ಎಂದು ಕರೆಯಲು ಖಂಡಿತವಾಗಿಯೂ ಅರ್ಹವಾಗುವುದಿಲ್ಲ ಎಂದು ಗಾಂಧೀಜಿ ನಂಬುತ್ತಾರೆ. ನಮ್ಮ ಮಗುವಿಗೆ ನಾವು ಎಂತಹ ಶಿಕ್ಷಣ ಕೊಡಬೇಕೆಂದರೆ ಅವರು ತಮ್ಮ ಭಾಷೆಯಲ್ಲಿ ಅಭಿವ್ಯಕ್ತ ಪಡಿಸಲು ಸಾಧ್ಯವಾಗುವಂತೆ ಇರಬೇಕು. ಇದು ನಮ್ಮದೇ ಭಾಷೆಯ ಶಿಕ್ಷಣದಿಂದ ಮಾತ್ರ ಸಾಧ್ಯ.

ವಿಜ್ಞಾನದ ವಿದ್ಯಾರ್ಥಿಗಳ ಮೇಲೆ ಎರಡು ರೀತಿಯ ಜವಾಬ್ದಾರಿಗಳಿವೆ. ಅವರು ಏಕಕಾಲದಲ್ಲಿ ಎರಡು ಭಾಷೆಗಳ ಜ್ಞಾನವನ್ನು ಹೊಂದಿರುವುದು ಅವಶ್ಯಕ. ಒಂದು ತಿಳುವಳಿಕೆಯ ಭಾಷೆ ಮತ್ತೊಂದು ವಿಜ್ಞಾನದ ಭಾಷೆ. ವಿಜ್ಞಾನವು ಕೇವಲ ಚಿತ್ರಗಳ ಬಗ್ಗೆ ವ್ಯವಹರಿಸದೇ ಸಮರ್ಥವಾದ/ನೇರವಾದ ಹೇಳಿಕೆಯನ್ನು ನಿರೀಕ್ಷಿಸುತ್ತದೆ.ಅವರು ನೇರವಾಗಿ ವಾದ ಮಾಡುವರು. ವಿಜ್ಞಾನದ ವಿದ್ಯಾರ್ಥಿಗಳು 'ನಾನ್- ಕಂಫರ್ಮಿಸ್ಟ್' ಸಹಾ ಆಗಬೇಕಿದೆ. 'ಹಿರಿಯರು ಹೇಳಿದ್ದಾರೆಂಬ ಕಾರಣಕ್ಕೆ ಯಾವುದನ್ನೇ ಆಗಲಿ ನಂಬಬಾರದು, ಅದನ್ನು ಪರೀಕ್ಷಿಸಿ, ಸಾಬೀತಾದ ನಂತರವೇ ನಂಬಬೇಕು' ಎಂದು ಗೌತಮ ಬುದ್ಧನು ಹೇಳಿದ್ದಾನೆ. ಇದೆಲ್ಲವೂ ಸಾಧ್ಯವಾಗಬೇಕೆಂದರೆ ಶಿಕ್ಷಣದಲ್ಲಿ ನಮ್ಮ ಭಾಷೆಗೆ ಸ್ವಾತಂತ್ರ್ಯ ನೀಡಬೇಕಿದೆ. ಈ ಸ್ವಾತಂತ್ರ್ಯವನ್ನು ಶಿಕ್ಷಕರಿಗೆ ನೀಡಬೇಕು. ಪ್ರತಿಯೊಬ್ಬ ಶಿಕ್ಷಕನಿಗೂ ಈ ಸ್ವಾತಂತ್ರ್ಯ ನೀಡಬೇಕಿದೆ. ಅದು ಗಣಿತ ಶಿಕ್ಷಕನಾಗಲೀ ಅಥವಾ ವಿಜ್ಞಾನ ಶಿಕ್ಷಕನಾಗಲೀ, ಅವರೆಲ್ಲಾ ಭಾಷಾ ಶಿಕ್ಷಕರೇ. ಒಂದು ಭಾಷೆಯನ್ನು ಕಲಿಸುವ ಜವಾಬ್ದಾರಿ ಭಾಷಾ ಶಿಕ್ಷಕರದ್ದು ಮಾತ್ರವಲ್ಲ ಎಲ್ಲಾ ಶಿಕ್ಷಕರ ಜವಾಬ್ದಾರಿಯಾಗಿದೆ. ಗಣಿತ, ಸಮಾಜ ವಿಜ್ಞಾನ ಮತ್ತು ಅರ್ಥಶಾಸ್ತ್ರದಂತಹ ವಿಷಯಗಳಲ್ಲಿನ ಮೂಲಭೂತ ಚಿಂತನೆಯು ಸ್ವಂತ ಭಾಷಾ ಶಿಕ್ಷಣದಿಂದ ಮಾತ್ರ ಸಾಧ್ಯ.

## ಭಾಷೆ ಮತ್ತು ಇತರ ವಿಷಯಗಳು

ಭಾಷೆ ನಮ್ಮೆಲ್ಲರ ಮನದಲ್ಲಿ ಆಳವಾಗಿ ನೆಲೆಯೂರಿಬಿಟ್ಟಿದೆ. ಪರಿಕಲ್ಪನೆಗಳ ರಚನೆ ಈ ಭಾಷೆಯಿಂದಲೇ ಮಾಡಲ್ಪಟ್ಟಿದೆ. ನಮ್ಮ ಅನುಭವಗಳ ಆಧಾರದ ಮೇಲೆ ನಾವು ನಮ್ಮ ಮನಸ್ಸಿನಲ್ಲಿ ಮೂಡುವ ಚಿತ್ರಗಳನ್ನು ಜೀವಂತಗೊಳಿಸಿ ಜ್ಞಾನವನ್ನು ಮುಂದೆ ಕೊಂಡೊಯ್ಯುತ್ತೇವೆ.. ಗಣಿತ, ವಿಜ್ಞಾನ ಈ ಎಲ್ಲಾ ವಿಷಯಗಳಲ್ಲೂ ಇಂತಹ ಪರಿಕಲ್ಪನೆಗಳಿದ್ದು, ಅವು ಭಿನ್ನ-ಭಿನ್ನ ವಸ್ತುಗಳ ಸ್ವರೂಪವನ್ನು ಅದೇ ರೂಪದಲ್ಲಿ ನಮ್ಮ ಮುಂದೆ ಇಡಲಾಗುತ್ತದೆ. ಹೇಗೆ ಭೂಮಿಯು ದುಂಡಗಿರುವುದೋ; ಈ ದುಂಡನೆಯ ಪರಿಕಲ್ಪನೆಯು ಸ್ವತ: ನಮ್ಮ ಕಣ್ಣ ಮುಂದೆ ಮೂಡುವುದು. ಹಿಂದಿ ಭಾಷೆಯಲ್ಲಿ ದೋ ರೋಟಿ ಅಂದರೆ ಎರಡು ರೊಟ್ಟಿ, ತೀನ್ ಭಾಯ್ ಅಂದರೆ ಮೂವರು ಸಹೋದರರು. ಅಂದರೆ ಸಂಖ್ಯೆಗಳನ್ನು ಅತ್ಯಂತ ಸುಲಭವಾಗಿ ಇತರ ಪದಗಳೊಂದಿಗೆ ಉಪಯೋಗ ಮಾಡಬಹುದಾಗಿದೆ. ನಾಲ್ಕು ವರ್ಷದ ಮಗು ಕೂಡ ಇದೆಲ್ಲವನ್ನೂ ಸುಲಭವಾಗಿ

ಮಾಡುತ್ತದೆ. ಕುರ್ಚಿಯ ಪ್ರತಿಯೊಬ್ಬರ ವ್ಯಾಖ್ಯಾನವು ವಿಭಿನ್ನವಾಗಿರುತ್ತದೆ. ಒಂದು ಪರಿಕಲ್ಪನೆಯು ಇತರ ಪರಿಕಲ್ಪನೆಗಳಿಗೆ ಹೇಗೆ ಸಂಬಂಧಿಸಿದೆ ಎಂಬುದರ ಬಗ್ಗೆ ಮಕ್ಕಳಿಗೆ ತಿಳಿದಿರುತ್ತದೆ ಮತ್ತು ಶಾಲೆಯಲ್ಲಿ ವ್ಯಾಖ್ಯಾನಗಳನ್ನು ನೀಡುವ ವಿಧಾನವು ಬಹುಶಃ ಹಲವು ಬಾರಿ ಅನುಮಾನಗಳನ್ನು ಹುಟ್ಟುಹಾಕುತ್ತದೆ ಮಗುವಿಗೆ ತನ್ನದೇ ಆದ ಭಾಷೆ ಇದೆ, ಅದರಲ್ಲಿ ಅವನು ತನ್ನ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿಕೊಂಡಿರುವನು, ಒಂದು ಸಮಾಜದ ಭಾಷೆಯಿಂದ, ನಂತರ ವಿಷಯದ ಭಾಷೆಯೂ ಬಹಳ ಮುಖ್ಯವಾಗುತ್ತದೆ, ಅದರಲ್ಲಿ ಅವನು ಮಾಹಿತಿಯನ್ನು ಒದಗಿಸಬೇಕಿದೆ.ಇವರಿಗೆ ತಿಳಿದಿರುವ ಭಾಷೆಯಲ್ಲಿ ವಿಷಯಗಳನ್ನು ಓದುವುದು, ಬರೆಯುವುದು ಮತ್ತು ಅರ್ಥಮಾಡಿಕೊಳ್ಳುವುದು ಬಹಳ ಸುಲಭವಾಗುವುದು. ಇದನ್ನು ಹೇಗೆ ಕಾರ್ಯಗತಗೊಳಿಸಬೇಕು ಎಂಬ ವಿಚಾರವನ್ನು ನಾವು ನಿರ್ಧರಿಸಬೇಕಿದೆ. ಓದುವ ಮತ್ತು ಬರೆಯುವ ಆರಂಭಿಕ ಹಂತದಲ್ಲಿ, ಅವರ ತಿಳುವಳಿಕೆಯನ್ನು ಹುಟ್ಟುಹಾಕಲು ಅಥವಾ ಹೆಚ್ಚಿಸಲು ನಿಮ್ಮ ಸ್ವಂತ ಪದಗಳನ್ನು ಹೊಂದಿದ್ದರೆ, ನಂತರ ವಿಷಯಗಳು ಸುಲಭವಾಗುತ್ತವೆ, ಚಿತ್ರಗಳನ್ನು ರಚಿಸುವುದು ಸುಲಭವಾಗುತ್ತದೆ.

ಹಿಂದಿ ಮಾಧ್ಯಮದ ಗಣಿತ ತರಗತಿಗಳಲ್ಲಿ 'ಸಿಲಿಂಡರ್ ಆಕಾರದ' ಪದವನ್ನು 'ಬೇಲನಾಕಾರ್' ಎಂದು ಕಲಿಸಲಾಗುತ್ತದೆ. ಈ ಪದವು ಮಗುವಿನ ಮನಸ್ಸಿನಲ್ಲಿ ಯಾವ ಚಿತ್ರಣ ಮೂಡಿಸುತ್ತದೆ? ಚೆಂಡು, ಸರ್ಕಲ್, ಗೋಳ, ವೃತ್ತಾಕಾರ,ಗೋಳಾಕಾರ,ಇತ್ಯಾದಿ.

## ತಾಂತ್ರಿಕ ಪರಿಭಾಷೆ ಮತ್ತು ಮಗುವಿನ ತಿಳುವಳಿಕೆ

ಇಲ್ಲಿ ನಾವು ಮಗುವಿನ ಹಿಂದಿನ ಜ್ಞಾನವನ್ನು ಹೊಸ ಜ್ಞಾನ ಮತ್ತು ಹೊಸ ಶಬ್ದಕೋಶಗಳ ಜೊತೆ ಸಂಬಂಧವೇರ್ಪಡಿಸಲು ಬಯಸುತ್ತೇವೆ. ಸಿಲಿಂಡರಾಕಾರದ ಬದಲು 'ಬಳೆ ಆಕಾರ', 'ಚೆಂಡಿನ ಆಕಾರ' ಮುಂತಾದ ಪದಗಳನ್ನು ಏಕೆ ಬಳಸಬಾರದು. ಆಯಸ್ಕಾಂತಗಳಿಗೆ ಆಕರ್ಷಣೆ-ವಿಕರ್ಷಣೆ ಎಂಬ ಪದವನ್ನು ಬಳಸಲಾಗುತ್ತದೆ. ಈ ಪದಗಳನ್ನು ಸಾಮಾನ್ಯವಾಗಿ ಯಾವಾಗಲೂ ಉಪಯೋಗ ಮಾಡದಿದ್ದರೆ ಈ ತಿಳಿಯದ ಅಜ್ಞಾತ ಪದಗಳ ಭಾರವನ್ನು ಏಕೆ ಹೆಚ್ಚಿಸಬೇಕು. ಅದಕ್ಕಾಗಿಯೇ ಮಕ್ಕಳ ಸ್ಥಿತಿಯೆಂದರೆ ಶಕ್ತಿ, ತಾಕತ್ತು, ಬಲ ಈ ಎಲ್ಲಾ ಪದಗಳನ್ನು ಒಂದೇ ರೀತಿಯಲ್ಲಿ ಬಳಸಲಾಗುತ್ತದೆಯಾದರೂ ತಾಂತ್ರಿಕವಾಗಿ ಬಳಸುವಾಗ ಈ ಪದಗಳ ಅರ್ಥಗಳು ಬದಲಾಗುತ್ತವೆ. ನಾವು ಮಗುವಿನ ಮನಸ್ಸನ್ನು ಪಡೆಯಬಹುದೇ? ಎನ್.ಸಿ.ಆರ್.ಇ.ಟಿ ಪುಸ್ತಕಗಳಿಂದ ಕೆಲವು ಉದಾಹರಣೆಗಳು-

## ಸೀಮಾಳ ಶತಕ

ಸೀಮಾಳು ವಿವಿಧ ರೀತಿಯ ಚುಕ್ಕೆಗಳೊಂದಿಗೆ ವಿನ್ಯಾಸವನ್ನು ಮಾಡಿದ್ದಾಳೆ.



- ವಿವಿಧ ವೈಯಕ್ತಿಕ ಸಮೂಹಗಳನ್ನು ಜಾಗ್ರತೆಯಿಂದ ನೋಡಿ ಮತ್ತು ಚುಕ್ಕೆಗಳ ಒಟ್ಟು ಸಂಖ್ಯೆಯನ್ನು ಅಂದಾಜು ಮಾಡಿ.
- ಇನ್ನೂ ಕೆಲವು ಸಮೂಹಗಳ ಚಿತ್ರ ಬರೆಯಿರಿ, ಇದರಿಂದ 100 ಚುಕ್ಕೆಗಳು ಪೂರ್ಣಗೊಳ್ಳುತ್ತವೆ. ನೀವು ಇನ್ನೂ ಎಷ್ಟು ಚುಕ್ಕೆಗಳನ್ನು ಮಾಡಬೇಕಾಗಿದೆ?

*ಮೂಲ: ಗಣಿತ್ ಕಾ ಜಾದೂ, ಪುಸ್ತಕ್ 2, ತರಗತಿ 2, ಎನ್.ಸಿ.ಇ.ಆರ್.ಟಿ*

ಎಷ್ಟು ಜನ ಮಕ್ಕಳು ಸುಲಭವಾಗಿ ಗಣಿತವನ್ನು ಕಲಿಯುತ್ತಿದ್ದಾರೆ ಮತ್ತು ಅವರ ಸುತ್ತ-ಮುತ್ತಲಿನ ಜೀವನದೊಂದಿಗೆ ಆ ಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ.

## ಎಲೆಗಳು

*ಎಲ್ಲಾ ಎಲೆಗಳು ಒಂದೇ ಬಣ್ಣ, ಆಕಾರ ಮತ್ತು ಅಂಚು ಒಂದೇ ರೀತಿಯದ್ದಾಗಿದೆಯೇ? ದಯಾರಾಮನು ಹೇಳಿದನು - ಇಷ್ಟು ವಿಧದ ಎಲೆಗಳಿರುತ್ತವೆ ಎಂದು ನನಗೆ ತಿಳಿದಿರಲಿಲ್ಲ. ನೋಡಿ, ಕೆಲವು ದುಂಡಾಗಿರುತ್ತವೆ, ಕೆಲವು ಉದ್ದವಾಗಿರುತ್ತವೆ ಮತ್ತು ಕೆಲವು ತ್ರಿಕೋನವಾಗಿರುತ್ತವೆ!*

*ಅಮ್ಮೂ ಹೇಳಿದಳು- ಇವುಗಳ ಬಣ್ಣಗಳೂ ಸಹಾ ತುಂಬಾ ವಿಭಿನ್ನವಾಗಿವೆ, ಕೆಲವು ತಿಳಿ ಹಸಿರು ಮತ್ತು ಕೆಲವು ಕಡು ಹಸಿರು. ಕೆಲವು ಹಳದಿ, ಕೆಂಪು, ನೇರಳೆ. ಒಂದು ಎಲೆ ಹಸಿರು, ಆದರೆ ಮೇಲೆ ಬಿಳಿ ಚುಕ್ಕೆಗಳಿವೆ.*

*ಶಬ್ನಮ್ ಹೇಳಿದಳು - ನೋಡಿ, ಎಲೆಗಳ ಅಂಚುಗಳು ಸಹಾ ತುಂಬಾ ವಿಭಿನ್ನವಾಗಿವೆ. ಕೆಲವು ಎಲೆಗಳ ಅಂಚು ನೇರವಾಗಿದ್ದರೆ ಕೆಲವು ಹರಿದಿವೆ. ಕೆಲವು ಅಂಚುಗಳಂತೂ ಗರಗಸದಂತಿವೆ. ಈಗ ನಾನು "ಪೌಧೋಂಕಿ ಪರಿ" (ಮರ-ಗಿಡಗಳ ಮೇಲೆ ಚಿಟ್ಟೆಯ ರೀತಿ ಹಾರುವ ಸುಂದರ ಸ್ತ್ರೀ)ಆಗುತ್ತೇನೆ" , ಎಂದು ಅಮ್ಮು ಮತ್ತು ಶಬ್ನಮ್ ಒಟ್ಟಿಗೆ ಹೇಳುತ್ತಾರೆ.*

*ನಿಂಬೆ, ಮಾವು, ಬೇವು, ತುಳಸಿ, ಪುದೀನಾ, ಹಸಿರು ಕೊತ್ತಂಬರಿ ಮುಂತಾದ ಕೆಲವು ಎಲೆಗಳನ್ನು ಸಂಗ್ರಹಿಸಿ. ಈ ಎಲೆಗಳನ್ನು ಪುಡಿಮಾಡಿ ಮತ್ತು ಅವುಗಳ ಪರಿಮಳವನ್ನು ಅನುಭವಿಸಿ. ಎಲ್ಲಾ ಎಲೆಗಳು ಒಂದೇ ವಾಸನೆಯನ್ನು ನೀಡುತ್ತವೆಯೇ? ವಾಸನೆಯಿಂದ ಈ ಎಲೆಗಳನ್ನು ಗುರುತಿಸಲು ನಿಮಗೆ ಸಾಧ್ಯವಾಗುತ್ತದೆಯೇ?*

*ನೋಡಿ, ಎಂತಹ ಸುಂದರ ಚಿತ್ರ ಮಾಡಲಾಗಿದೆ. ಹೌದು, ಇದನ್ನು ಒಣಗಿದ ಎಲೆಗಳಿಂದ ಮಾತ್ರ ತಯಾರಿಸಲಾಗುತ್ತದೆ. ಈಗ ನೀವು ನಿಮ್ಮ ನೋಟ್‌ಬುಕ್‌ನಲ್ಲಿ ಒಣ ಎಲೆಗಳಿಂದ ವಿವಿಧ ಪ್ರಾಣಿಗಳ ಚಿತ್ರಗಳನ್ನು ಸಹ ಮಾಡಿ.*

*ಮೂಲ: ಆಸ್ -ಪಾಸ್ , ಪರಿಸರ ಅಧ್ಯಯನ, 3 ನೇ ತರಗತಿ*

*ಮರುಭೂಮಿಯಲ್ಲಿ ವಾಸಿಸುವ ಜನರು ತಮ್ಮ ಅನುಭವಗಳನ್ನು ಆಚರಣೆಗೆ ತರಲು ಒಂದು ಗ್ರಂಥವನ್ನು ಬರೆದಿದ್ದಾರೆ. ಈ ಗ್ರಂಥವು ಸಮಾಜಕ್ಕೆ ದೊರೆಯುವ ನೀರನ್ನು ಮೂರು ರೂಪಗಳಲ್ಲಿ ವಿಂಗಡಿಸಿದೆ. ಮೊದಲ ರೂಪ ಪಾಲರ್‌ಪಾನಿ ಅಂದರೆ ಮಳೆಯಿಂದ ನೇರವಾಗಿ ಪಡೆಯುವ ನೀರು. ಇದು ಭೂಮಿಯ ಮೇಲೆ ಹರಿಯುತ್ತದೆ ಹಾಗೂ ಇವುಗಳನ್ನು ನದಿ, ಕೊಳ ಇತ್ಯಾದಿಗಳ ಮುಖಾಂತರ ನಿಲ್ಲುವಂತೆ ಮಾಡಲಾಗುತ್ತದೆ. ನೀರಿನ ಇನ್ನೊಂದು ರೂಪವನ್ನು ಪಾತಾಲ್ಪಾನಿ ಎಂದು ಕರೆಯಲಾಗುತ್ತದೆ. ಬಾವಿಗಳಿಂದ ಹೊರತೆಗೆಯುವ ಅಂತರ್ಜಲವೂ ಇದೇ ಆಗಿದೆ. ಪಲಾರ್ಪಾನಿ ಮತ್ತು ಪಾತಾಲ್ಪಾನಿಗಳ ನಡುವೆ ಮೂರನೇ ರೂಪದ ನೀರು ಇದೆ ಅದೇ 'ರೇಜಣಿನೀರು'. ನೆಲದಿಂದ ಇಳಿದ ಆದರೆ ಪಾತಾಳದಲ್ಲಿ ಸಿಗದ ನೀರು.*

*ಮೂಲ: ವಿಜ್ಞಾನ ಭಾಗ 1, ತರಗತಿ 11, ಹಿಂದಿ, ಎನ್.ಸಿ.ಇ.ಆರ್.ಟಿ*

*ಈ ಎರಡೂ ಉದಾಹರಣೆಗಳು ಪರಿಸರವನ್ನು ಸರಳ ಪದಗಳಲ್ಲಿ ಪ್ರಸ್ತುತಪಡಿಸುತ್ತವೆ. ಎರಡನೆಯ ಉದಾಹರಣೆಯಲ್ಲಿ ಪಲಾರ್ಪಾನಿ, ಪಾತಾಳಪಾನಿ, ರೇಜಾಣಿಪಾನಿ ಮುಂತಾದ ಪದಗಳನ್ನು ಸರಳ ರೀತಿಯಲ್ಲಿ ವಿವರಿಸಲಾಗಿದೆಯೇ ಹೊರತು ತಾಂತ್ರಿಕ ಪರಿಭಾಷೆಯಲ್ಲಿ ಅಲ್ಲ. ಮಕ್ಕಳು ಈ ಪ್ರಕ್ರಿಯೆಯನ್ನು ಯಾವುದೇ ರೀತಿಯ ಬಾಯಿಪಾಠ ಮಾಡದೆಯೇ ಅತ್ಯಂತ ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ.*

## ಕೆಲವು ಇತರ ಉದಾಹರಣೆಗಳು



ಈ ದಿನ ಸುಗಂಧಾ ತುಂಬಾ ಸಂತೋಷವಾಗಿದ್ದಾಳೆ. ಅವರ ಶಾಲೆಯ ಎಲ್ಲಾ ಮಕ್ಕಳು ತಮ್ಮ ಶಿಕ್ಷಕರೊಂದಿಗೆ ಭೋಪಾಲ್‌ಗೆ ಹೋಗುತ್ತಿದ್ದಾರೆ. ಮೀನಾಕ್ಷಿ ಮೇಡಂ ಮತ್ತು ರಾಕೇಶ್ ಸರ್ ಒಟ್ಟು ಎಷ್ಟು ಬಸ್ಸುಗಳು ಬೇಕಾಗುತ್ತವೆ ಎಂದು ಮಾತನಾಡುತ್ತಿದ್ದಾರೆ.

ಮೀನಾಕ್ಷಿ ಮೇಡಂ - ನಮಗೆ ನಾಲ್ಕು ಬಸ್ಸುಗಳು ಬೇಕು.

ರಾಕೇಶ್ ಸರ್ - ನನ್ನ ಪ್ರಕಾರ ಐದು ಬಸ್ಸುಗಳು ಬೇಕಾಗಬಹುದು.

ಮೀನಾಕ್ಷಿ ಮೇಡಂ - ಪ್ರತಿ ಬಸ್ಸಿನಲ್ಲಿ 50 ಸೀಟುಗಳಿರುತ್ತವೆ.

ರಾಕೇಶ್ ಸರ್ - ಎಷ್ಟು ಮಕ್ಕಳು ಬರುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಿದೆ.

| ತರಗತಿ | ವಿದ್ಯಾರ್ಥಿಗಳ ಸಂಖ್ಯೆ |
|---|---|
| I | 33 |
| II | 32 |
| III | 42 |
| IV | 50 |
| V | 53 |
| ಒಟ್ಟು | 210 |




- ಹಾಗಾದರೆ ಒಟ್ಟು............ ಮಕ್ಕಳು ಹೊರಡುತ್ತಿದ್ದಾರೆ.
- ನಾಲ್ಕು ಬಸ್‌ಗಳು ಬಂದರೆ ಎಷ್ಟು ಮಕ್ಕಳು ಕುಳಿತುಕೊಳ್ಳಲು ಸಾಧ್ಯವಾಗುತ್ತದೆ?..........
- ಯಾವುದೇ ಮಗು ಕುಳಿತುಕೊಳ್ಳಲು ಜಾಗವಿಲ್ಲದೆ ಆಗಬಹುದೇ?




*- ಗಣಿತದ ಜಾದೂ, ಪುಸ್ತಕ 2, ತರಗತಿ 2, ಎನ್.ಸಿ.ಇ.ಆರ್.ಟಿ*

## ಬೇಗ- ಬೇಗನೆ ಫಟಾಫಟ್

ಮಕ್ಕಳು ತರಗತಿಯಲ್ಲಿ ವೃತ್ತ ಮಾಡಿ ಕುಳಿತಿದ್ದಾರೆ. ಅವರು ಈ ಆಟವನ್ನು ಆಡುತ್ತಿದ್ದಾರೆ ಮತ್ತು ಹಾಡುತ್ತಾರೆ.

ಯಾವುದು ಉದ್ದ, ಯಾವುದು ದುಂಡಾಗಿದೆ?
ಬೇಗ ಹೇಳು, ಬೇಗ ಹೇಳು

ರೀನಾ ಹೇಳುವಳು




ಎಲ್ಲಾ ಮಕ್ಕಳು ಹಾಡುತ್ತಿದ್ದಾರೆ
ಯಾವುದು ಉದ್ದ, ಯಾವುದು ದುಂಡಾಗಿದೆ?
ಬೇಗ ಹೇಳು, ಬೇಗ ಹೇಳು

ಮೋನು ಹೇಳುತ್ತಾಳೆ




ಮತ್ತು ಹೀಗೆ ಆಟ ಮುಂದುವರಿಯುತ್ತಿರುತ್ತದೆ

- ನಿಮ್ಮ ತರಗತಿಯಲ್ಲೂ ನೀವು ಈ ಆಟವನ್ನು ಆಡಿರಿ. ಉದ್ದವಾದ ಮತ್ತು ದುಂಡಗಿನ ವಸ್ತುವಿನ ಹೆಸರನ್ನು ಹೇಳಬೇಕು. ಆಟದಲ್ಲಿ, ಒಮ್ಮೆ ಯಾವ ಹೆಸರನ್ನು ಹೇಳಿರುತ್ತೀರೋ ಮತ್ತೆ ಅದೇ ಹೆಸರನ್ನು ಹೇಳಬಾರದು.

*– ಗಣಿತದ ಜಾದೂ, ಪುಸ್ತಕ 2, ತರಗತಿ 2, ಎನ್.ಸಿ.ಇ.ಆರ್.ಟಿ*

## ಭೀಮೇಟ್ಕಾ ಕಡೆಗೆ

ಬಸ್‌ಗಳಿಗೆ ಡೀಸೆಲ್ ತುಂಬಿದ ಬಳಿಕ ಪ್ರಯಾಣವನ್ನು ಆರಂಭಿಸಲಾಯಿತು. ಮಕ್ಕಳಿಗೆ ಮೊದಲು ಭೀಮೇಟ್ಕಾ ತಲುಪುತ್ತಾರೆಂದು ಹೇಳಲಾಯಿತು.

ಅಂಜನ್ -ಭೀಮೇಟ್ಕಾ ಎಂದರೇನು?

ರೈನಾ ಮೇಡಂ - ಇದು ಹತ್ತು ಸಾವಿರ ವರ್ಷಗಳ ಹಿಂದೆ ನಿರ್ಮಿಸಲಾದ ವರ್ಣಚಿತ್ರಗಳಿರುವ ಅನೇಕ ಗುಹೆಗಳ ತಾಣವಾಗಿದೆ.

ಸುಮೋಂತೋ - ಹತ್ತು ಸಾವಿರ... ಸಾವಿರ ವರ್ಷ! ನಾನು ಸಾವಿರ ವರ್ಷಗಳ ಹಿಂದಿನದನ್ನು ಯೋಚಿಸಲು ಸಹ ಸಾಧ್ಯವಿಲ್ಲ.

ಗೋಪಿ -ಓ! ಒಂದು ಸಾವಿರ ವರ್ಷಗಳೆಂದರೆನೇ ಬಹಳ. ನಾನದರೋ ನೂರು ವರ್ಷಗಳ ಹಿಂದಿನದನ್ನು ಯೋಚಿಸಲು ಸಹಾ ಸಾಧ್ಯವಿಲ್ಲ.

ಗೌರಿ -ನನ್ನ ತಂದೆಯ ಅಜ್ಜಿಗೆ 100 ವರ್ಷ ವಯಸ್ಸಾದ ಕಾರಣ ನಾನು 100 ವರ್ಷಗಳ ಬಗ್ಗೆ ಯೋಚಿಸಬಹುದು.

ಮಂಜೀತ್ - ಅಂದರೆ ಈ ಗುಹೆಗಳು ಸುಮಾರು ನೂರು ಮುತ್ತಜ್ಜಿಯಷ್ಟು ಹಳೆಯವು!!

ಎಲ್ಲರೂ ಜೋರಾಗಿ ನಕ್ಕರು! ಹಾ! ಹಾ! ಹಾ! ,
ಮಕ್ಕಳು ಗುಹೆಗಳಲ್ಲಿ ಮಾಡಿದ ಚಿತ್ರಗಳನ್ನು ನೋಡಲು ಬಯಸಿದರು. ಸುಮಾರು 11 ಗಂಟೆಗೆ ಅವರು ಭೀಮೇಟ್ಕಾ ತಲುಪಿದರು.




*– ಗಣಿತದ ಜಾದೂ, ಪುಸತಕ 2, ತರಗತಿ 2, ಎನ್.ಸಿ.ಇ.ಆರ್.ಟಿ*

ಶಂಕರ್ - ಈ ಚಿತ್ರದಲ್ಲಿ ದೊಡ್ಡ ದೊಡ್ಡ ಗೂಳಿಗಳ ಚಿತ್ರ ಬಿಡಿಸಲಾಗಿದೆ. ನಾನು ಒಂದು ಹೇಳುವೆ. ಈ ಚಿತ್ರಗಳಲ್ಲಿ ನಾನು ಎತ್ತುಗಳನ್ನು ಎಣಿಸುತ್ತೇನೆ ಮತ್ತು ನೀವು ಜಿಂಕೆಗಳನ್ನು ಎಣಿಸಿರಿ.

ಬೊನೋಮಾಲಾ - ನಾನು ಜನರನ್ನು ಎಣಿಸುತ್ತೇನೆ. ಹೆಚ್ಚು ಯಾವುದಿದೆ ನೋಡೋಣ - ಗೂಳಿ, ಜಿಂಕೆ ಅಥವಾ ಜನರು.




- ಇಲ್ಲಿ ಗೂಳಿಗಳಿಗಿಂತ ಎಷ್ಟು ಜಿಂಕೆಗಳು ಹೆಚ್ಚಾಗಿವೆ?...................... ಆದರೆ ಬೊನೊಮಾಲಾ ಅತ್ಯಂತ ಸಂತೋಷಪಟ್ಟಳು ಏಕೆಂದರೆ ಎತ್ತುಗಳು ಮತ್ತು ಜಿಂಕೆಗಳು ಎರಡೂ ಒಟ್ಟಾಗಿ ಸೇರಿಸಿದರೂ ಅದಕ್ಕೂ ಹೆಚ್ಚಿನದ್ದು ಜನರ ಸಂಖ್ಯೆ. ಆದರೆ ಜನರ ಸಂಖ್ಯೆ 200ಕ್ಕಿಂತ ಕಡಿಮೆ ಇತ್ತು.

- ಅವಳು ಎಷ್ಟು ಜನರನ್ನು ಎಣಿಸಿದ್ದಳು?

214, 154, 134, 177

ಇಲ್ಲಿ ಒಟ್ಟು 600 ಗುಹೆ ವರ್ಣಚಿತ್ರಗಳಿವೆ ಎಂದು ಗೈಡ್ ಹೇಳಿದರು.

ಈಗ ಭೀಮೇಟ್ಕಾವನ್ನು ಬಿಡುವ ಸಮಯವಾಗಿದೆ.

*ಮೂಲ: ಗಣಿತದ ಜಾದೂ, ಪುಸ್ತಕ 2, ತರಗತಿ 2, ಎನ್.ಸಿ.ಇ.ಆರ್.ಟಿ*

*(ಮೇಲಿನ ಎಲ್ಲಾ ಉಲ್ಲೇಖಗಳು ಭಾಷೆಯನ್ನು ಸುಲಭವಾಗಿ ಪ್ರಸ್ತುತಪಡಿಸುವ ಸುಂದರವಾದ ಪ್ರಯತ್ನ)*

## ಉನ್ನತ ಶಿಕ್ಷಣ ಮತ್ತು ಇತರೆ ವಿಷಯಗಳು

ಈಗ ಬರುವ ಪ್ರಶ್ನೆಯೆಂದರೆ, ಪ್ರಾರಂಭಿಕ ಹಂತದಲ್ಲಿ ಅವರ ಭಾಷೆಗಳೇ ಬಳಕೆಯಾಗಿ, ಇವೇ ಭಾಷೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ನೀಡಿದರೆ ಮುಂದೆ ಏನಾಗಬಹುದು? ನಾವೀಗ ಅಂದುಕೊಳ್ಳುವುದೇನೆಂದರೆ, ಒಬ್ಬ ವಿದ್ಯಾರ್ಥಿ ಹತ್ತನೇ ತರಗತಿಯವರೆಗೆ ತನ್ನ ಭಾಷೆಯಲ್ಲಿ ಓದುತ್ತಾನೆ ಎಂದಿಟ್ಟುಕೊಳ್ಳಿ, ನಂತರ ಅವನು ತನ್ನ ಮುಂದಿನ ಶಿಕ್ಷಣ ಹಾಗೂ ತನ್ನ ಅಧ್ಯಯನವನ್ನು ಯಾವ ಭಾಷೆಯಲ್ಲಿ ಮಾಡುತ್ತಾನೆ. ಅವನು 10ನೇ ತರಗತಿಯವರೆಗೆ ಸಂತಾಲಿಯಲ್ಲಿ ಓದಿ 11 ನೇ ತರಗತಿಗೆ ಹೋಗುತ್ತಾನೆ ಅಥವಾ ಇಂಜಿನಿಯರಿಂಗ್ ಅಥವಾ ವೈದ್ಯಕೀಯ ಓದುತ್ತಾನೆ, ನಂತರ ಅವನು ಯಾವ ಭಾಷೆಯಲ್ಲಿ ಓದುತ್ತಾನೆ?ಅಥವಾ ಕೇವಲ ಬಿ.ಎ. ಎಂ.ಎ. ಮಾಡಿದರೂ, ಯಾವ ಭಾಷೆಯಲ್ಲಿ ಅಧ್ಯಯನ ಮಾಡುವುದು? ಸಂತಾಲಿಯಂತಹ ಬುಡಕಟ್ಟು ಭಾಷೆಗಳಲ್ಲಿ ಮಕ್ಕಳು ಕಲಿತು ಬಂದರೆ, ನಮ್ಮ ವಿಶ್ವವಿದ್ಯಾಲಯಗಳು ಈ ಭಾಷೆಗಳಲ್ಲಿ ಕಲಿಸಲು ಸಮರ್ಥವಾಗಿವೆಯೇ? ಸಂತಾಲಿಯಲ್ಲಿ ಓದಿದರೂ ಕೆಲಸ ಸಿಗುವುದೇ ಎಂಬುದೇ ಮೂರನೇ ಪ್ರಶ್ನೆ. ಕೆಲಸ ಸಿಗದಿದ್ದರೆ ಏತಕ್ಕೆ ಸಿಗುವುದಿಲ್ಲ? ಅವರದೇ ಭಾಷೆಯಲ್ಲಿ ಕಲಿತ ನಾಗರಿಕರಿಗೆ ಉದ್ಯೋಗ ಕೊಡಲು ಸಾಧ್ಯವಾಗದ ಈ ವ್ಯವಸ್ಥೆ ಎಂತಹುದಿರಬಹುದು? ನಮ್ಮ ದೇಶದಲ್ಲಿ ಕೆಲಸ ಪಡೆಯಲು ಇಂಗ್ಲಿಷ್ ಜ್ಞಾನ ಕಡ್ಡಾಯವಾಗಿದೆ. ಆದರೆ, ಇತ್ತೀಚಿಗೆ ಇಡೀ ಜಗತ್ತಿನಲ್ಲಿ ಬಂದಿರುವ ನಿರಂತರ ಕುಸಿತ ಮತ್ತು ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಇಡೀ ಜಗತ್ತು ಇಂಗ್ಲಿಷ್ ಜ್ಞಾನ ಮಾತ್ರ ಸಾಕಾಗುವುದಿಲ್ಲ ಎಂದು ಭಾವಿಸಲು ಪ್ರಾರಂಭಿಸಿದೆ. ನಾವು ಮಕ್ಕಳು ಹಾಗೂ ಸಮಾಜಕ್ಕೆ ಈ ವಿಶ್ವಾಸವನ್ನು ಮೂಡಿಸಬೇಕಿದೆ.

ಈ ತಂತ್ರವು ಪ್ರಾಥಮಿಕ ಶಿಕ್ಷಣದಿಂದ ದೇಶದ ಆರ್ಥಿಕತೆಯವರೆಗೆ ಹರಡಿದೆ. ಕೇವಲ ತಿಳುವಳಿಕೆಯ ಮಾಧ್ಯಮದ ವಿಷಯದ ಬಗ್ಗೆ ಅಲ್ಲ, ತಿಳುವಳಿಕೆಯ ಮಾಧ್ಯಮವನ್ನು ಸಾಧಿಸಿದ ನಂತರ ಬದುಕುಳಿಯುವ ಮಾಧ್ಯಮ ಯಾವುದು ಎಂಬ ಪ್ರಶ್ನೆಯೂ ಇರಬೇಕು, ಅಂದರೆ ನಮಗೆ ಅರ್ಥವಾದರೆ ಸಾಕೇ? ನಮ್ಮ ಜೀವನೋಪಾಯಕ್ಕೂ ಮಾಧ್ಯಮವೂ ಇರಬೇಕಲ್ಲವೇ? ನಾವೇನೋ ಅರ್ಥವಂತೂ ಮಾಡಿಕೊಳ್ಳುತ್ತೇವೆ ಆದರೆ ನಮ್ಮ ಜೀವನ ನಡೆಯುವುದು ಹೇಗೆ? ಎಲ್ಲಿಯವರೆಗೂ ಅಂತಹ ಆರ್ಥಿಕತೆ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳುವುದಿಲ್ಲವೋ ಅಲ್ಲಿಯವರೆಗೂ ನಮ್ಮ ತಿಳುವಿಕೆಯ ಮಾಧ್ಯಮ-ವಾಗಿರುವ ಮಾತೃಭಾಷೆಗಳು ಮತ್ತು ಈ ದೇಶದ ಸಾವಿರಾರು ಭಾಷೆಗಳ ಭವಿಷ್ಯ ಕಾಣಲು ಸಾಧ್ಯವಿಲ್ಲ। ಅದಕ್ಕಾಗಿ ಒತ್ತಡಕ್ಕೆ ಮಣಿದು ಲಕ್ಷಾಂತರ ಜನರು ಹಳ್ಳಿಗಳಲ್ಲಿ ಹಿಂದಿಯನ್ನು ಗೇಲಿ ಮಾಡುವ ಅಥವಾ ಇಂಗ್ಲಿಷ್ ಭಾಷೆಗಳನ್ನು ಗೇಲಿ ಮಾಡಿರಬಹುದು, ಆದರೆ ಅಂತಿಮವಾಗಿ ಪ್ರತಿಯೊಬ್ಬ ಪೋಷಕರು

> *ಉನ್ನತ ಶಿಕ್ಷಣದಲ್ಲೂ ಈ ತಿಳುವಳಿಕೆಯೊಂದಿಗೆ ಮುನ್ನಡೆಯಬೇಕಾದ ಅವಶ್ಯಕತೆ ಇದೆ. ಆದರೆ ಇಲ್ಲಿ ಕೆಲವು ವಿಷಯಗಳ ಮೇಲೆ ಚರ್ಚೆಯ ಅಗತ್ಯತೆ ಇದೆ. ಎಲ್ಲಾ ಭಾಷೆಗಳಲ್ಲಿ ಇಷ್ಟೂ ವಿಷಯ ಲಭ್ಯವಿದೆಯೇ? ಜಗತ್ತಿನಲ್ಲಿ ಶಿಕ್ಷಣದ ಬಗ್ಗೆ ನಡೆದಿರುವ ಚಿಂತನೆಗಳು ಎಲ್ಲಾ ಭಾಷೆಗಳಲ್ಲೂ ಲಭ್ಯವಿದೆಯೇ?*
>
> *ಭಾಗವಹಿಸಿದವರು*

ತಮ್ಮ ಮಕ್ಕಳಿಗೆ ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಕಲಿಸಲು ಒತ್ತಾಯಿಸುತ್ತಾರೆ. ಇಂಗ್ಲಿಷ್‌ನಲ್ಲಿ ಕಲಿಸುವುದು ಉತ್ತಮ. ಏನೇ ಆಗಲಿ ಅವರಿಗೆ ಜೀವನೋಪಾಯ ಸಿಗುವುದು ಖಚಿತ ಎಂಬುದು ಪೋಷಕರ ವಾದ. ನಾವು ರಚಿಸಿದ ಈ ಸಮಾಜವನ್ನು ಬದಲಿಸುವುದು ಒಂದು ಸವಾಲಾಗಿದೆ ಮತ್ತುಆಗ ಮಾತ್ರವೇ ನಾವು ನಮ್ಮ ಭಾಷೆಗಳನ್ನು ಅರ್ಥಮಾಡಿಕೊಳ್ಳುವ ಮಾಧ್ಯಮವಾಗಿ ಮಾಡಲು ಸಾಧ್ಯವಾಗಬಹುದು.

ರಷ್ಯಾ ಮತ್ತು ವಿಶ್ವದ ಇತರ ದೇಶಗಳಾದ ಜಪಾನ್, ಚೀನಾ ಈ ದೇಶಗಳಲ್ಲಿ ಪ್ರಾರಂಭದಿಂದ ವಿಶ್ವವಿದ್ಯಾಲಯದ ಹಂತದವರೆಗೆ ತಮ್ಮದೇ ಭಾಷೆಯಲ್ಲಿ ಶಿಕ್ಷಣವನ್ನು ನೀಡಲಾಯಿತು. ಜರ್ಮನಿಯೂ ಹಾಗೆಯೇ ಮಾಡಿತು. ಚೀನಾ ಇದನ್ನೇ ಮಾಡುತ್ತಿದೆ. ನಮ್ಮ ಇಂಗ್ಲೀಷ್ ಮೋಹದ ಹೊರತಾಗಿಯೂ ಚೀನೀ ಭಾಷೆಯು ಜ್ಞಾನದ ಭಾಷೆಯಾಗಿ ಆಗಿದೆ, ಅಂದರೆ ಪ್ರಾಥಮಿಕ ಹಂತದಿಂದ ಉನ್ನತ ಹಂತದವರೆವಿಗೂ ಕೂಡ. ಆದರೆ ನಮ್ಮ ದೇಶದಲ್ಲಿ ಈಗಲೂ ಸಹಾ ಈ ರೀತಿಯಲ್ಲಿಲ್ಲ. ಇದರ ಒಂದು ಬಹಳ ದೊಡ್ಡ ಪರಿಣಾಮ ನಮ್ಮ ಭಾಷೆಗಳು ಜ್ಞಾನದ ಭಾಷೆಗಳಾಗಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಇದ್ದಂತಹ ವಿದ್ವಾಂಸರ ಸಂಖ್ಯೆ ಸ್ವಾತಂತ್ರ್ಯ ನಂತರ ಕಡಿಮೆಯಾಗುತ್ತಾ ಬಂದರು. ಜಗದೀಶ್ ಚಂದ್ರ ಬಸು ಇವರು ತಮ್ಮ ಅನೇಕ ಪುಸ್ತಕಗಳನ್ನು ಬಂಗಾಳಿ ಭಾಷೆಯಲ್ಲಿ ಬರೆದಿದ್ದಾರೆ. ನಂತರ ಅದೇ ಸಂಸ್ಕೃತಿಯಿಂದ ಪ್ರೇರಿತರಾದ ಮಹಾನ್ ವಿಜ್ಞಾನಿ ಜಯಂತ್ ನಾರ್ಲಿಕರ್ ಅವರು ಮರಾಠಿಯಲ್ಲಿ ಮತ್ತು ಹಿಂದಿಯಲ್ಲೂ ಬರೆದರು. ಮೇಘನಾಥ್ ಸಹಾ ಅವರು ತಮ್ಮ ಪುಸ್ತಕಗಳನ್ನು ಬಂಗಾಳಿ ಭಾಷೆಯಲ್ಲಿ ಬರೆದಿದರು. ಈ ರೀತಿಯಾಗಿ ಜನರು ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಬಂದರು ಮತ್ತು ಅವರು ತಮ್ಮ ಜ್ಞಾನವನ್ನು ತಮ್ಮದೇ ಆದ ಭಾಷೆಯಲ್ಲಿ - ಮರಾಠಿ, ಬಾಂಗ್ಲಾ, ತೆಲುಗು, ತಮಿಳು, ಮಲಯಾಳಂನಲ್ಲಿ ಕೊಡುಗೆ ನೀಡಿದರು. ನಂತರ ಈ ಅಭ್ಯಾಸ ಕಡಿಮೆಯಾಗತೊಡಗಿತು. ಈ ಅಭ್ಯಾಸ ಹೆಚ್ಚಾಗಬೇಕಿತ್ತು ಆದರೆ ಅದು ಕಡಿಮೆಯಾಗುತ್ತಲೇ ಹೋಯಿತು. ಏಕೆಂದರೆ ನಮ್ಮ ಗುರಿ ಕೇವಲ ಉಪಯುಕ್ತತೆಯಾಗಿತ್ತು. ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಹಾಗೂ ನಾಕು ಕಾಸು ಸಂಪಾದನೆ ಮಾಡುವ ಹಾಗೂ ಇಂತಹ ಉಪಯುಕ್ತ ಜನರನ್ನು ತಯಾರಿಸುವ ಪಾತ್ರವಹಿಸಿತು. ಇಡೀ ದೇಶವು ಸರಕುಗಳನ್ನು ಮಾರಾಟ ಮಾಡುವ, ಮಾರಾಟ ಮಾಡುವವರಿಗೆ ಸೇವೆ ಸಲ್ಲಿಸುವ ಮತ್ತು ಮಾರಾಟ ಮಾಡಲು ಹೊರಗಿನಿಂದ ಸರಕುಗಳನ್ನು ತರುವಂತಹ ಜನರನ್ನು ತಯಾರಿಸುತ್ತಿದೆ. ಈ ಪರಿಸ್ಥಿತಿಯನ್ನು ಎದುರಿಸಲು ನಮ್ಮದೇ ಭಾಷೆಯಲ್ಲಿ ಶಿಕ್ಷಣಕ್ಕೆ ಬಲವನ್ನು ನೀಡಬೇಕಿದೆ. ನಾವು ನಮ್ಮ ಭಾಷೆಗಳನ್ನು ಜ್ಞಾನದ ಭಾಷೆಗಳನ್ನಾಗಿ ಮಾಡಬೇಕಿದೆ ಮತ್ತು ಈ ಎಲ್ಲದಕ್ಕೂ ವಿವಿಧ ಭಾಷೆಗಳ ಹಾಗೂ ವಿಭಿನ್ನ ಜ್ಞಾನದ ನಡುವೆ ಸಂವಾದಗಳನ್ನು ನಡೆಸಬೇಕಿದೆ. ಪ್ರಸ್ತುತ ಜ್ಞಾನದ ಭಾಷೆಯಾದ ಇಂಗ್ಲಿಷ್‌ನೊಂದಿಗೂ ಸಹ ಅನೇಕ ಹಂತಗಳಲ್ಲಿ ಸಂವಾದವನ್ನು ಸ್ಥಾಪಿಸಬೇಕಾಗಿದೆ.

*1917 ರ ನಂತರ ರಷ್ಯಾ ದೇಶವು ಯಾವ ರೀತಿಯ ಸಮಾಜವನ್ನು ರಚಿಸಿತೆಂದರೆ ಆ ಸಮಾಜದಲ್ಲಿ ಅತೀ ಚಿಕ್ಕದಾದ ಭಾಷೆಗೂ ಪ್ರಮುಖ ಸ್ಥಾನ-ಮಾನ ಕೊಟ್ಟಿತು. ಮಹಮೂದ್ ರಸೂಲ್ ಹಮ್ ಜಾತೊವ್ ದಾಗೆಸ್ತಾನ್‌ನಿಂದ ಬಂದವರು ಮತ್ತು ಅವರ ಕುಟುಂಬದಲ್ಲಿ ಶಿಕ್ಷಣ ಪಡೆದ ಮೊದಲಿಗರು, ಪ್ರಸಿದ್ಧ ಬರಹಗಾರರು. ಅವರ ಭಾಷೆ 'ಅವಾರ್' ಆಗಿತ್ತು. ಈ ಭಾಷೆ ಮಾತನಾಡುವವರು 2-4 ಲಕ್ಷ ಮಂದಿಯೂ ಇರಲಿಕ್ಕಿಲ್ಲ. ಈಗಂತೂ ಇನ್ನೂ ಕಡಿಮೆಯೂ ಆಗಿರಬಹುದು. ಆದರೆ ಈ 2-4 ಲಕ್ಷ ಜನರಿಗೆ ಅಲ್ಲಿ ಸ್ಥಾಪಿತವಾದ ಅವರ ಭಾಷಾ ಶಿಕ್ಷಣದ ವ್ಯವಸ್ಥೆಯಿಂದ ಆದ ಪರಿಣಾಮವೆಂದರೆ ರಸೂಲ್ ಹಮ್ ಜಾತೊವ್ ಅವರಂತಹ ವಿಶ್ವವಿಖ್ಯಾತ ಬರಹಗಾರರು ಪ್ರವರ್ಧಮಾನಕ್ಕೆ ಬಂದದ್ದು. ಅಲ್ಲದೆ 'ಮೇರಾ ದಾಗಿಸ್ತಾನ್' ಅವರ ವಿಶಿಷ್ಟ ಪುಸ್ತಕ. ಬಹುಶಃ ಜಗತ್ತಿನ ಯಾವುದೇ ಭಾಷೆಯಲ್ಲಿ ಇಂತಹ ಪುಸ್ತಕ ಬಂದಿರಲಿಕ್ಕಿಲ್ಲ! ಇದನ್ನು ಪ್ರಪಂಚದ ಇತರ ಭಾಷೆಗಳಿಗೆ ಅನುವಾದಿಸಲಾಗಿದೆ. ಕೇವಲ ಎರಡು ಲಕ್ಷ ಜನರ 'ಅವರ್' ಭಾಷೆಯಲ್ಲಿ ಬರೆದ ಈ ಪುಸ್ತಕವು ವಿಶ್ವದ ಶ್ರೇಷ್ಠ ಪುಸ್ತಕಗಳ ಸಾಲಿನಲ್ಲಿ ಎಣಿಸಲ್ಪಟ್ಟಿತು. ಮತ್ತೊಂದೆಡೆ, ಈ ರೀತಿಯ ಬದಲಾವಣೆ ಆಫ್ರಿಕಾದಲ್ಲಿ ನಡೆಯುತ್ತಿಲ್ಲ. ಅಲ್ಲಿನ ಭಾಷೆಯಲ್ಲಿ ಜ್ಞಾನ ಸೃಷ್ಟಿಯಾಗುತ್ತಿಲ್ಲ. ಕೀನ್ಯಾ ಬರಹಗಾರ ಅಂಗುಗಿ ಇಂಗ್ಲಿಷ್‌ನಲ್ಲಿ ಉತ್ತಮ ಬರವಣಿಗೆಗಾರನಾಗಿ ಉಳಿದನು. ಆದರೆ ಅವರು ತಮ್ಮ ಸ್ವಂತ ಭಾಷೆಯ ಕಿಕಿಯುನಲ್ಲಿ ಬರೆಯಲು ಇಷ್ಟಪಟ್ಟರು, ಆಗ ಅವರು ಬಹಿಷ್ಕಾರಕ್ಕೊಳಗಾದರು ಮತ್ತು ಇಂದು ಅವರು ತಮ್ಮವರಿಂದಲೇ ಬಹಿಷ್ಕರಿಸಲ್ಪಟ್ಟ ಜೀವನ ಸಾಗಿಸುತ್ತಿದ್ದಾರೆ. ನಮ್ಮ ದೇಶವೂ ಇಂದು ಇದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದೆ. ನಮ್ಮ ಭಾಷೆಯ ಅತ್ಯುತ್ತಮ ಬರಹಗಾರ ಎಲ್ಲೋ ಮೂಲೆ ಗುಂಪಾಗಿ ಬಿಟ್ಟಿದ್ದಾನೆ. ಈ ಬಿಕ್ಕಟ್ಟಿನಿಂದ ಹೊರಬರಲು ಮಾರ್ಗವನ್ನು ಕಂಡುಕೊಳ್ಳುವಾಗ, ನಾವು ರಷ್ಯಾ, ಜರ್ಮನಿ, ಚೀನಾ, ಜಪಾನ್ ಮುಂತಾದ ದೇಶಗಳ ಉದಾಹರಣೆಗಳಿಂದ ಕಲಿತು ನಮ್ಮ ಭಾಷೆಯನ್ನು ಜ್ಞಾನ ಮತ್ತು ವಿಜ್ಞಾನದೊಂದಿಗೆ ಬೆಸೆದುಕೊಳ್ಳಬೇಕಿದೆ.*

*— ಒಬ್ಬ ಭಾಗವಹಿಸಿದ ಅಭ್ಯರ್ಥಿ*

## ನನ್ನ ಅನುಭವ

*ನನ್ನ ಮಾತೃಭಾಷೆಯ ಮೇಲೆ ಅಪಾರ ಪ್ರೀತಿಯಿದ್ದರೂ, ನನಗೆ ಇನ್ನೂ ಗುಜರಾತಿ ಭಾಷೆಯಲ್ಲಿ ಭೂಗೋಳ, ಬೀಜಗಣಿತ ಇತ್ಯಾದಿ ಪದಗಳು ತಿಳಿದಿಲ್ಲ. ಈಗ ನಾನು ಅರ್ಥಮಾಡಿಕೊಂಡಿದ್ದೇನೆಂದರೆ, ನಾನು ಇಂಗ್ಲಿಷ್‌ನ ಬದಲು ಗುಜರಾತಿ ಮಾಧ್ಯಮದ ಮೂಲಕ ಕಲಿತಿದ್ದರೆ, ಗಣಿತ, ಜ್ಯಾಮಿತಿ, ಬೀಜಗಣಿತ, ರಸಾಯನಶಾಸ್ತ್ರ, ಮತ್ತು ಖಗೋಳಶಾಸ್ತ್ರದ ಬಗ್ಗೆ ಕಲಿಯಲು ನಾಲ್ಕು ವರ್ಷದ ಬದಲಿಗೆ ಒಂದೇ ವರ್ಷದಲ್ಲಿ ಸುಲಭವಾಗಿ ಕಲಿಯಬಹುದಿತ್ತು. ಆ ವಿಷಯಗಳ ಜ್ಞಾನವು ನನಗೆ ಸುಲಭ ಮತ್ತು ಇನ್ನೂ ಹೆಚ್ಚು ಸ್ಪಷ್ಟವಾಗುತ್ತಿತ್ತು. ನನ್ನ ಗುಜರಾತಿ ಶಬ್ದ ಭಂಡಾರವೂ ಸಹಾ ಉತ್ಕೃಷ್ಟವಾಗಿರುತ್ತಿತ್ತು. ಈ ಜ್ಞಾನವನ್ನು ನಾನು ನನ್ನ ಮನೆಯಲ್ಲಿ ಬಳಸುತ್ತಿದ್ದೆ.*

X X X

*ನಾವು ಆ ಭಾಷೆಯ ರತ್ನಗಳನ್ನು (ಅಂದರೆ ಇಂಗ್ಲಿಷ್ ಭಾಷೆಯ ಕೃತಿಗಳನ್ನು) ಮತ್ತು ಏಕೆ ಈ ಭಾಷೆ ಮಾತ್ರವಲ್ಲದೇ ಪ್ರಪಂಚದ ಇತರ ಭಾಷೆಗಳ ರತ್ನಗಳನ್ನೂ ಸಹಾ ನಮ್ಮದೇ ಭಾಷೆಗಳಲ್ಲಿಸಂಗ್ರಹಿಸುತ್ತೇವೆ. ರವೀಂದ್ರನಾಥರ ಅದ್ವಿತೀಯ ರಚನೆಗಳ ಸಾರವನ್ನು ಅರಿಯಲು ನಾನು ಬಂಗಾಳಿ ಕಲಿಯಬೇಕಾಗಿಲ್ಲ. ನಾನು ಅವುಗಳನ್ನು ಉತ್ತಮ ಅನುವಾದದ ಮೂಲಕವೇ ಓದುವೆ. ಟಾಲ್‌ಸ್ಟಾಯ್ ಅವರ ಕಥೆಗಳನ್ನು ಸವಿಯಲು ಗುಜರಾತಿ ಹುಡುಗರು ಮತ್ತು ಹುಡುಗಿಯರು ರಷ್ಯನ್ ಭಾಷೆಯನ್ನು ಕಲಿಯಬೇಕಾಗಿಲ್ಲ. ಆ ಪುಸ್ತಕಗಳನ್ನು ಉತ್ತಮ ಅನುವಾದದ ಮೂಲಕವೇ ಓದಬಹುದಾಗಿದೆ.*

X X X

*ಬೋಧನಾ ಮಾಧ್ಯಮವನ್ನು ತಕ್ಷಣವೇ ಮತ್ತು ಯಾವುದೇ ಬೆಲೆಯನ್ನು ತೆತ್ತಾದರೂ ಬದಲಾಯಿಸಬೇಕಿದೆ ಮತ್ತು ಪ್ರಾಂತೀಯ ಭಾಷೆಗಳಿಗೆ ಅವುಗಳ ಸ್ಥಾನವನ್ನು ನೀಡಬೇಕಿದೆ.*

*ಹರಿಜನ 9.7.38, ಪುಟ-177, ಮಹಾತ್ಮಾ ಗಾಂಧಿಯ ಆಯ್ದ ಕೃತಿಗಳಿಂದ,*

5

# ಭಾಷೆಗಳಲ್ಲಿ ಸಂಭಾಷಣೆ

**(ಉಲ್ಲೇಖ: ಆಂಗ್ಲ ಮತ್ತು ಹಿಂದಿಭಾಷೆ)**

- **ಆಂಗ್ಲ ಮತ್ತು ಹಿಂದಿ ಭಾಷೆಗಳ ನಡುವಿನ**
- **ಸಂಬಂಧ**
- **1967ರ ನಂತರ**
- **1987 ರ ಸಮಯದಲ್ಲಿ**
- **ಬದಲಾವಣೆಯ ಹೊಸ ಕಾಲಘಟ್ಟ**
- **ಆಂಗ್ಲ ಭಾಷೆಯ ಬೆಳವಣಿಗೆಯ ಇತಿಹಾಸ**
- **ಹೊಸ ಶಬ್ದಗಳ ಆವಿಷ್ಕಾರದ ಅವಶ್ಯಕತೆ**



## ಆಂಗ್ಲ ಮತ್ತು ಹಿಂದಿ ಭಾಷೆಗಳ ನಡುವಿನ ಸಂಬಂಧ

ಸ್ವಾತಂತ್ರ್ಯ ಚಳುವಳಿಯ ಕಾಲ ಹಾಗೂ ಆನಂತರದ ಸಮಯದಲ್ಲಿ ರಾಷ್ಟ್ರ ನಿರ್ಮಾಣದ ಕಾರ್ಯ ಸಾಗುತ್ತಲೇ ಇದೆ. ಆಂಗ್ಲ ಮತ್ತು ಇತರ ಭಾಷೆಗಳ ನಡುವಿನ ಸಂಬಂಧವು ಕೆಲವೊಮ್ಮೆ ಉತ್ತಮವಾಗಿದ್ದರೆ ಮತ್ತೆ ಕೆಲವೊಮ್ಮೆ ಸಮಸ್ಯಾತ್ಮಕವಾಗಿದೆ. 1947 ರವರೆಗೂ ಇವುಗಳ ನಡುವೆ ವಿಶೇಷ ರೀತಿಯ ಸಂಬಂಧವಿತ್ತು.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬಹಳಷ್ಟು ಕೆಲಸ ಹಿಂದಿ ಭಾಷೆಗಾಗಿಯೂ ಮೀಸಲಾಗಿತ್ತು. ಆ ಸಮಯದಲ್ಲಿ ತಮ್ಮ ಹಿಂದಿ ಭಾಷೆಯ ಮೇಲೆ ಪ್ರೀತಿಯನ್ನು ಹೊಂದಿದ್ದರು ಮತ್ತು ಅದಕ್ಕಾಗಿ ಕೆಲಸ ಮಾಡಿದರು. ಆದರೆ ಆಂಗ್ಲ ಭಾಷೆಯನ್ನು ದ್ವೇಷಿಸುತ್ತಿರಲಿಲ್ಲ. ಸ್ವಾತಂತ್ರ್ಯದ ಸಂದರ್ಭದಲ್ಲಿ ಇನ್ನೂ ಒಂದು ವಿಷಯ ಮುನ್ನೆಲೆಗೆ ಬಂತು. ಅದೇನೆಂದರೆ, ಮಹಾನ್ ವಿಜ್ಞಾನಿ ಜಗದೀಶ್ ಚಂದ್ರ ಬೋಸರು ತಮ್ಮ ಅನೇಕ ಕೃತಿಗಳನ್ನು ಬಂಗಾಳಿ ಭಾಷೆಯಲ್ಲಿ ಬರೆದಿದ್ದಾರೆಂದು. ಲಕ್ಷ್ಮಣ ಶಾಸ್ತ್ರಿಯವರು ತಮ್ಮದೇ ಭಾಷೆ ಹಾಗೂ ಇಂಗ್ಲಿಷ್‌ನಲ್ಲೂ ಬರೆದರು. ಆದರೆ 1947ರ ನಂತರ ಪರಿಸ್ಥಿತಿ ಬದಲಾಯಿತು. ಅದರ ನಂತರ ಆಂಗ್ಲ ಭಾಷೆಯಲ್ಲಿ ಬರವಣಿಗೆ ಪ್ರಾರಂಭವಾಯಿತು. ಇಂದಿನ ಅನೇಕ ಇತಿಹಾಸಕಾರರು ಹಿಂದಿಯ ಬೆಳವಣಿಗೆಯ ಇತಿಹಾಸವನ್ನು ಹಿಂದಿಯಲ್ಲಿ ಬರೆಯದೇ ಆಂಗ್ಲ ಭಾಷೆಯಲ್ಲಿ ಬರೆದಿದ್ದಾರೆ. ಪೂರನ್ಚಂದ್ ಜೋಶಿ ಅವರನ್ನು ಹೊರತುಪಡಿಸಿ, ಪ್ರಸ್ತುತ ಸಮಾಜಶಾಸ್ತ್ರಜ್ಞರ ಬಹುತೇಕ ಎಲ್ಲಾ ಬರಹಗಳು ಮೂಲತಃ ಇಂಗ್ಲಿಷ್‌ನಲ್ಲಿವೆ.

## 1967 ರ ನಂತರ

1967 ರಿಂದ ದೇಶದಲ್ಲಿ ಭಾಷೆಗಳಿಗೆ ಸಂಬಂಧಿಸಿದಂತೆ ಬದಲಾವಣೆಯು ಕಂಡು ಬಂತು. ಸೂಕ್ಷ್ಮವಾಗಿ ಗಮನಿಸಿದರೆ, 20 ವರ್ಷಗಳ ಅಂತರದಲ್ಲಿ ಈ ಭಾಷೆಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸ ಹಾಗೂ ಅಂತರ ಸೃಷ್ಟಿಯಾಯಿತು.

1967 ರ ಯುಗವನ್ನು ಆಂಗ್ಲ ವಿರೋಧ ಅಥವಾ ದ್ವೇಷದ ಯುಗ ಎಂದು ಕರೆಯಬಹುದು. ವಾಹನಗಳ ಪಟ್ಟಿಗಳನ್ನು ಮತ್ತು ಸ್ಥಳಗಳ ಬೋರ್ಡ್‌ಗಳನ್ನು ಬದಲಾಯಿಸಲಾಯಿತು. ಈ ಪ್ರತಿಭಟನೆಯು ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ಹೆಚ್ಚಾಗಿತ್ತು. ಇಂಗ್ಲಿಷಿನ ವಿರುದ್ಧ ಈ ಚಳುವಳಿ ನಡೆಸುತ್ತಿದ್ದವರು ತಮ್ಮ ಮಕ್ಕಳು ಎಲ್ಲಿ, ಹೇಗೆ ಶಿಕ್ಷಣ ಪಡೆಯುತ್ತಿದ್ದಾರೆ ಎಂಬುದನ್ನೇ ಮರೆತುಬಿಟ್ಟರು. ಹಾಗಾಗಿ ಆ ಕಾಲದಲ್ಲಿ ಆಂಗ್ಲ ಮಾಧ್ಯಮದ ಮೂಲಕ ಶಿಕ್ಷಣ ಪಡೆಯುತ್ತಿದ್ದ ಮಕ್ಕಳ ಮೇಲೆ ಏನು ಪರಿಣಾಮ ಬೀರಿದೆ ಎಂಬುದನ್ನೂ ಪರಾಮರ್ಶಿಸಬೇಕು. ಮತ್ತೊಂದೆಡೆ, ಆಂಗ್ಲ ಕಲಿಯದೆ ಜೀವನದಲ್ಲಿ ಯಶಸ್ಸನ್ನು ಕಂಡವರೂ ಇದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ. ಇವರಲ್ಲಿ ಏನಾದರೂ ತಪ್ಪಾಗಿದೆಯೇ ಅಥವಾ ಎಲ್ಲವೂ ಸರಿಯಿತ್ತೇ ಎಂಬ ಬಗ್ಗೆಯೂ ಸಂಶೋಧನೆ ನಡೆಸಬಹುದಾಗಿದೆ. ಈ ಯುಗವು ಬಹಳ ಹಿಂದೆಯೇ ಪ್ರಾರಂಭವಾಯಿತು, ಇದನ್ನು ನೆಹರೂರವರು 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಒತ್ತಿಹೇಳಿದರು- ಇಲ್ಲಿ ಪ್ರಶ್ನೆ ಉದ್ಭವಿಸುವುದೇನೆಂದರೆ "ಇಂಗ್ಲಿಸ್ತಾನದ ಎರಡು ರೂಪಗಳು ಯಾವ ಇಂಗ್ಲಿಸ್ತಾನ ಹಿಂದೂಸ್ತಾನಕ್ಕೆ ಬಂದಿತು? ಷೇಕ್ಸ್‌ಪಿಯರ್ ಹಾಗೂ ಮಿಲ್ಟನ್ನರದ್ದೋ; ಉದಾರತಾವಾದಿ ಬರಹಗಳು ಮತ್ತು ವೀರರ ಸಾಹಸಗಳೋ, ರಾಜಕೀಯ ಕ್ರಾಂತಿ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದೋ, ವಿಜ್ಞಾನ ಮತ್ತು ಉದ್ಯಮದ ಸುಧಾರಣೆ ಮಾಡುವ ಇಂಗ್ಲಿಸ್ತಾನ್ ಇಲ್ಲಿ ಬಂತೆ ?? ಅಥವಾ ಅನಾಗರಿಕ, ಅಸಭ್ಯ, ಊಳಿಗಮಾನ್ಯ, ಸಾಮಂತವಾದಿ ಮತ್ತು ಪ್ರತಿಗಾಮಿ ಇಂಗ್ಲಿಸ್ತಾನ ಬಂತೇ?" (ಸ್ಟೋರಿ ಆಫ್ ಹಿಂದೂಸ್ತಾನ್ ಪುಟ 333) ಈ ವ್ಯಾಪಾರಿಗಳು ಸ್ಪೇನ್ ಅಥವಾ ಪೋರ್ಚುಗಲ್‌ನಿಂದ ಬಂದವರಾಗಿದ್ದರೂ, ಒಂದು ದೊಡ್ಡ ಪ್ರಶ್ನೆ ಖಂಡಿತವಾಗಿಯೂ ಉದ್ಭವಿಸುತ್ತದೆ. ಅಂತಹ ಕೆಲವು ಸನ್ನಿವೇಶಗಳು ಹುಟ್ಟಿಕೊಂಡು ಕೆಲವು ಜನರ ಪ್ರತ್ಯೇಕ ವರ್ಗವು ರೂಪುಗೊಂಡಿತು. ಅವರು ತಮ್ಮ ಕೆಲಸವನ್ನು ಇಂಗ್ಲಿಷ್‌ನಲ್ಲಿ ಮುಂದುವರೆಸಿದರು. ಎಲ್ಲ ಸೌಲಭ್ಯಗಳನ್ನು ಪಡೆದು ಮುಂದೆ ಸಾಗುತ್ತಿದ್ದರು. ಸಮತೋಲನ ಕಾಯ್ದುಕೊಳ್ಳಲಾಗಲಿಲ್ಲ. ಬಹುಪಾಲು ಮಂದಿ ಹಿಂದುಳಿದುಬಿಟ್ಟರು.

ಶಾಲಾ ಶಿಕ್ಷಣದಲ್ಲಿ ಹಿಂದಿ ಮತ್ತು ಆಂಗ್ಲ ಭಾಷೆಯ ಪಾತ್ರ ವಿಭಿನ್ನ ರೀತಿಯಲ್ಲಿ ಹೊರಹೊಮ್ಮಿತು. ಒಂದರಿಂದ ಐದನೇ ತರಗತಿವರೆಗೆ ಆಂಗ್ಲ ಭಾಷೆಯು ಇರಲಿಲ್ಲ. ಆರನೇ ತರಗತಿಯಿಂದ ಆಂಗ್ಲ ಪ್ರಾರಂಭವಾಯಿತು. ಶಿಕ್ಷಕರು ಉತ್ತಮ ವ್ಯಾಕರಣ ಮತ್ತು ಆಂಗ್ಲ ಜ್ಞಾನವನ್ನು ಹೊಂದಿದ್ದರೂ ಕೂಡ ಅವರಿಗೆ ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲ. ಬರವಣಿಗೆಯಲ್ಲಿ ಎಲ್ಲರ ಆಂಗ್ಲ ಚೆನ್ನಾಗಿದ್ದರೂ ಮಾತನಾಡುವುದರಲ್ಲಿ ನಿರರ್ಗಳತೆ ಇರಲಿಲ್ಲ. ಈ ಸಮಯದಲ್ಲಿ ಜನರು ಎರಡು ಬಣಗಳಲ್ಲಿ ಹಂಚಿಹೋದರು - ಒಂದು ಬಣವು ಆಂಗ್ಲಭಾಷೆಯಲ್ಲಿ ಕೆಲಸ ಮಾಡುವವರಾದರೆ ಇನ್ನೊಂದು ಅದನ್ನು ವಿರೋಧಿಸುವ ಬಣವಾಗಿತ್ತು.

## 1987 ರ ಸಮಯ

ಈಗ ನಾವು 1987 ರ ಯುಗಕ್ಕೆ ಹಿಂತಿರುಗಿದರೆ, ಎಲೆಕ್ಟ್ರಾನಿಕ್ ಮತ್ತು ಮಾಧ್ಯಮದ ವಿಶಾಲ ಜಗತ್ತು ನಮ್ಮ ಮುಂದೆ ಬಂದಿರುವುದನ್ನು ನಾವು ಕಾಣಬಹುದು. ಇದು ಸಂವಹನ ಕ್ರಾಂತಿಯ ಯುಗವಾಗಿ ಇಡೀ ಪ್ರಪಂಚ ಒಂದು ಹೊಸ ಲೋಕದಂತೆ ಅನಿಸಿತು. ಇಂಗ್ಲೀಷಿಲ್ಲದಿದ್ದರೆ ಮಕ್ಕಳು ಜೀವನದಲ್ಲಿ ಮುಂದೆ ಬರಲು ಸಾಧ್ಯವೇ

ಇಲ್ಲ ಎನ್ನುವ ಭಾವನೆ ಮೂಡಿತು. ಹಳ್ಳಿಗಳಲ್ಲೂ ಸಹಾ ಆಂಗ್ಲ ಶಾಲೆಗಳೂ ಆರಂಭವಾಗತೊಡಗಿದವು. ಆಂಗ್ಲ ಭಾಷೆ ಇಲ್ಲದಿದ್ದರೆ ಹಿಂದೆ ಉಳಿಯುತ್ತೇವೆ ಎಂದು ಎಲ್ಲರೂ ನಂಬತೊಡಗಿದರು. ಅದೇ ಚಕ್ರ ಇನ್ನೂ ತಿರುಗುತ್ತಲೇ ಇದೆ. ತಪ್ಪೇ ಸರಿ ಎಂದೆನಿಸಿಬಿಟ್ಟಿದೆ. ಆದರೆ ಇನ್ನೊಂದು ಅಂಶವೆಂದರೆ, ನಿರರ್ಗಳವಾಗಿ ಆಂಗ್ಲ ಮಾತನಾಡುವವರು ಪ್ರಭಾವವನ್ನು ಹೊಂದಿರುತ್ತಾರೆ ಮತ್ತು ಕೆಲಸವನ್ನೂ ಪಡೆಯುತ್ತಾರೆ. ಇದು ನಮ್ಮ ಮುಂದಿರುವ ಸಮಾಜ, ಬೆಳೆದು ಬಂದಿರುವ ಆರ್ಥಿಕ ಮತ್ತು ಸಾಮಾಜಿಕ ರಚನೆ ಆಂಗ್ಲ ಭಾಷೆಯದ್ದು, ಇದರ ನಂತರ ಏನಾಗಬಹುದೆಂದು ಪ್ರಶ್ನೆ ಉದ್ಭವಿಸುತ್ತದೆ. ನಾವು ಈ ವಿಷಯದ ಬಗ್ಗೆ ಏನಾದರೂ ಯೋಚಿಸಲು ಸಾಧ್ಯವೇ ಅಥವಾ ನಾವು ಮುಂದೆ ಓಡುತ್ತಿದ್ದೇವೆಯೇ. ಯಾವ ಭಾಷೆಯಲ್ಲಿ ಮಗುವಿನ ತಿಳುವಳಿಕೆ ರೂಪುಗೊಳ್ಳುತ್ತದೆ? ಯಾರಿಗೂ ಅದರ ಬಗ್ಗೆ ಯೋಚಿಸಲು ಅಥವಾ ಅದನ್ನು ತಿಳಿದುಕೊಳ್ಳಲು ಸಮಯವಿಲ್ಲ, ಬೇರೆ ಭಾಷೆಯ ಮೂಲಕ ಎರಡೊತ್ತಿನ ಊಟವನ್ನು ಪಡೆಯಬಹುದೇನೋ ಆದರೆ ಅರ್ಥಮಾಡಿಕೊಳ್ಳುವುದು ಮಾತ್ರ ನಮ್ಮ ಸ್ವಂತ ಭಾಷೆಯಲ್ಲಿ ಮಾತ್ರ. ಸ್ವಾತಂತ್ರ್ಯದ ನಂತರ ಭಾರತವು ಎಷ್ಟು ಜನ ವಿಜ್ಞಾನಿಗಳನ್ನು, ಅರ್ಥಶಾಸ್ತ್ರಜ್ಞರನ್ನು ಅಥವಾ ಸಮಾಜಶಾಸ್ತ್ರಜ್ಞರನ್ನು ಕೊಡುಗೆಯಾಗಿ ನೀಡಿದೆ ಎಂಬುದನ್ನು ನಾವು ನೋಡಬೇಕಿದೆ. ಆರಂಭಿಕ ಶಿಕ್ಷಣ ಸ್ವಂತ ಭಾಷೆಯಲ್ಲಿ ಪಡೆಯದೇ ಇರುವುದೇ ಇದಕ್ಕೆ ಮುಖ್ಯ ಕಾರಣ.

## ಬದಲಾವಣೆಯ ಹೊಸ ಕಾಲಘಟ್ಟ

ಇಲ್ಲಿ ಭಾಷೆಯ ವಿಷಯದಲ್ಲಿ ಮತ್ತೊಮ್ಮೆ ಬದಲಾಗುವ ಮುನ್ಸೂಚನೆ ಕಾಣುತ್ತಿದೆ. ಏಕೆಂದರೆ ಫ್ರಾನ್ಸ್, ಚೀನಾ, ರಷ್ಯಾ, ಜಪಾನ್ ಈ ದೇಶಗಳು ತಮ್ಮ ತಮ್ಮ ಭಾಷೆಗಳ ಬಗ್ಗೆ ಹೊಸ ರೀತಿಯಲ್ಲಿ ಯೋಚಿಸಲು ಪ್ರಾರಂಭಿಸಿವೆ. ಈಗ ಅವರು ತಮ್ಮದೇ ಭಾಷೆಯಲ್ಲಿ ಮಾತನಾಡಲು ಬಯಸುತ್ತಾರೆ. ಆದರೆ ಭಾರತದ ಸ್ಥಿತಿ ಈ ಎಲ್ಲಾ ದೇಶಗಳಿಗಿಂತಲೂ ಭಿನ್ನವಾಗಿದೆ. ನಾವು ಇನ್ನೂ ಕೀಳರಿಮೆಯ ಬಲಿಪಶುಗಳು. ನಮ್ಮ ಭಾಷೆಯ ಬಗ್ಗೆ ನಮ್ಮ ಚಿಂತನೆಯು ಸಕಾರಾತ್ಮಕವಾಗಿಲ್ಲ. ನಾವು ನಮ್ಮ ಆತ್ಮಗೌರವವನ್ನು ಕಳೆದುಕೊಂಡರೂ ಸರಿಯೇ ನಾವು ನಮ್ಮ ಮಕ್ಕಳಿಗೆ ಮಾತ್ರ ಆಂಗ್ಲಭಾಷೆ ಕಲಿಸಲು ಬಯಸುತ್ತೇವೆ. ಇದೇ ನಮ್ಮ ಭಾಷೆಯ ಬಗ್ಗೆ ಇರುವ ಅಗೌರವಕ್ಕೆ ಸಾಕ್ಷಿ.

ಜಗತ್ತಿನ ಹಲವು ದೊಡ್ಡ ದೇಶಗಳು ತಮ್ಮ ಭಾಷೆಯನ್ನು ಜೀವಂತವಾಗಿಟ್ಟುಕೊಂಡು ಗೌರವಿಸುತ್ತಲೇ ಪ್ರಗತಿ ಹೊಂದಿದ ದೇಶಗಳ ಸರಿಸಮನಾಗಿ ಅಭಿವೃದ್ಧಿ ಪಥದಲ್ಲಿ ಮುಂದೆ ಬಂದಿವೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಆಂಗ್ಲ-ಹಿಂದಿ ಭಾಷೆಗಳ ಸಂಬಂಧದ ಬಗ್ಗೆ ಯೋಚಿಸಬೇಕಿದೆ. ನಮ್ಮ ಭಾಷೆಗೆ ಗೌರವ ನೀಡುವುದರ ಜೊತೆಗೆ ಪರರ ಭಾಷೆಯನ್ನೂ ಗೌರವಿಸಬಹುದು ಎಂಬ ನಂಬಿಕೆ ನಮ್ಮ ಜನರಲ್ಲಿ ಮೂಡುವಂತೆ ಮಾಡಬೇಕಿದೆ.

ಅವರ ಭಾಷೆಯ ಗೌರವಾರ್ಥವಾಗಿ ಕೀನ್ಯಾದ ಪ್ರಸಿದ್ಧ ಆಂಗ್ಲ ಬರಹಗಾರ ಅಂಗೂಗೀಯವರು ಇಂಗ್ಲಿಷ್‌ನಲ್ಲಿ ಬರೆಯುವುದನ್ನು ಬಿಟ್ಟು ಅವರ ಸ್ವಂತ ಭಾಷೆಯಾದ ಕಿಕಿಯುವನ್ನು ತಮ್ಮ ಬರವಣಿಗೆಯ ಭಾಷೆಯಾಗಿ ಅಳವಡಿಸಿಕೊಂಡರು. ಪಾಬ್ಲೋ ನೆರುದಾ ಅವರ ಬಯಕೆಯು ತನ್ನ ಸ್ವಂತ ಭಾಷೆಯಲ್ಲಿ ವಿಶ್ವವಿದ್ಯಾಲಯಗಳನ್ನು ತೆರೆಯಬೇಕು, ಆದರೆ ಅದರ ಜೊತೆ ಇತರ

ಭಾಷೆಗಳಿಗೂ ಸಹಾ ಅಷ್ಟೇ ಪ್ರಾಮುಖ್ಯತೆ ನೀಡಬೇಕಿದೆ.

## ಆಂಗ್ಲ ಭಾಷೆಯ ವಿಕಾಸದ ಇತಿಹಾಸ

ಸುದೀರ್ಘ ಹೋರಾಟದ ನಂತರವೇ ಆಂಗ್ಲ ಭಾಷೆಯು ಈ ಸ್ಥಾನಕ್ಕೆ ಬಂದು ತಲುಪಿದೆ ಎಂಬುದನ್ನು ನಾವು ಗಮನಿಸಬೇಕಾದ ಅಂಶವಾಗಿದೆ. ಆಂಗ್ಲ ಭಾಷೆ ಆಡಳಿತ ಭಾಷೆಯೊಂದೇ ಆಗಿರಲಿಲ್ಲ. ಈ ಹಿಂದೆ ಇದು ಕೂಡ ಇಂಗ್ಲೆಂಡ್ ಮತ್ತು ಅಮೆರಿಕದಲ್ಲಿ ಕೂಲಿಗಳ ರೈತರ ಹಾಗೂ ಕಾರ್ಮಿಕರ ಭಾಷೆಯಾಗಿತ್ತು ಮತ್ತು ಶೇಕ್ಸ್ಪಿಯರ್ ಕೂಡ ಈ ಭಾಷೆಗೆ ಸೇರಿದವರಾಗಿದ್ದರು..
ಈ ಭಾಷೆಯ ವಿಕಾಸದ ಬಗ್ಗೆ ಗಮನ ಹರಿಸಿದರೆ, ನಮ್ಮ ಭಾಷೆಯು ಹೋರಾಡುತ್ತಿರುವ ಹೋರಾಟವನ್ನು ಆಂಗ್ಲ ಭಾಷೆಯೂ ಕೂಡ ನಡೆಸಿದೆ ಎಂಬುದು ಮನದಟ್ಟಾಗುತ್ತದೆ. 16-17 ನೇ ಶತಮಾನದವರೆಗೆ ಆಂಗ್ಲಭಾಷೆಯು ಜ್ಞಾನದ ಭಾಷೆಯಾಗಿರಲಿಲ್ಲ. ಅವರು ತಮ್ಮ ಈ ಸ್ಥಾನವನ್ನು ಗಳಿಸಲು ಬಹಳ ಸಮಯ ಹೋರಾಡಬೇಕಾಯಿತು. ಕೆಲವು ಗಣ್ಯರ ಶಾಲೆಗಳ ಕಾಂಪೌಂಡ್‌ಗಳಲ್ಲಿಯೂ ಈ ಭಾಷೆಯನ್ನು ಮಾತನಾಡಲು ಅವಕಾಶ ಇರಲಿಲ್ಲ. ಫ್ರಾನ್ಸಿಸ್ ಬೇಕನ್ ಇಂಗ್ಲಿಷ್‌ನಲ್ಲಿ ಸ್ನೇಹ ಅಥವಾ ಪ್ರೀತಿಯಂತಹ ವಿಷಯಗಳ ಕುರಿತು ಲೇಖನಗಳನ್ನು ಬರೆದರೆ ಲ್ಯಾಟಿನ್ ಭಾಷೆಯಲ್ಲಿ ನ್ಯಾಯ, ತತ್ವಶಾಸ್ತ್ರ, ಗಣಿತ ಮತ್ತು ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಬರೆದರು. ಇಂಗ್ಲೆಂಡಿನ ವಿಜ್ಞಾನಿಗಳು ಲ್ಯಾಟಿನ್ ಭಾಷೆಯಲ್ಲಿ ಮಾತ್ರ ಬರೆಯುತ್ತಿದ್ದರು. ನ್ಯೂಟನ್ ರ ಮಾತೃಭಾಷೆ ಆಂಗ್ಲ ಆದರೆ ಅವರು ತಮ್ಮ ಮುಖ್ಯ ಪುಸ್ತಕಗಳನ್ನು ಲ್ಯಾಟಿನ್ ಭಾಷೆಯಲ್ಲಿ ಮಾತ್ರ ಬರೆದರು. ಯಾವಾಗ ವಿಜ್ಞಾನಿಗಳು ಕೆಳವರ್ಗದಿಂದ ಬರಲು ಪ್ರಾರಂಭಿಸಿದರೋ, ಆಗ ಇಂಗ್ಲಿಷ್ನಲ್ಲಿ ಬರವಣಿಗೆ ಪ್ರಾರಂಭವಾಯಿತು ಮತ್ತು ಹತ್ತೊಂಬತ್ತನೇ ಶತಮಾನದ ವೇಳೆಗೆ ಆಂಗ್ಲ ಭಾಷೆ ಬಹಳ ಪ್ರಬಲವಾದ ಸ್ಥಾನ ಪಡೆಯಿತು. ಆಗ ಶಿಕ್ಷಣದಲ್ಲಿ ಆಂಗ್ಲ ಭಾಷೆಗೆ ಒತ್ತು ಹೆಚ್ಚಾಯಿತು. ಇಂದು ಜ್ಞಾನದ ದೊಡ್ಡ ಭಾಷೆಯಾಗಿ ಆಂಗ್ಲ ಭಾಷೆಯು ಬೆಳೆದಿದೆ.

## ಹೊಸ ಶಬ್ದಗಳ ನಿರ್ಮಾಣದ ಅವಶ್ಯಕತೆ

ಒಂದೆಡೆ ಜಗತ್ತಿನ ಎಲ್ಲ ಭಾಷೆಗಳೂ ಒಂದಾಗುತ್ತಿದ್ದರೆ ಮತ್ತೊಂದೆಡೆ ಮಿತಿಮೀರಿ ಒಡೆಯುತ್ತಿವೆ ಎಂಬ ಆತಂಕ ಭಾಷಾಶಾಸ್ತ್ರಜ್ಞರಲ್ಲಿ ಮೂಡಿದೆ. ಮಾರುಕಟ್ಟೆಯಲ್ಲಿ ರಷ್ಯನ್, ಆಂಗ್ಲ, ಜರ್ಮನ್ ಇತ್ಯಾದಿ ಎಲ್ಲವನ್ನೂ ಒಂದೇ ತರಹ ಮಾಡಿದೆ. ವಾಸ್ತವವಾಗಿ ಭಾಷೆಗಳು ಪರಸ್ಪರ ಮುಖಾಮುಖಿಯಾಗಿ ರೂಪುಗೊಳ್ಳುತ್ತವೆ. ಹಿಂದಿಯೂ ಸಹಾ ಆಂಗ್ಲ ಮತ್ತು ಇತರ ಭಾಷೆಗಳಿಂದ ಅನೇಕ ಪದಗಳನ್ನು ಇದ್ದದ್ದು ಇದ್ದ ಹಾಗೆಯೇ ತೆಗೆದುಕೊಂಡಿದೆ. ಆದರೆ ಪ್ರತಿಯೊಂದು ಭಾಷೆಗೂ ಅದರದ್ದೇ ಆದ ಇತಿಹಾಸವಿರುತ್ತದೆ, ತನ್ನದೇ ಆದ ಸ್ವಭಾವವನ್ನು ಹಾಗೂ ತನ್ನದೇ ಆದ ಭಾವನೆಯನ್ನೂ ಹೊಂದಿರುತ್ತದೆ. ಭಾಷೆಯು ಇತರ ಭಾಷೆಗಳನ್ನು ಮುಖಾಮುಖಿ ಭೇಟಿಯಾಗುತ್ತಾ ತನ್ನದೇ ಆದ ರೀತಿಯಲ್ಲಿ ಹೊಸ ಹೊಸ ಶಬ್ದಗಳನ್ನು ಹುಟ್ಟು ಹಾಕುತ್ತದೆ. ಹಿಂದಿಯಲ್ಲಿ 'ಆಫೀಸರ್'ನಿಂದ 'ಆಫಸರ್', ರಿಪೋರ್ಟ್ ನಿಂದ 'ರಪಟ್' '', 'ಸಿಮೆಂಟ್'ನಿಂದ 'ಸಿಲ್ಮಿಟ್', ಆಯಿತು. ಆದರೆ ಇಂದಿನ ದಿನಗಳಲ್ಲಿ ಹಿಂದಿಯಲ್ಲಿ ಆಂಗ್ಲ ಭಾಷೆ ಎದುರಾಗುತ್ತಲೇ ಇದ್ದರೂ ಹೊಸ ಪದಗಳನ್ನು ಸೃಷ್ಟಿಸುವ ಆತ್ಮವಿಶ್ವಾಸ ನಿರಂತರವಾಗಿ

ಕಡಿಮೆಯಾಗುತ್ತಿದೆ. ಹೆಚ್ಚಿನ ಆಂಗ್ಲ ಪದಗಳನ್ನು ಅವುಗಳ ಉಚ್ಚಾರಣೆ ಹೇಗಿದೆಯೋ ಹಾಗೆಯೇ ಸ್ವೀಕರಿಸಲು ಒತ್ತಡ ಹೆಚ್ಚುತ್ತಿದೆ. ಉದಾಹರಣೆಗೆ, 'ಕೆನಡಾ'ವನ್ನು ಹಿಂದಿಯಲ್ಲಿ 'ಕನಡಾ' ಎಂದು ಕರೆಯುವುದು, 'ಒಲಿಂಪಿಕ್ಸ್' ಅನ್ನು 'ಒಲಂಪಿಕ್' ಎಂದು ಕರೆಯುವುದು ಅಥವಾ ಚೈನಾವನ್ನು 'ಚೀನ್', 'ರಷ್ಯಾ'ವನ್ನು 'ರೂಸ್' ಎಂದು ಬರೆಯುವುದು ಪ್ರವೃತ್ತಿಯಲ್ಲಿ ಕಡಿಮೆಯಾಗುತ್ತಿದೆ. ನಾವು ಪರಭಾಷೆಯ ಪದಗಳನ್ನು ಅವುಗಳ ಮೂಲ ಉಚ್ಚಾರಣೆಗೆ ಒತ್ತು ನೀಡುತ್ತಿರುವುದು ನಮ್ಮಲ್ಲಿ ಆತ್ಮಗೌರವದ ಕೊರತೆ ಎತ್ತಿ ತೋರಿಸುವುದಲ್ಲದೇ ಹಿಂದಿ ಭಾಷಿಗರು ಕೀಳರಿಮೆಯ ಬಲಿಪಶುಗಳಾಗುತ್ತಿದ್ದಾರೆ ಎಂಬುದರ ಸ0ಕೇತ. ಇದರ ಸಂಬಂಧ ಸಮಾಜದ ಶಕ್ತಿಗಿಂತ ಹೆಚ್ಚಿದೆ, ಭಾಷೆಯ ಶಕ್ತಿಗಿಂತ ಕಡಿಮೆ. ಡಾ.ರಾಮ್ ಮನೋಹರ ಲೋಹಿಯಾ ಅವರು ಭಾಷೆಯ ಬಗ್ಗೆ ಸಾಕಷ್ಟು ಕೆಲಸ ಮಾಡಿದ್ದರು. ಶಬ್ದಗಳು ಹುಡುಕುವುದರಿಂದ ಬರುತ್ತದೆ ಎಂದು ಅವರು ಹೇಳುತ್ತಿದ್ದರು. ಶಬ್ದಗಳನ್ನು ಹುಡುಕಬೇಕಿದೆ. ಶಬ್ದಗಳನ್ನು ಹುಡುಕಿ ಹೊಸ ಪದಗಳನ್ನು ಮಾಡುವ ಕೌಶಲ್ಯ ಹಿಂದಿ ಅಥವಾ ಇತರ ಭಾಷೆಗಳಲ್ಲಿತ್ತೋ ಅದು ಇತ್ತೀಚಿನ ದಿನಗಳಲ್ಲಿ ನಿಧಾನವಾಗಿ ಆಂಗ್ಲ ಭಾಷೆಗೆ ಶರಣಾಗುತ್ತಿದೆ. ಇದೊಂದು ದೊಡ್ಡ ಸಂಕಟವಾಗಿದೆ. ಆಂಗ್ಲ ಭಾಷೆಯು ಅನೇಕ ಹಿಂದಿ ಪದಗಳನ್ನು ತೆಗೆದು ತಮ್ಮದೇ ಆದ ರೀತಿಯಲ್ಲಿ ರಚಿಸಲು ಪ್ರಯತ್ನಿಸಿದ್ದಾರೆ, ಅಂದರೆ ಹಿಂದಿ ಮತ್ತು ಆಂಗ್ಲ ಭಾಷೆಯ ನಡುವೆ ಪರಸ್ಪರ ಸಂವಹನ ಹೆಚ್ಚಾಗಿದೆ. ಹಿಂದಿಯಲ್ಲಿ ಅಥವಾ ಇನ್ನಾವುದೇ ಭಾಷೆಯಲ್ಲಿ, ಪ್ರತಿ ಭಾಷೆಯ ಪದಗಳು ಶುದ್ಧ ಗಾಳಿಯು ಮುಕ್ತವಾಗಿ ಬೀಸುವಂತೆ ಮಾಡಬೇಕಿದೆ. ಆದರೆ ಹಿಂದಿ ತನ್ನ ಬಾಗಿಲು ಮುಚ್ಚಲು ನಿರಂತರವಾಗಿ ಪ್ರಯತ್ನಿಸುತ್ತಿದೆ ಎಂಬ ಅಂಶವನ್ನು ನಾವು ಗಮನಿಸಬೇಕಾಗಿದೆ. ಇದಕ್ಕೆ ಸಾಂಸ್ಕೃತಿಕ ಅಥವಾ ಐತಿಹಾಸಿಕ ಕಾರಣಗಳಿರಬಹುದು. ಆದರೆ ಬಾಗಿಲು ತೆರೆದಿರುವ ಭಾಷೆಗಳು ಅರಳುತ್ತವೆ ಎಂದು ನಾವು ಯೋಚಿಸಬೇಕು. ಧ್ವನಿ, ವಿಚಾರ, ಆಲೋಚನೆ, ಪದ ಮತ್ತು ವಾಕ್ಯ ರಚನೆಯ ಮಟ್ಟದಲ್ಲಿ ಭಾಷೆಗಳ ನಿರಂತರ ಸಂವಹನವಿದೆ.

*ಕೇವಲ ಪದಗಳು ಮತ್ತು ಅರ್ಥಗಳಿಂದ ಭಾಷೆ ಮಾಡಲ್ಪಟ್ಟಿಲ್ಲ ಆದರೆ ಚಿತ್ರಗಳಿಂದಲೂ ಆಗುವುದು. ಉದಾಹರಣೆಗೆ ಕಮಲ ಎಂಬ ಪದವನ್ನು ತೆಗೆದುಕೊಂಡರೆ ನಮ್ಮೆಲ್ಲರೊಳಗೆ ಅರಳಿದ ಕಮಲದ ಹೂವಿನ ಚಿತ್ರಣ ಮೂಡುತ್ತದೆ. ಯಾವುದು ಕಮಲ ಪದಕ್ಕಿಂತ ಭಿನ್ನವಾಗಿರುತ್ತದೆ, ಅಂದರೆ ಕಮಲವನ್ನು ನಾವೆಲ್ಲ ಯಾವ ರೂಪದಲ್ಲಿ ನೋಡಿದ್ದೇವೆಯೋ ಅದೇ ನಮಗೆ ಕಮಲವಾಗಿರುತ್ತದೆ. ಉದಾಹರಣೆಗೆ, 'ಬಾಲ್ಕನಿಯಲ್ಲಿ ನಿಂತಿರುವ ಹುಡುಗಿ ದುಃಖತಪ್ತಳಾಗಿದ್ದಾಳೆ' ಎಂದು ಹೇಳಿದರೆ, ನಮ್ಮೆಲ್ಲರ ಒಳಗೆ ಒಂದು ರೀತಿಯ ಬಾಲ್ಕನಿಯ ಚಿತ್ರಣ ಮೂಡುತ್ತದೆ. ಇಂದಿನ ಓಡಾಟದ ಜಂಜಾಟದಲ್ಲಿ ಈ ಅರ್ಥಪೂರ್ಣ ಚಿತ್ರಗಳಿಗೆ ಜಾಗವೇ ಉಳಿದಿಲ್ಲ.*

*-ಒಬ್ಬ ಭಾಗವಹಿಸಿದ ಅಭ್ಯರ್ಥಿ*

ಭಾಷೆ ನಮ್ಮ ಕಾಳಜಿಯಿಂದ ರೂಪುಗೊಂಡಿದೆ. ದೇಶ-ವಿದೇಶಗಳಲ್ಲಿ ಎಲ್ಲೆಲ್ಲಿ ಜನರು ಕೊಲ್ಲಲ್ಪಡುತ್ತಿದ್ದರೂ ಅವರ ಬಗ್ಗೆ ನಮಗೆ ಕಾಳಜಿಯಿಲ್ಲದಿದ್ದರೆ, ನಮ್ಮ ಅಭಿವ್ಯಕ್ತಿ ಅರ್ಥಹೀನವಾಗಬಹುದು.

ಭಾಷೆಯ ಸಮಸ್ಯೆಯು ಒಂದು ದೊಡ್ಡ ಸಾಮಾಜಿಕ ಹೋರಾಟದ ಸಮಸ್ಯೆಯಾಗಿದೆ. ಈ ಹೋರಾಟದಲ್ಲಿ ಭಾಷೆ ಪ್ರಮುಖ ಸಾಧನವಾಗಿದೆ. ಆದರೆ ಈ ದೊಡ್ಡ ಯುದ್ಧದಲ್ಲಿ, ನಾವು ನಮ್ಮ ಭಾಷೆಯ ಅಸ್ಮಿತೆಯನ್ನು ಗುರುತಿಸಿ ಆಂಗ್ಲ ಭಾಷೆಯೊಂದಿಗೆ ಸಂವಹನ ನಡೆಸುವಾಗ ಹೊಸ ಪದಗಳನ್ನು ರಚಿಸಲು ಪ್ರಯತ್ನಿಸಬೇಕು. ಆಂಗ್ಲ ಲೇಖಕರು ಈ ಕೆಲಸವನ್ನು ಮಾಡಿದ್ದಾರೆ.

ಗ್ರಾಮೀಣ ಭಾಷೆಗಳ ಪದಗಳ ಮೂಲಕ ಒಂದು ಸಾಧ್ಯತೆಯನ್ನು ಸೃಷ್ಟಿಸಬಹುದಾಗಿದೆ. ಹಿಂದಿ ಪ್ರಾದೇಶಿಕ ಭಾಷೆಯಿಂದ ಬೇರ್ಪಟ್ಟಷ್ಟೂ ಅದು ಒಂಟಿಯಾಗುತ್ತಿದೆ. ಉದಾಹರಣೆಗೆ, ಬಣ್ಣದ, ರುಚಿಯ, ಸಂಬಂಧದ, ಕೃಷಿ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ಪದಗಳು ಗ್ರಾಮೀಣ ಅನುಭವದಲ್ಲಿದೆಯೋ ಅಷ್ಟು ನಗರದ ಅನುಭವದಲ್ಲಿ ಇಲ್ಲ. ಉದಾಹರಣೆಗೆ, ಭೋಜ್‌ಪುರಿಯಲ್ಲಿ ನೋವಿಗೆ ಸಂಬಂಧಿಸಿದ ಇಂತಹ ಹಲವು ಪದಗಳು ಹಿಂದಿಯಲ್ಲಿ ಇಲ್ಲ – ದು:ಖಾತ, ಬಥತಾ, ಪಿಡಾತಾ, ಟಭಕತಾ, ಕಸ್ ಕತಾ, ಟಸ್ ಕತಾ ಇತ್ಯಾದಿ ಈ ಎಲ್ಲಾ ಪದಗಳು ಬೇರೆ-ಬೇರೆ ಅರ್ಥ ಸಂದರ್ಭ ಹೊಂದಿವೆ. ಹಿಂದಿಯನ್ನು ಭಾಷಿಕ ಸಂಸ್ಕೃತಿಯ ರೂಪದಲ್ಲಿ ನಿಲ್ಲುವಂತೆ ಮಾಡಬೇಕು. ಇತರ ಭಾಷೆಯ ಪದ-ಶಬ್ದಗಳನ್ನು ಭೇಟಿಯಾತ್ತಾ ಅವುಗಳ ಶಕ್ತಿಯನ್ನು ಕಡಿಮೆ ಮಾಡಿ ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಿದೆ.ಆದ್ದರಿಂದ ಆಂಗ್ಲ ಪದಗಳ ಹೋಲಿಕೆಯ ಜೊತೆ ಹೊಸ ಪದಗಳನ್ನು ಹುಡುಕಲು ಉತ್ತಮ ಮಾರ್ಗವನ್ನು ಯೋಚಿಸಬೇಕಿದೆ. ಈ ರೀತಿಯಾಗಿ, ಪದಗಳ ಓಡಾಟ ಮತ್ತು ಭಾಷೆಗಳ ನಡುವಿನ ಸಂಭಾಷಣೆಯ ಮಾರ್ಗವನ್ನು ಮುಕ್ತವಾಗಿ ತೆರೆದಿಡಬೇಕಿದೆ.

***ಸಂವಾದದ ಪ್ರಯತ್ನಗಳು***

*ಸೆಕ್ಮೋಲ್ ಲಡಾಕಿ ಭಾಷೆಯ ಪ್ರಮಾಣೀಕರಣಕ್ಕೆ ಪ್ರಯತ್ನಗಳನ್ನು ಮಾಡುತ್ತಿದೆ. ಇದಕ್ಕಾಗಿ ಅವರು ಲಡಾಕಿ ಲಿಪಿಯಲ್ಲಿ ರೇವಾಯ್ ಓಜರ್ ಪತ್ರಿಕೆ (Rewai Odzer) ಮತ್ತು ಮೆಲಾಂಗ್ (Melong) ಪತ್ರಿಕೆಯನ್ನು ಪ್ರಕಟಿಸಿರುತ್ತಾರೆ. ಅಲ್ಲದೆ, ಆಂಗ್ಲ ಮತ್ತು ಲಡಾಖಿ ಎರಡೂ ಭಾಷೆಗಳಲ್ಲಿ ಮಕ್ಕಳ ಕಥೆಗಳನ್ನು ಮುನ್ನೆಲೆಗೆ ತರುವ ಮಹತ್ವಪೂರ್ಣ ಕಾರ್ಯವನ್ನು ಕೈಗೊಂಡಿದೆ.*

*ಇದರ ಹೊರತಾಗಿ, ಇದು ಪ್ರಾಥಮಿಕ ಹಂತದಲ್ಲಿ EVS ಪಠ್ಯಪುಸ್ತಕಗಳು ಮತ್ತು ಭಾಷೆಯ ಬೆಳವಣಿಗೆಗೂ ಸಂಬಂಧಪಟ್ಟಿದೆ. ಈ ಪಠ್ಯಪುಸ್ತಕಗಳು ಆಂಗ್ಲ ಮಾಧ್ಯಮದಲ್ಲಿದ್ದರೂ ಲಡಾಖಿ ಭಾಷೆಯ ಝುಲಕ್‌ಗಳಿಂದ ಕೂಡಿದೆ. ಅವರು ಶಿಕ್ಷಕರಿಗಾಗಿ ಲಡಾಖಿ ಆವೃತ್ತಿಯನ್ನು ಹೊರತರಲು ಯೋಜಿಸಿದ್ದಾರೆ. ಈ ರೀತಿಯಾಗಿ, ಸ್ಥಳೀಯ ಲಡಾಕಿ ಭಾಷೆಯಲ್ಲಿ ಕ್ರಮೇಣವಾಗಿ ವಿಷಯಗಳು ಮುದ್ರಣವಾದ ಹಾಗೆ, ಲಡಾಖಿ ಭಾಷೆಯ ಪಠ್ಯಪುಸ್ತಕಗಳು ಹೊರಬರಲು ಸಾಧ್ಯವಾಗುತ್ತದೆ.*

# 6

# ಸಮಸ್ಯೆಗಳು ಹಾಗೂ ಸವಾಲುಗಳು



- ಶಿಕ್ಷಕನ ತಯಾರಿ
- ಸಾಮಾಜಿಕ ತಯಾರಿ
- ಆಡಳಿತಾತ್ಮಕ ತಯಾರಿ

ಗ್ರಹಿಕೆ/ತಿಳುವಳಿಕೆಯ ಭೋಧನಾ ಮಾಧ್ಯಮವನ್ನು ಕಾರ್ಯರೂಪಕ್ಕೆ ತರಲು ಬಹಳ ವಿಸ್ತಾರವಾದ ಮಾರ್ಗವನ್ನು ನಿರ್ಧರಿಸಬೇಕಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಈ ವಿಷಯದ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಈ ಕಾರ್ಯ ಕೇವಲ ಒಬ್ಬ ಶಿಕ್ಷಕ, ಒಂದು ಶಾಲಾ ಆಡಳಿತ ಅಥವಾ ಕೇವಲ ಕೆಲವು ಶಿಕ್ಷಣ ತಜ್ಞರಿಂದ ಆಗುವ ಕೆಲಸವಲ್ಲ. ನಾವು ಎಂತಹ ಸಮಸ್ಯೆಗಳು ಮತ್ತು ಸವಾಲುಗಳನ್ನು ಎದುರಿಸುತ್ತಿದ್ದೇವೆಯೆಂದರೆ, ಇಲ್ಲಿ ಸಮುದಾಯ, ಶಿಕ್ಷಕರು ಮತ್ತು ಆಡಳಿತವು ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. ಇದನ್ನು ನಾವು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ.

## ಶಿಕ್ಷಕರ ತಯಾರಿ

ಬಹಳ ಸಮಯದ ನಂತರ ನಮ್ಮ ಭಾಷೆಯ ಕಡೆ ನಾವಿಡುತ್ತಿರುವ ಮೊದಲ ಹೆಜ್ಜೆ ಇದಾಗಿದೆ. ಇದರಲ್ಲಿಮಹತ್ವಪೂರ್ಣ ಪಾತ್ರ ಶಿಕ್ಷಕರದ್ದೇ! ಏಕೆಂದರೆ ಪೋಷಕರ ನಂತರ ಶಿಕ್ಷಕರೇ ಮಕ್ಕಳ ಜೊತೆ ಹೆಚ್ಚಿನ ಸಮಯವನ್ನು ಕಳೆಯುತ್ತಾರೆ. ಚಿಕ್ಕ ಮಕ್ಕಳನ್ನು ಶಾಲೆ ಹಾಗೂ ಶಿಕ್ಷಣಕ್ಕೆ ಸಂಪರ್ಕಿಸುವ ಸಂಪೂರ್ಣ ಜವಾಬ್ದಾರಿ ಶಿಕ್ಷಕರ ಮೇಲಿದೆ. ಶಾಲಾ ಭಾಷೆ ಮತ್ತು ಇತರ ಭಾಷೆಗಳ ನಡುವೆ ಸೇತುವೆ ನಿರ್ಮಿಸುವ ಕೆಲಸವೂ ಶಿಕ್ಷಕರಿಂದಲೇ ಆಗಬೇಕಿದೆ. ಮಗುವಿನ ಭಾಷೆಯಲ್ಲಿಯೇ ಶಿಕ್ಷಣವನ್ನು ನೀಡಿದಾಗ ಮಾತ್ರ ಈ ಅಂತರವನ್ನು ನಿವಾರಿಸಲು ಸಾಧ್ಯವಾಗುತ್ತದೆ. ಇದಕ್ಕಾಗಿ ಶಿಕ್ಷಕರಿಗೆ ತರಬೇತಿ ನೀಡುವುದು ತುಂಬಾ ಅತ್ಯವಶ್ಯಕ. 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ನೇಮಕಗೊಂಡ ಶಿಕ್ಷಕರಿಗೆ ಸ್ಥಳೀಯ ಭಾಷೆಗಳನ್ನು ಕಲಿಸಬೇಕು ಎಂದು ಶಿಫಾರಸ್ಸು ಮಾಡಲಾಗಿದೆ. ಸ್ಥಳೀಯ ಭಾಷೆಯಲ್ಲಿ ಕಲಿಸಲು ಶಿಕ್ಷಕರಿಗೆ ಸ್ವಾಯತ್ತತೆಯನ್ನು ನೀಡಬೇಕು. ಅದಲ್ಲದೆ ತರಗತಿಯಲ್ಲಿ ಬಹುಭಾಷಾ ಮಕ್ಕಳನ್ನು ಗುರುತಿಸಿ ಸಂಪನ್ಮೂಲವಾಗಿ ಬಳಸಿಕೊಳ್ಳುವ ಸ್ವಾತಂತ್ರ್ಯವೂ ಕೂಡ ಈ ಶಿಫಾರಸ್ಸಿಗೇ ಹೊಂದಿಕೊಂಡಿದೆ.

- ನಮ್ಮ ದೇಶದಲ್ಲಿ ಅನೇಕ ಉಪಭಾಷೆಗಳು ಮತ್ತು ಭಾಷೆಗಳಿದ್ದು ಮಕ್ಕಳ ಈ ಎಲ್ಲಾ ಭಾಷೆಗಳಲ್ಲಿ ಇನ್ನೂ ಪುಸ್ತಕಗಳ ಲಭ್ಯವಿಲ್ಲ. ಸಂವಿಧಾನದಲ್ಲಿ ಒಟ್ಟು 22 ಭಾಷೆಗಳನ್ನು ಪಟ್ಟಿ ಮಾಡಲಾಗಿದೆ. ಇಲ್ಲಿನ ಪ್ರಮುಖ

ಸಮಸ್ಯೆಯೆಂದರೆ ಈ 22 ಭಾಷೆಗಳಲ್ಲಿ ಪುಸ್ತಕಗಳ ಲಭ್ಯವಿಲ್ಲ. ಇದರ ಜವಾಬ್ದಾರಿ ಶಿಕ್ಷಕರ ಮತ್ತು ಸರ್ಕಾರ ಇವರಿಬ್ಬರ ಮೇಲಿದೆ. ಸರ್ಕಾರ ತನ್ನ ಜವಾಬ್ದಾರಿಯನ್ನು ಪೂರೈಸಲು ವಿಫಲವಾದರೆ, ಮಗುವಿಗೆ ಅವನ ಮಾತೃಭಾಷೆಯಲ್ಲಿ ಶಿಕ್ಷಣವನ್ನು ನೀಡುವುದು ಶಿಕ್ಷಕರ ಜವಾಬ್ದಾರಿಯಾಗಿದೆ. 2005 ರ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು ಶಿಕ್ಷಕರ ಈ ಸ್ವಾಯತ್ತತೆಯನ್ನು ಶಿಫಾರಸು ಮಾಡಿದೆ.

- ತರಗತಿಯಲ್ಲಿ ಮಕ್ಕಳಿಗೆ ಪಾಠ ಮಾಡುವಾಗ ಅನುಭವದ ಆಧಾರದ ಮೇಲೆ ಪಠ್ಯವಸ್ತುವನ್ನು ಸಿದ್ಧಪಡಿಸುವಲು ಶಿಕ್ಷಕರು ಸಜ್ಜಾಗಬೇಕಿದೆ. ಅವರ ಪ್ರಕಾರ ಪಠ್ಯವಸ್ತು ಮಕ್ಕಳ ತರಗತಿಗಳಲ್ಲಿನ ಅವಶ್ಯಕತೆಗಳ ಆಧಾರದ ಮೇಲೆಯೇ ರೂಪುಗೊಳ್ಳಬೇಕಿದೆ. ಇಂತಹ ಪಠ್ಯವಸ್ತುವೇ ಉತ್ತಮವಾದ ಪಠ್ಯವಸ್ತುವಾಗುವುದು.
- ಕಲಿಕೆಯ ಮೇಲೆ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸಾಮಾಜಿಕ ಪರಿಸರವು ಹೆಚ್ಚು ಪ್ರಭಾವ ಬೀರುವುದು. ಶಾಲೆಯ ಸಾಮಾಜಿಕ ಪರಿಸರವು ಇಡೀ ಶಿಕ್ಷಣ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು, ಮಾನಸಿಕ ಗುಣಲಕ್ಷಣಗಳಿಗಿಂತ ಹೆಚ್ಚಾಗಿ ವಿದ್ಯಾರ್ಥಿಯ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಪರಿಸರದ ಮೇಲೆ ಹೆಚ್ಚಿನ ಒತ್ತು ನೀಡುವ ಅವಶ್ಯಕತೆಯಿದೆ-ಇದರಲ್ಲಿ ಅರ್ಥಮಾಡಿಕೊಳ್ಳುವ/ಗ್ರಹಿಕೆಯ ಭಾಷೆಯ ಪಾತ್ರವನ್ನು ಗುರುತಿಸಬೇಕಾಗಿದೆ.
- ಶಿಕ್ಷಕರಿಗೆ ಭಾಷೆಯ ಸಮಗ್ರ ತಿಳುವಳಿಕೆ ಇರಬೇಕು.
- ಪ್ರಾಥಮಿಕ ಹಂತದಲ್ಲಿ ಮಕ್ಕಳು ಹೇಗೆ ಮಾತನಾಡುವರೋ ಹಾಗೆಯೇ ಅಂದರೆ ಯಾವುದೇ ಪರಿಷ್ಕರಣೆ ಮಾಡದೆ ಭಾಷೆಯನ್ನು ಅವರಾಡುವ ರೀತಿಯಲ್ಲಿಯೇ ಸ್ವೀಕರಿಸಬೇಕು. 4 ನೇ ತರಗತಿಯ ನಂತರ ಸಮೃದ್ಧ ಹಾಗೂ ಹೆಚ್ಚು ಆಸಕ್ತಿದಾಯಕ ಅನುಭವಗಳನ್ನು ನೀಡಿದ್ದಲ್ಲಿ ಮಕ್ಕಳು ಸ್ವತಃ ಭಾಷೆಯ ಸರಿಯಾದ/ಪ್ರಮಾಣಿತ ರೂಪವನ್ನು ಗ್ರಹಿಸುವರು. ಆದರೆ ಈ ಪ್ರಕ್ರಿಯೆಯಲ್ಲಿ ಮಗುವಿನ ಮನೆ ಭಾಷೆಯ ಮೇಲೆ ಸರಿಯಾದ ಗೌರವ ಭಾವನೆ ಇರಬೇಕು. ತಪ್ಪುಗಳು ಕಲಿಕೆಯ ಭಾಗವಾಗಿರುವುದನ್ನು ನಾವು ತಿಳಿಯಬೇಕಿದೆಯಲ್ಲದೆ ಮಕ್ಕಳು ಸಮರ್ಥರಾದರೆ ಅವರೇ ಅದನ್ನು ಸರಿಪಡಿಸಿಕೊಳ್ಳುತ್ತಾರೆ. ತಪ್ಪುಗಳು ಮತ್ತು ನ್ಯೂನತೆಗಳ ಮೇಲೆ ಕೇಂದ್ರೀಕರಿಸುವ ಬದಲು ಮಕ್ಕಳಿಗೆ ಹೆಚ್ಚಿನ ಸಮಯವನ್ನು ವಿವರವಾದ ಆಸಕ್ತಿದಾಯಕ ಹಾಗೂ ಸವಾಲೆಸೆಯುವಂತಹ ಉತ್ಪಾದಕ ಸಾಮಗ್ರಿಯನ್ನು

> *ಮಾತೃಭಾಷೆಯ ಶಿಕ್ಷಣದಲ್ಲಿ ತರಗತಿಯ ಕಲಿಕೆಯನ್ನು ಸಂಪನ್ನಗೊಳಿಸಲು ಸೌಲಭ್ಯಗಳು ಇರಬಹುದು, ಕಲಿಯುವವರ ಹೆಚ್ಚಿನ ಭಾಗವಹಿಸುವಿಕೆ ಮತ್ತು ಉತ್ತಮ ಫಲಿತಾಂಶಗಳು ಬರಬಹುದು. ಈ ಉದ್ದೇಶದ ಸಾಧನೆಗಾಗಿ ಸೂಕ್ತ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಕಲಿಯುವವರು ತನಗೆ ಸುಲಭವಾಗಿ ಅರ್ಥವಾಗುವ ಮಾಧ್ಯಮವನ್ನು ಅಳವಡಿಸಿಕೊಳ್ಳಲು ಹಿಂಜರಿಯದಂತೆ ಮಾತೃಭಾಷೆಯಲ್ಲಿ ಶಿಕ್ಷಣದ ಬಗ್ಗೆ ಸಕಾರಾತ್ಮಕ ಮನೋಭಾವವನ್ನು ಖಾತ್ರಿಪಡಿಸಿಕೊಳ್ಳಬೇಕು*
>
> *— ಭಾರತೀಯ ಭಾಷೆಗಳ ಬೋಧನೆ, ರಾಷ್ಟ್ರೀಯ ಫೋಕಸ್ ಸಮೂಹದಸ್ಥಾನ ಕಾಗದ, 1.3, ಪುಟ.15*

ನೀಡಬೇಕಿದೆ.

- ಕಲಿಕೆ ಹೇಗೆ ನಡೆಯುತ್ತದೆ ಎಂಬುದನ್ನು ಶಿಕ್ಷಕರು ಅರ್ಥಮಾಡಿಕೊಳ್ಳಬೇಕು. ಅದಕ್ಕೆ ಪೂರಕವಾದ ವಾತಾವರಣ ನಿರ್ಮಿಸಬೇಕಿದೆ. ವಂಚಿತ ಮಕ್ಕಳು ಮತ್ತು ವಿವಿಧ ಅಂಗವೈಕಲ್ಯ ಹೊಂದಿರುವ ಮಕ್ಕಳ ಅಗತ್ಯಗಳು ಸೇರಿದಂತೆ ಎಲ್ಲಾ ಮಕ್ಕಳ ಕಲಿಕೆಯ ಅಗತ್ಯಗಳನ್ನು ಅರ್ಥಮಾಡಿಕೊಳ್ಳಬೇಕಿದೆ.
- ಎರಡನೇ ಭಾಷೆಯನ್ನು ಕಲಿಸುವ ವಿಧಾನದ ಬಗ್ಗೆ ಶಿಕ್ಷಕರು ವಿಶೇಷ ಗಮನ ಹರಿಸಬೇಕಾಗುತ್ತದೆ.
- ಬೋಧನೆಗೆಈರೀತಿಯದೃಢವಾದತಯಾರಿ,ಅಂದರೆಪ್ರಾಯೋಗಿಕವಾಗಿಯೂ ಹಾಗೂ ಸೈದ್ಧಾಂತಿಕವಾಗಿಯೂ ಇರಬೇಕಿದೆ.
- ಬಹುಭಾಷೆಗಳನ್ನು ಸಂಪನ್ಮೂಲವಾಗಿ ಹೇಗೆ ಬಳಸುವುದು ಎಂಬುದರ ಕುರಿತು ತರಭೇತಿ ನೀಡಬೇಕು.
- ಇದರೊಂದಿಗೆ ಬಹುಭಾಷೀಯತೆಯ ಮಿತಿಗಳೇನು? ಎಂಬುದನ್ನೂ ಸಹಾ ಹೇಳಬೇಕು
- ಶಿಕ್ಷಕರು ಮಕ್ಕಳ ಪೋಷಕರೊಂದಿಗೆ ನಿರಂತರವಾಗಿ ಸಂವಹನ ನಡೆಸಬೇಕು.
- ಪೂರ್ವ-ಸೇವಾ ಮತ್ತು ಸೇವಾ ತರಭೇತಿ ಕಾರ್ಯಗಳು (ಭಾಷೆಯ ತಿಳುವಳಿಕೆ, ಬಹುಭಾಷೀಯತೆ, ಭಾಷೆಗಳಲ್ಲಿ ಸಂವಾದ ಮತ್ತು ಭಾಷೆಗಳ ಸ್ಥಿತಿ) ಮುಂತಾದ ವಿಷಯಗಳನ್ನು ಸೇರ್ಪಡಿಸಬೇಕಿದೆ.
- ಶಾಲೆಗಳಲ್ಲಿ ಕೇವಲ ಮಕ್ಕಳ ಬರವಣಿಗೆಗೆ ಮಾತ್ರ ಒತ್ತು ನೀಡದೆ, ಮಾತು ಮತ್ತು ಆಲಿಸುವಿಕೆಗೆ ಹೆಚ್ಚಿನ ಮಹತ್ವ ನೀಡಬೇಕಿದೆ.

## ಸಾಮಾಜಿಕ ತಯಾರಿ

- ಇಂದು ಪ್ರತಿಯೊಂದು ಸಮುದಾಯವೂ ತಮ್ಮ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಬಯಸುತ್ತಿದೆ. ಆಂಗ್ಲ ಮಾಧ್ಯಮದಲ್ಲಿ ಓದುವ ತಮ್ಮ ಮಗು ಮಾತೃಭಾಷೆಯಲ್ಲಿ ಶಿಕ್ಷಣ ಪಡೆದ ಮಕ್ಕಳಿಗಿಂತ ಕಡಿಮೆ ಸೃಜನಶೀಲತೆಯನ್ನು ಹೊಂದಿರುತ್ತಾರೆ ಎಂದು ಅವರಿಗೆ ತಿಳಿಸಬೇಕಿದೆ. ಅದೇ ರೀತಿ, ಈ ಶಾಲಾ ಶಿಕ್ಷಣವನ್ನು ತನ್ನ ದಿನನಿತ್ಯದ ಜೀವನಕ್ಕೆ ಅಳವಡಿಸಿಕೊಂಡು ಮತ್ತು ಸಮುದಾಯದ ವಾಸ್ತವಗಳೊಂದಿಗೆ ಹೆಜ್ಜೆ ಹಾಕಲು ಆಂಗ್ಲ ಮಾಧ್ಯಮದಲ್ಲಿ ಓದಿದವನಿಗೆ ಸಾಧ್ಯವಾಗುವುದಿಲ್ಲವೆಂಬ ಸಂಗತಿಯನ್ನು ಅರಿಯಬೇಕಿದೆ. ಆಂಗ್ಲ ಮಾಧ್ಯಮ ಶಿಕ್ಷಣ ವ್ಯವಸ್ಥೆ ಅವರಿಗೆ ಬಾಯಿಪಾಠಮಾಡುವ ಅಥವಾ ರಟ್ಟೆಹೊಡೆಯುವುದನ್ನು ಕಲಿಸುತ್ತದೆ ಹೊರತು ನಿಜವಾದ ಕಲಿಕೆಯಾಗುವುದಿಲ್ಲ. ಮಗುವಿನ ಮಾತೃಭಾಷೆಯಲ್ಲಿನ ಶಿಕ್ಷಣವು ಮಗುವಿನ ಸೃಜನಶೀಲತೆ, ಆತ್ಮವಿಶ್ವಾಸ ಮತ್ತು ಸಾಮರ್ಥ್ಯವನ್ನು ಹೆಚ್ಚು ಮಾಡುತ್ತದೆ. ಈ ಸಮುದಾಯದ ಜವಾಬ್ದಾರಿಯುತ ಪ್ರತಿನಿಧಿ ಜನರು ಈ ಮಾತನ್ನು ಅರ್ಥಮಾಡಿಕೊಳ್ಳಬೇಕು. ಸಮುದಾಯದ (ಪೋಷಕರ) ಈ ತಿಳುವಳಿಕೆಯನ್ನು ಮೂಡಿಸುವುದಾದರೂ ಹೇಗೆ ಎಂಬುದು ಇಂದು ನಮ್ಮ ಮುಂದಿರುವ ದೊಡ್ಡ ಸವಾಲು.
- ಶಿಕ್ಷಣದಲ್ಲಿ ಮಾಧ್ಯಮ ಭಾಷೆಯ ಬಗ್ಗೆ ಸಮಾಜದ ಮುಂದೆ ಎರಡು ಮುಖ್ಯ ಸಮಸ್ಯೆಗಳಿವೆ, ಒಂದು ಜೀವನೋಪಾಯದ ಸಮಸ್ಯೆ ಮತ್ತು ಇನ್ನೊಂದು ಸಾಮಾಜಿಕ ಪ್ರತಿಷ್ಠೆ ಅಥವಾ ಗೌರವ.

- ಈ ಎರಡೂ ಸಮಸ್ಯೆಗಳನ್ನು ಎದುರಿಸಲು, ಒಂದು ದೊಡ್ಡ ಸಾಮಾಜಿಕ ಸಿದ್ಧತೆಯನ್ನು ಮಾಡಿಕೊಳ್ಳುವ ಅವಶ್ಯಕತೆ ಇದೆ. ಇದರಲ್ಲಿ ಮಾಧ್ಯಮವು ದೊಡ್ಡ ಪಾತ್ರವನ್ನು ವಹಿಸುತ್ತದೆ. ಸಮಾಜದ ವಿವಿಧ ಸಮುದಾಯಗಳು ಮತ್ತು ಪೋಷಕರೊಂದಿಗೆ ಸಂಪರ್ಕ ಸಾಧಿಸಿ, ಆಂಗ್ಲ ಭಾಷೆಯೊಂದೇ ಶಿಕ್ಷಣದ ಏಕಮಾತ್ರ ಮಾಧ್ಯಮವಲ್ಲ ಎಂದು ನಾವು ಭರವಸೆ ನೀಡಬೇಕಾಗಿದೆ.
- ವಿವಿಧ ಕ್ಷೇತ್ರಗಳಲ್ಲಿ ಮಾತೃಭಾಷೆಯ ಮೂಲಕ ಓದಿ ಉನ್ನತ ಪದವಿ ಹಾಗೂ ಯಶಸ್ಸನ್ನು ಗಳಿಸಿದ ಸಾಧಕರ ಬಗ್ಗೆ (ಪ್ರಿಂಟ್ ಎಲೆಕ್ಟ್ರಾನಿಕ್ ಬೀದಿ ನಾಟಕ ಸಂದರ್ಶನಗಳು ಮತ್ತು ಅನುಭವಗಳು ಇತ್ಯಾದಿಗಳನ್ನು ಅವರಿಗೆ ತಿಳಿಸಬೇಕಿದೆ. ಯಾವ ಯುವಕರು ತಮ್ಮ ಭಾಷೆಯ ಮುಖಾಂತರ ಓದಿ ಸಾಮರ್ಥ್ಯಗಳನ್ನು ಪಡೆದಿರುವರೋ ಆ ಯುವಕರ ಸಂಭಾಷಣೆ ಮತ್ತು ಅನುಭವವನ್ನು ಮಾಧ್ಯಮಗಳ ಮೂಲಕ ಪೋಷಕರಿಗೆ ತಲುಪಿಸಬೇಕು. ಆಂಗ್ಲ ಭಾಷೆಯೊಂದೇ ಯಶಸ್ಸಿನ ಕೀಲಿಕೈ ಎಂಬ ಭ್ರಮೆಯನ್ನು ತೊಡೆದುಹಾಕಬೇಕಿದೆ.
- ನೇತರಹಾಟ್ ಶಾಲೆ, ಸರ್ದಾರ್ ಪಟೇಲ್ಶಾಲೆ, ಈ ರೀತಿಯ ಶಾಲೆಗಳು ಮಾತೃಭಾಷೆಯಲ್ಲಿ ಕಲಿಸುವ ಮೂಲಕ ಒಳ್ಳೆಯ ವಿದ್ಯಾವಂತರನ್ನು ಹಾಗೂ ಪ್ರಮುಖ ವ್ಯಕ್ತಿಗಳನ್ನು ತಯಾರು ಮಾಡಿದ ಉದಾಹರಣೆಗಳನ್ನು ಮುಂದೆ ಇಡಬೇಕು. ಇವುಗಳಲ್ಲಿ ಸರ್ಕಾರಿ ಶಾಲೆಗಳನ್ನು ವಿಶೇಷವಾಗಿ ಸೇರಿಸಬೇಕು.
- ಈ ಸಾಮಾಜಿಕ ತಯಾರಿಯಲ್ಲಿ ಶಿಕ್ಷಕರ ಪಾತ್ರವೂ ಮುಖ್ಯವಾಗಿದೆ. ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಪೋಷಕರೊಂದಿಗೆ ಇಂತಹ ಸಭೆಗಳನ್ನು ಆಯೋಜಿಸಬೇಕು ಅದರಲ್ಲಿ ಮಾತೃಭಾಷೆಯ ಮಹತ್ವವನ್ನು ಕೇಸ್ ಸ್ಟಡೀಸ್ (ವಿಷಯ ಅಧ್ಯಯನ ಪದ್ಧತಿ) ಇತ್ಯಾದಿಗಳ ಮೂಲಕ ತಿಳಿಸಬೇಕು.
- ಉದ್ಯೋಗಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಲು ಬೀದಿ ನಾಟಕಗಳನ್ನು ಉಪಯೋಗಿಸಬಹುದಾಗಿದೆ. ಕಥೆಗಳನ್ನು ಹೆಣೆಯುವಾಗ

***ನಮ್ಮ ಸ್ವಂತ ಭಾಷೆಯಲ್ಲಿ ಓದಿದಾಗ...***

*ಶ್ರೀಯುತ ಜಿತೇಂದ್ರ ಕುಮಾರ್ ಸೋನಿ ಅವರು 2007 ರಲ್ಲಿ ರಾಜಸ್ಥಾನ ರಾಜ್ಯ ಸೇವಾ ಪರೀಕ್ಷೆಯನ್ನು ಮೊದಲ ಪ್ರಯತ್ನದಲ್ಲೇ ವಿಶೇಷವಾಗಿ ಹಿಂದಿ ಮಾಧ್ಯಮದಲ್ಲಿ ಯಶಸ್ವಿಯಾಗುವ ಮೂಲಕ ಅತ್ಯಂತ ಹೆಮ್ಮೆಯ ಸಾಧನೆಯನ್ನು ಮಾಡಿ, ಮೂರನೇ ಸ್ಥಾನದಲ್ಲಿ ಅತ್ಯಂತ ಉನ್ನತ ಹುದ್ದೆಯನ್ನು ಹೊಂದಿ ಜೀವನದಲ್ಲಿ ಗೌರವಪೂರ್ವಕ ಸ್ಥಾನವನ್ನು ಗಳಿಸಿದ್ದಾರೆ.*

*ಪ್ರಶ್ನೆ: ಹಿಂದಿ ಮಾಧ್ಯಮದಲ್ಲಿ ರಾಜಸ್ಥಾನ ರಾಜ್ಯ ಸೇವಾ ಪರೀಕ್ಷೆಗೆ ತಯಾರಿ ನಡೆಸಿ, ಯಶಸ್ಸನ್ನುಗಳಿಸಿರುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?*

*ಸೋನಿ: ಭಾಷಾ ಮಾಧ್ಯಮವು ನನ್ನ ದೃಷ್ಟಿಯಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡುವುದಿಲ್ಲ. ಯಾವ ಮಾಧ್ಯಮದಲ್ಲಿ ನಾವು ನಮ್ಮ ಮಾತುಗಳನ್ನು ಮತ್ತು ತಿಳುವಳಿಕೆಯನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸಬಹುದೋ, ಆ ಮಾಧ್ಯಮವು ನಮಗೆ ಉಪಯುಕ್ತ ಮತ್ತು ಸೂಕ್ತವಾಗಿದೆ. ಇತ್ತೀಚಿನ ಫಲಿತಾಂಶಗಳು ನೋಡಿದಾಗ ಹಿಂದಿ ಮಾಧ್ಯಮ ಎಂಬ ಪೂರ್ವಾಗ್ರಹವನ್ನು ಮುರಿಯುವಂತೆ ಭಾಸವಾಗುತ್ತಿದೆ.*

ವಿವಿಧ ಉದ್ಯೋಗಗಳು ಅಥವಾ ಪ್ರದೇಶಗಳಲ್ಲಿ ಮಾತೃಭಾಷೆಯ ಶಿಕ್ಷಣದ ಬಳಕೆಯನ್ನು ಗಮನದಲ್ಲಿಟ್ಟುಕೊಂಡು ಬರೆಯಬೇಕು (ಉದಾಹರಣೆಗೆ ಡಾಕ್ಟರ್, ಐಇಎಸ್ ಇತ್ಯಾದಿ) ಸ್ಥಳದಿಂದ ಸ್ಥಳಕ್ಕೆ (ಗ್ರಾಮ ಮತ್ತು ನಗರದ ಶಾಲೆಗಳು) ಜೊತೆಗೆ ಕೆಲವು NGO ಗಳ ಸಹಾಯವನ್ನು ಪಡೆಯಬಹುದಾಗಿದೆ.

- ಶಾಲಾ ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ನಿಭಾಯಿಸಲು ಅಸಮರ್ಥರಾಗುತ್ತಿದ್ದಾರೆ, ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ ಶಿಕ್ಷಣ ಸಿಗುತ್ತಿಲ್ಲ, ಶಿಕ್ಷಣಕ್ಕೆ ಮೂಲ ಸೌಕರ್ಯಗಳು ಲಭ್ಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವಂತೆ ಶಿಕ್ಷಕರನ್ನು ಪ್ರೋತ್ಸಾಹಿಸುವುದು ಶಾಲಾ ಆಡಳಿತ ಅಂದರೆ ಶಾಲೆಯ ಪ್ರಾಂಶುಪಾಲರ ಜವಾಬ್ದಾರಿಯಾಗುತ್ತದೆ, ಇದಕ್ಕಾಗಿ ಅಲ್ಲಿನ ಸಮುದಾಯದ ಸಹಾಯವನ್ನೂ ತೆಗೆದುಕೊಳ್ಳಬಹುದು. ಮುಖ್ಯೋಪಾಧ್ಯಾಯರು ಮಕ್ಕಳ ಜ್ಞಾನಾಭಿವೃದ್ಧಿಗಾಗಿ ಮಗು, ಶಿಕ್ಷಕ ಮತ್ತು ಸಮುದಾಯದ ನಡುವೆ ಸೇತುವೆಯಾಗಿ ಕೆಲಸ ಮಾಡಬೇಕು. ಈ ಕೆಲಸಕ್ಕಾಗಿ ಆಡಳಿತಾತ್ಮಕ ನೀತಿಗಳನ್ನು ಹೊಂದಿಕೊಳ್ಳುವಂತೆ ಮಾಡಿಕೊಳ್ಳಬೇಕಿದೆ.

***ಉದ್ಯೋಗದ ಆಯ್ಕೆ - 1***

*ಇಂದು ಮಾರುಕಟ್ಟೆಯ ಭಾಷೆ ಇಂಗ್ಲಿಷ್ ಆಗಿದೆ. ಭಾಷಾ ಜ್ಞಾನದ ಆಧಾರದ ಮೇಲೆಯೇ ಇಂಗ್ಲಿಷ್ ತಿಳಿದಿರುವ ಅಭ್ಯರ್ಥಿಗೆ ತ್ವರಿತವಾಗಿ ಉದ್ಯೋಗ ಸಿಗುತ್ತದೆ. ಸ್ಥಳೀಯ ಭಾಷೆ ಬಲ್ಲ ನುರಿತ ಅಭ್ಯರ್ಥಿ ಉದ್ಯೋಗದ ಓಟದಲ್ಲಿ ಹಿಂದೆ ಉಳಿದಿದ್ದಾರೆ. ಆದರೆ ಯಾಕೆ? ಇಂದು, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇಂಗ್ಲಿಷ್ ಅರ್ಥಮಾಡಿಕೊಳ್ಳುವ ಮಾಧ್ಯಮವಾಗಿದೆ. ಸರ್ಕಾರವು ಉದ್ಯೋಗಕ್ಕಾಗಿ ತಿಳುವಳಿಕೆ ಮಾಧ್ಯಮದ ದಿಕ್ಕಿನಲ್ಲಿ ಯೋಚಿಸಬೇಕು ಮತ್ತು ಅದರ ಕೆಲವು ನೀತಿಗಳಲ್ಲಿ ಬದಲಾವಣೆಗಳನ್ನು ತರಬೇಕಾಗುತ್ತದೆ. ಇಂದು ಇಡೀ ವಿಶ್ವದಲ್ಲಿ ಆರ್ಥಿಕ ಹಿಂಜರಿತದ ಕಾಲವಿದೆ, ಇದರಿಂದ ಕೇವಲ ಇಂಗ್ಲಿಷ್ ಓದುವುದರಿಂದ ಉದ್ಯೋಗ ಸಿಗುವುದಿಲ್ಲ ಎಂಬ ತಿಳುವಳಿಕೆ ಜನರಲ್ಲಿ ಮೂಡಿದೆ. ಅವರು ಸ್ಥಳೀಯ ಭಾಷೆಗಳಲ್ಲಿ ಉದ್ಯೋಗದ ಸಾಧ್ಯತೆಯ ಬಗ್ಗೆ ಆಲೋಚಿಸುತ್ತಿದ್ದಾರೆ. ಇದನ್ನು ವಿಶ್ವಾಸವಾಗಿ ಮೂಡಿಸುವುದು ಸರ್ಕಾರದ ಮುಂದಿರುವ ಸವಾಲು.*

*— ಒಬ್ಬ ಅಭ್ಯರ್ಥಿ.*

## ಆಡಳಿತಾತ್ಮಕ ಸಿದ್ಧತೆ

- ಸರಿಯಾದ ಅರ್ಥದಲ್ಲಿ ಹೇಳಬೇಕೆಂದರೆ, ಹಳ್ಳಿ-ಹಳ್ಳಿಗೂ ಮತ್ತು ಪ್ರತಿ ಮಗುವಿನ ಮನೆಯ ಬಾಗಿಲಿಗೆ ಶಿಕ್ಷಣವನ್ನು ತಲುಪಿಸಲು ನಾವು ರಾಜ್ಯ ಮಟ್ಟದಲ್ಲಿ ಸಾಕಷ್ಟು ಸಿದ್ಧತೆಗಳನ್ನು ಮಾಡಬೇಕಾಗಿದೆ. ಶಿಕ್ಷಣವು ರಾಜ್ಯ ಹಾಗೂ ಕೇಂದ್ರದ ಜಂಟಿ ಜವಾಬ್ದಾರಿಯಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ನೀಡಲು, ರಾಜ್ಯವು ಪ್ರತಿಯೊಂದು ಹಂತದಲ್ಲೂ ಅಂದರೆ ಸಮುದಾಯ, ಆಡಳಿತ, ಶಾಲಾ ಆಡಳಿತ, ಶಿಕ್ಷಕರು ಇತ್ಯಾದಿ ಇವುಗಳ ಮಧ್ಯೆ ಹೊಂದಾಣಿಕೆಮಾಡಿ ಸಾಕಷ್ಟು ಸಿದ್ಧತೆಗಳನ್ನು ಮಾಡಬೇಕಾಗಿದೆ.
- ಈ ಸಿದ್ಧತೆಯಲ್ಲಿ ಕೇಂದ್ರದ ಪಾತ್ರ ಅತ್ಯಂತ ಪ್ರಮುಖವಾಗಿದೆ. ರಾಜ್ಯಗಳೊಂದಿಗೆ

ಸಮನ್ವಯ ಸಾಧಿಸುವುದು ಕೇಂದ್ರದ ಜವಾಬ್ದಾರಿ. ಇದಕ್ಕಾಗಿ ಶಿಕ್ಷಕರು, ಸಮುದಾಯ, ಪೋಷಕರೊಂದಿಗೆ ವಿಚಾರ ಸಂಕಿರಣ, ಸಂವಾದ, ಚರ್ಚೆಗಳನ್ನು ನಡೆಸಬೇಕಾಗುತ್ತದೆ. ಇದರ ನಂತರ, ಕೇಂದ್ರವು ಈ ಸಿದ್ಧತೆಯನ್ನು ಜಾರಿಗೆ ತರಬೇಕಾತ್ತದೆ. ಶಿಕ್ಷಕರು ಮತ್ತು ತರಬೇತುದಾರರು ರಾಜ್ಯಗಳ ಸಹಯೋಗದೊಂದಿಗೆ ಸಿದ್ಧರಾಗಿರಬೇಕು. ಇದರಿಂದ ಮಗುವಿಗೆ ತನ್ನದೇ ಆದ ಭಾಷೆಯಲ್ಲಿ ಮಾತನಾಡಲು, ಬರೆಯಲು, ಓದಲು ಮತ್ತು ಸಂವಹನ ಮಾಡಲು ಅವಕಾಶ ಸಿಗುತ್ತದೆ.

- ಈಗ ಶಿಕ್ಷಣ ಹಕ್ಕು ಕಾಯಿದೆ ಜಾರಿಯಾಗಿದೆ. ಇದರ ಅಡಿಯಲ್ಲಿ ಶಾಲೆ ಸಮಿತಿಗಳಿಗೆ ಕೆಲವು ಅಧಿಕಾರಗಳನ್ನು ನೀಡಬೇಕಾಗಿದೆ. ಶಾಲಾ ನಿರ್ವಹಣಾ ಸಮಿತಿಗಳಿಂದ ಸಮುದಾಯ ಭಾಗವಹಿಸುವಿಕೆಯನ್ನು ಸಹ ಖಚಿತಪಡಿಸಿಕೊಳ್ಳಬೇಕು. ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005 ಹೇಳುವುದೇನೆಂದರೆ ಈ ರೀತಿ ಮಾಡುವುದರಿಂದ ಶಾಲೆಯ ಆಡಳಿತಕ್ಕೆ ಹೊಂದಾಣಿಕೆಯ ಸಮಸ್ಯೆ ಇರುವುದಿಲ್ಲ ಎಂದಿದೆ.
- ಅವರು ಸ್ಥಳೀಯವಾಗಿ ಪಠ್ಯ ವಸ್ತುವನ್ನು ತಯಾರು ಮಾಡುವಲ್ಲಿ ಪಾತ್ರವಹಿಸಬಹುದು. ಇದನ್ನು ಸಹಾ ವಿಚಾರ ಮಾಡಬೇಕಿದೆ. ಇದು ಉತ್ತಮ ವಿಧಾನವಾಗಿರಬಹುದು.
- ಶಿಕ್ಷಣ ಹಕ್ಕು ಕಾಯಿದೆ ಜಾರಿಯಾದ ನಂತರ ಲಕ್ಷಾಂತರ ಶಿಕ್ಷಕರನ್ನು ಮರುಸೇರ್ಪಡೆ ಮಾಡಿಕೊಳ್ಳುವ ಅವಶ್ಯಕತೆ ಉಂಟಾಗಿದೆ. ಭಾರೀ ಸಂಖ್ಯೆಯ ಶಿಕ್ಷಕರ ಸೇರ್ಪಡೆಯಿಂದಾಗಿ ತರಭೇತಿ ಸಂಸ್ಥೆಗಳನ್ನೂ ತೆರೆಯಬೇಕಾಗುತ್ತದೆ. ಇದರ ಬಗ್ಗೆ ವಿಚಾರಮಾಡುವ ಅವಶ್ಯಕತೆ ಇದೆ.
- ಮಕ್ಕಳ ಭಾಷೆಯಲ್ಲಿ ಪುಸ್ತಕಗಳ ಲಭ್ಯತೆಯ ಬಗ್ಗೆ ಕ್ರಿಯಾ ಯೋಜನೆ ರೂಪಿಸಬೇಕಿದೆ.
- ಈ ನಿಟ್ಟಿನಲ್ಲಿ ರಾಜ್ಯ ಸರಕಾರ ಹಾಗೂ ಶಿಕ್ಷಕರ ಜವಾಬ್ದಾರಿ ದೊಡ್ಡದು. ಮಕ್ಕಳಿಗೆ ಅವರ ಭಾಷೆಯಲ್ಲಿ ಪಠ್ಯಪುಸ್ತಕ ಸಿದ್ಧಪಡಿಸಲು ಬಹಳ ಸಮಯ ಹಿಡಿಯುವ ಸಾಧ್ಯತೆ ಇದೆ. ಈ ಸುದೀರ್ಘ ಅವಧಿಯಲ್ಲಿ, ರಾಜ್ಯ ಸರ್ಕಾರಗಳು

**_ಉನ್ನತ ಶಿಕ್ಷಣ: ಒಂದು ಸವಾಲು_**

*ಮಾತೃಭಾಷೆಯಲ್ಲಿ ಶಿಕ್ಷಣ ಪಡೆದು ಉನ್ನತ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯಕ್ಕೆ ದಾಖಲಾತಿ ಪಡೆದಾಗ ಮಾತೃಭಾಷೆಯಲ್ಲಿ ಶಿಕ್ಷಣ ನೀಡಲು ವಿಶ್ವವಿದ್ಯಾಲಯಕ್ಕೆ ಸೌಲಭ್ಯವಿದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಯಾವುದೇ ಸೌಲಭ್ಯಗಳಿಲ್ಲದಿದ್ದರೆ ಮಗುವಿಗೆ ತನ್ನ ಮಾತೃಭಾಷೆಯಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವ ಹಕ್ಕು ಇದೆಯೇ? ಹಾಗಿದ್ದಲ್ಲಿ, ಅವರ ಉತ್ತರ ಪ್ರತಿಗಳನ್ನು ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಸರಿ ಸಮಾನವಾಗಿ ಮೌಲ್ಯಮಾಪನ ಮಾಡಲಾಗಿದೆಯೇ? ಪಿಎಚ್.ಡಿ.ಯ ಅವರ ಪ್ರಬಂಧವನ್ನು ಅವರ ಮಾತೃಭಾಷೆಯಲ್ಲಿ ಬರೆಯಬಹುದೇ? ಉನ್ನತ ಶಿಕ್ಷಣದಲ್ಲಿ ತಿಳುವಳಿಕೆಯ ಭಾಷಾ ಮಾಧ್ಯಮದ ಸಮಸ್ಯೆ ನಮಗೆ, ವಿಶ್ವವಿದ್ಯಾಲಯಗಳಿಗೆ ಹಾಗೂ ಇಡೀ ದೇಶಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ.*

ಮತ್ತು ಶಿಕ್ಷಕರು ಈ ನಿಟ್ಟಿನಲ್ಲಿ ಸಂವಾದವನ್ನು ನಡೆಸಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದ ಅಭ್ಯಂತರವೂ ಇರುವುದಿಲ್ಲ. ಮೂಲಭೂತವಾಗಿ ಇದು ರಾಜಕೀಯ ಮತ್ತು ಆಡಳಿತಾತ್ಮಕ ನಿರ್ಧಾರವಾಗಿದೆ.

- ನಮಗೆ ಇಲ್ಲಿ ಹಲವು ಭಾಷೆಗಳಿವೆ. ಆದ್ದರಿಂದ ಮಗುವಿಗೆ ಸಿದ್ಧಪಡಿಸುವ ಪಠ್ಯಕ್ರಮದಲ್ಲಿ ಆಯಾ ಭಾಷೆಗಳ ಜನಪದ ಕಥೆಗಳು, ಜನಪದ ಹಾಡುಗಳು ಮತ್ತು ಜಾನಪದ ಕಲೆಗಳನ್ನು ಇತ್ಯಾದಿಗಳನ್ನು ಸೇರಿಸಬೇಕಾಗುತ್ತದೆ. ಪ್ರತ್ಯೇಕ ಭಾಷೆಯ ಶ್ರೇಷ್ಠ ಬರಹಗಾರರು ನಮ್ಮಲ್ಲಿದ್ದಾರೆ. ಅವರ ಸಹಾಯದಿಂದ ಅಧ್ಯಯನ ಸಾಮಗ್ರಿಗಳನ್ನು ಸಹ ತಯಾರಿಸಬಹುದು.
- ತಿಳುವಳಿಕೆಯ ಭಾಷೆಯ ದೃಷ್ಟಿಯಿಂದ ಅಸ್ತಿತ್ವದಲ್ಲಿರುವ ಶಿಕ್ಷಕರ-ತರಭೇತಿ ಕಾರ್ಯಕ್ರಮಗಳ ಪಠ್ಯಕ್ರಮವನ್ನು ಬದಲಾಯಿಸಬೇಕಾಗಿದೆ.
- ಭಾಷಾ ಸಂಶೋಧನೆಯಲ್ಲಿ ನಮ್ಮದೇ ಭಾಷೆಯಲ್ಲಿ ಮತ್ತು ಹಿಂದಿಯಲ್ಲಿ ಉತ್ತಮ ಸಂಶೋಧನೆ ನಡೆಯಬೇಕಾದ ಅವಶ್ಯಕತೆ ಇದೆ.
- ಹಿಂದಿ ಮತ್ತು ಇನ್ನುಳಿದ ಭಾರತೀಯ ಭಾಷೆಗಳಲ್ಲಿ ಮೌಲ್ಯಯುತವಾಗಿ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಕಲೆ ಇತ್ಯಾದಿ ಇನ್ನುಳಿದ ಪುಸ್ತಕಗಳನ್ನು ಬರೆಯಲು ಒತ್ತು ನೀಡಬೇಕು. ಈ ಕಾರ್ಯಕ್ಕೆ ವಿಶ್ವವಿದ್ಯಾಲಯಗಳನ್ನೂ ಸಹಾ ಸಂಪರ್ಕಿಸಬೇಕಿದೆ.
- ಇಂಗ್ಲಿಷ್‌ನಿಂದ ಹಿಂದಿ ಮತ್ತು ಇತರ ಭಾರತೀಯ ಭಾಷೆಗಳಿಗೆ ಉಲ್ಲೇಖ ಪುಸ್ತಕಗಳ/ ಪಠ್ಯಪುಸ್ತಕಗಳ ಅನುವಾದ ಮಾಡಬೇಕಿದೆ ಹಾಗೂ ದ್ವಿಭಾಷೆಗಳ ಮತ್ತು ಬಹುಭಾಷೆಗಳ ನಿಘಂಟುಗಳ ತಯಾರಿಕೆ ಒತ್ತು ಕೊಡಬೇಕಿದೆ..
- 1 ರಿಂದ 5 ನೇ ತರಗತಿಗಳಲ್ಲಿ ಕ್ರಮವಾಗಿ ಮಕ್ಕಳ ಭಾಷೆಯಲ್ಲಿ ಕೆಲವು ವಿಷಯಗಳನ್ನು ಓದುವಿಕೆ ಮತ್ತು ಬೋಧನೆಗೆ ಒತ್ತು ನೀಡಬೇಕಿದೆ. ಇದಕ್ಕಾಗಿ, ಕೆಲವು ಖಾಸಗಿ ಶಾಲೆಗಳೊಂದಿಗೆ ಅವರ ತಿಳುವಳಿಕೆಗೆ ಬಲವಾದ ಅಡಿಪಾಯವನ್ನು ನೀಡಲು ಸಂವಾದವನ್ನು ಸ್ಥಾಪಿಸಬೇಕಿದೆ.
- ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಭಾಷೆಗಳು, ಸಮಾಜ ವಿಜ್ಞಾನ, ವಿಜ್ಞಾನ, ಇತ್ಯಾದಿಗಳ ಶಿಕ್ಷಣಕ್ಕೆ ಸಂಬಂಧಿಸಿದ ಕೋರ್ಸ್‌ಗಳನ್ನು (ಪಠ್ಯಕ್ರಮ) ನಡೆಸಲು ವಿಚಾರ ಮಾಡಬೇಕಿದೆ. ಈ ಕೋರ್ಸ್‌ನಲ್ಲಿ (ಪಠ್ಯಕ್ರಮದಲ್ಲಿ) ಒಬ್ಬರ ಸ್ವಂತ ಭಾಷೆಯಲ್ಲಿ ವಿಷಯಗಳನ್ನು ತಿಳಿಯುವ ಮಹತ್ವದ ಬಗ್ಗೆ ವಿಶೇಷ ಒತ್ತು ಕೊಡಬೇಕಿದೆ.

***ಉದ್ಯೋಗದ ಸವಾಲು-2***

*ದೆಹಲಿಯ ವಾಯುವ್ಯ ಜಿಲ್ಲೆಯಲ್ಲಿ ಏಷ್ಯಾದ ಅತ್ಯಂತ ದೊಡ್ಡದಾದ ತರಕಾರಿ ಮಾರುಕಟ್ಟೆಯ ಆಜಾದ್‌ಪುರದಿಂದ ರಸ್ತೆಯುದ್ದಕ್ಕೂ ಜಹಾಂಗೀರ್‌ಪುರಿ ಎಂಬ ವಿಸ್ತಾರವಾದ ವಸತಿ ಕಾಲೋನಿ ಇದೆ. ಚಕ್ರವರ್ತಿ ಜಹಾಂಗೀರ್‌ನ ರಾಜನ ಮನಸ್ಥಿತಿ, ಇಲ್ಲಿ ವಾಸಿಸುವ ಪ್ರತಿಯೊಬ್ಬ ನಿವಾಸಿಗಳ ನಡವಳಿಕೆಯಲ್ಲಿ ಪ್ರತಿಫಲಿಸುತ್ತದೆ. ಕಾಲೋನಿಯ ಒಂದು ತುದಿಯಲ್ಲಿ ಒಣಗುತ್ತಿರುವ ಅಳಿವಿನ ಅಂಚಿನಲ್ಲಿರುವ ಭಾಲ್ಸ್ವಾ ಸರೋವರ ಮತ್ತು ಇನ್ನೊಂದು ಬದಿಯಲ್ಲಿ ಈ ಊರಿನ ಜನರು ವಾಸಿಸುವ ಒಂದಲ್ಲ ಹಲವು ಸರೋವರಗಳಿವೆ. ಅದೇ ಕಾಲೋನಿಯಲ್ಲಿ ಕೈಗಾರಿಕಾ ತರಭೇತಿ ಸಂಸ್ಥೆ (ಐಟಿಐ) ಸಹ ಇದೆ, ಇದು ಕೊಳಾಯಿ, ನೂಲುವ, ಡೈಯಿಂಗ್, ಫಿಟ್ಟರ್, ಪ್ರಿಂಟಿಂಗ್‌ನಂತಹ ವಿವಿಧ ವೃತ್ತಿಪರ ಕೌಶಲ್ಯಗಳಲ್ಲಿ ತರಬೇತಿಯನ್ನು ನೀಡುತ್ತದೆ. ಒಂದು ಮಾತು ಈ ಕಾಲೋನಿಯ ಅಂಚಿನಲ್ಲಿನೆಲೆಸಿದೆ - 'ಅಯೋಧ್ಯೆ ಟೆಕ್ಸ್‌ಟೈಲ್ಸ್ ಮತ್ತು ಐ.ಟಿ.ಐ. ಇವೆರಡರ ನಡುವೆ ವಿಚಿತ್ರ ಸಂಬಂಧವಿದೆ.*

*ಈ ಗಿರಣಿಯಲ್ಲಿ ಬಟ್ಟೆ ತಯಾರಿಸಿ ಅದರ ಮೇಲೆ ಮುದ್ರಿಸುವ ಕೆಲಸ ನಡೆಯುತ್ತಿತ್ತು. ಈ ಕೆಲಸದ ತರಭೇತಿಗೆ ಸಂಬಂಧಿಸಿದ ಕೆಲಸ ನಡೆಯುತ್ತಿತ್ತು. ಈ ಕೆಲಸಕ್ಕೆ ಸಂಬಂಧಿಸಿದ ತರಭೇತಿ ಕೋರ್ಸ್‌ಗಳು, ಐ.ಟಿ.ಐ. ನಾನು ಒಳಗಿದ್ದೆ ಅಚ್ಚರಿಯ ಸಂಗತಿ ಎಂದರೆ ಇಲ್ಲಿಂದ ತರಭೇತಿ ಪಡೆದ ಯುವಕರಿಗೆ ಈ ಗಿರಣಿಯಲ್ಲಿ ಕೆಲಸ ನೀಡದೆ ತರಭೇತಿ ಪಡೆಯದವರನ್ನು ಇಟ್ಟುಕೊಂಡಿದ್ದಾರೆ. ಬಹುಶಃ ತರಭೇತಿ ಪಡೆದ ಕಾರ್ಮಿಕರಿಗೆ ಹೆಚ್ಚಿನ ಕೂಲಿ ನೀಡಬೇಕಾಗಿರುವುದರಿಂದ ಅವರನ್ನು ನೇಮಿಸಿಕೊಳ್ಳುವುದಿಲ್ಲ ಎಂಬ ಆಲೋಚನೆ ಎಲ್ಲರ ಮನದಲ್ಲಿ ಮೂಡಿದ್ದು, ಗಿರಣಿ ಕಾರ್ಮಿಕರು ಐಟಿಐ ಪ್ರಾಧ್ಯಾಪಕರು ಹಾಗೂ ಪ್ರಶಿಕ್ಷಣಾರ್ಥಿಗಳೊಂದಿಗೆ ಸಂವಾದ ನಡೆಸಿದಾಗ ಸ್ಪಷ್ಟವಾಯಿತು. ಸಂಸ್ಥೆಯಲ್ಲಿನ ಸಂಪೂರ್ಣ ಪ್ರಕ್ರಿಯೆಯ ಮಾಹಿತಿಯನ್ನು ಇಂಗ್ಲಿಷ್ ಅಥವಾ ಪ್ರಮಾಣಿತ ಹಿಂದಿಯಲ್ಲಿ ನೀಡಲಾಗಿದೆ. ಮಿಲ್‌ನ ಹಳೆಯ ಕೆಲಸಗಾರರು ಸ್ಥಳೀಯ ಭಾಷೆಯ ಭಾಷೆಯನ್ನು ಬಳಸುತ್ತಿದ್ದರು, ಅದು ಸಂಸ್ಥೆಯಿಂದ ಹೊರಬಂದ ಯುವಕರಿಗೆ ಅರ್ಥವಾಗಲಿಲ್ಲ. ಅಂತಿಮವಾಗಿ ಕೆಲಸಗಾರರ ಸ್ಥಳೀಯ ತಾಂತ್ರಿಕ ಪರಿಭಾಷೆಯನ್ನು ಪಠ್ಯಕ್ರಮಕ್ಕೆ ಸೇರಿಸಲಾಯಿತು. ಕೇವಲ ಒಂದು ಕೋರ್ಸ್ ಅಲ್ಲ, ಇತರ ಕೋರ್ಸ್‌ಗಳಲ್ಲಿ ಈ ಪ್ರಯತ್ನವನ್ನು ಮಾಡಲಾಗಿದ್ದು, ಈಗ ಸ್ಥಳೀಯ ಜನರಿಗೆ ಗಿರಣಿಗಳಲ್ಲಿ ಕೆಲಸ ಸಿಗುವುದು*

*ಒಬ್ಬ ಅಭ್ಯರ್ಥಿ*

# ಅನುಬಂಧ-1
## ವಿವಿಧ ರಾಜ್ಯಗಳಲ್ಲಿ ವಿಭಿನ್ನ ಮಾಧ್ಯಮ ಭಾಷೆಗಳು

| ಕ್ರಮ ಸಂಖ್ಯೆ | ರಾಜ್ಯ | ಪ್ರಾಥಮಿಕ | ಮಾಧ್ಯಮಿಕ | ಉನ್ನತ |
|---|---|---|---|---|
| 1 | ಆಂಧ್ರ ಪ್ರದೇಶ | ತೆಲುಗು, ಉರ್ದು, ಒಡಿಯ, ಆಂಗ್ಲ ಹಿಂದಿ, ಮರಾಠಿ ಕನ್ನಡ, ತಮಿಳು | ತೆಲುಗು, ಉರ್ದು, ಒಡಿಯ, ಆಂಗ್ಲ ಹಿಂದಿ, ಮರಾಠಿ ಕನ್ನಡ, ತಮಿಳು | ತೆಲುಗು, ಉರ್ದು, ಒಡಿಯ, ಆಂಗ್ಲ ,ಹಿಂದಿ, ಮರಾಠಿ ಕನ್ನಡ, ತಮಿಳು |
| 2 | ಅರುಣಾಚಲ ಪ್ರದೇಶ | ಆಂಗ್ಲ, ಹಿಂದಿ | ಆಂಗ್ಲ | ಆಂಗ್ಲ |
| 3 | ಅಸ್ಸಾಂ | ಅಸ್ಸಾಮಿಯ, ಬಾಂಗ್ಲಾ, ಬೋಡು, ಆಂಗ್ಲ | ಅಸ್ಸಾಮಿಯ, ಬಾಂಗ್ಲಾ, ಬೋಡು, ಆಂಗ್ಲ, ಹಿಂದಿ, ಇತರೆ | ಅಸ್ಸಾಮಿಯ, ಬಾಂಗ್ಲಾ, ಬೋಡು, ಆಂಗ್ಲ, ಹಿಂದಿ, ಇತರೆ |
| 4 | ಬಿಹಾರ್ | ಹಿಂದಿ, ಉರ್ದು, ಸಂಸ್ಕೃತ, ಆಂಗ್ಲ, | ಆಂಗ್ಲ,ಹಿಂದಿ, ಸಂಸ್ಕೃತ, ಉರ್ದು | ಆಂಗ್ಲ,ಹಿಂದಿ, ಸಂಸ್ಕೃತ, ಉರ್ದು |
| 5 | ಛತ್ತೀಸ್ಗಢ್ | ಹಿಂದಿ. ಇತರೆ | ಹಿಂದಿ, ಇತರೆ | ಹಿಂದಿ, ಇತರೆ |
| 6 | ಗುಜರಾತ್ | ಗುಜರಾತಿ | ಆಂಗ್ಲ, ಗುಜರಾತಿ, ಹಿಂದಿ. | ಆಂಗ್ಲ, ಗುಜರಾತಿ, ಹಿಂದಿ. |
| 7 | ಗೋವಾ | ಆಂಗ್ಲ, ಕೊಂಕಣಿ, ಕನ್ನಡ, ಮರಾಠಿ, ಉರ್ದು, ಕನ್ನಡ | ಆಂಗ್ಲ, ಮರಾಠಿ | ಆಂಗ್ಲ, ಮರಾಠಿ |
| 8 | ಹಿಮಾಚಲ್ ಪ್ರದೇಶ್ | ಆಂಗ್ಲ, ಹಿಂದಿ | ಆಂಗ್ಲ, ಹಿಂದಿ | ಆಂಗ್ಲ, ಹಿಂದಿ |
| 9 | ಹರಿಯಾಣ | ಆಂಗ್ಲ, ಹಿಂದಿ, | ಆಂಗ್ಲ, ಹಿಂದಿ, ಸಂಸ್ಕೃತ | ಆಂಗ್ಲ, ಹಿಂದಿ, ಸಂಸ್ಕೃತ |
| 10 | ಜಮ್ಮು ಮತ್ತು ಕಾಶ್ಮೀರ | ಡೋಗ್ರಿ, ಆಂಗ್ಲ, ಹಿಂದಿ ಕಾಶ್ಮೀರಿ, ಉರ್ದು | ಡೋಗ್ರಿ, ಆಂಗ್ಲ, ಹಿಂದಿ ಕಾಶ್ಮೀರಿ, ಉರ್ದು | ಡೋಗ್ರಿ, ಆಂಗ್ಲ, ಹಿಂದಿ ಕಾಶ್ಮೀರಿ, ಉರ್ದು |

| | | | | |
|---|---|---|---|---|
| 11 | ಜಾರ್ಖಂಡ್ | ಆಂಗ್ಲ, ಹಿಂದಿ, ಸಂಸ್ಕೃತ | ಬಾಂಗ್ಲಾ, ಆಂಗ್ಲ, ಹಿಂದಿ, ಸಂಸ್ಕೃತ | ಬಾಂಗ್ಲಾ, ಆಂಗ್ಲ, ಹಿಂದಿ, ಸಂಸ್ಕೃತ |
| 12 | ಕರ್ನಾಟಕ | ಕನ್ನಡ, ಆಂಗ್ಲ, ಹಿಂದಿ, ಮರಾಠಿ, ತಮಿಳು, ತೆಲುಗು, ಉರ್ದು, ಮಲಯಾಳಂ, ಸಂಸ್ಕೃತ, ಅರಬ್ಬಿ | ಕನ್ನಡ, ಆಂಗ್ಲ, ಹಿಂದಿ, ಮರಾಠಿ, ತಮಿಳು, ತೆಲುಗು, ಉರ್ದು, ಮಲಯಾಳಂ, ಸಂಸ್ಕೃತ, ಅರಬ್ಬಿ | ಕನ್ನಡ, ಆಂಗ್ಲ, ಹಿಂದಿ, ಮರಾಠಿ, ತಮಿಳು, ತೆಲುಗು, ಉರ್ದು, ಮಲಯಾಳಂ, ಸಂಸ್ಕೃತ, ಅರಬ್ಬಿ |
| 13 | ಕೇರಳ | ಮಲಯಾಳಂ, ಆಂಗ್ಲ, ತಮಿಳು, ಕನ್ನಡ, | ಮಲಯಾಳಂ, ಆಂಗ್ಲ, ತಮಿಳು, ಕನ್ನಡ, | ಮಲಯಾಳಂ, ಆಂಗ್ಲ, ತಮಿಳು, ಕನ್ನಡ, |
| 14 | ಮಧ್ಯ ಪ್ರದೇಶ | ಆಂಗ್ಲ, ಹಿಂದಿ, ಉರ್ದು , ಮರಾಠಿ | ಆಂಗ್ಲ, ಹಿಂದಿ, ಉರ್ದು , ಮರಾಠಿ | ಆಂಗ್ಲ, ಹಿಂದಿ, ಉರ್ದು |
| 15 | ಮಹಾರಾಷ್ಟ್ರ | ಮರಾಠಿ, ಹಿಂದಿ | ಆಂಗ್ಲ, ಮರಾಠಿ, ಹಿಂದಿ | ಆಂಗ್ಲ, ಮರಾಠಿ, ಹಿಂದಿ |
| 16 | ಮಣಿಪುರ | ಆಂಗ್ಲ, ಹಿಂದಿ, ಮಣಿ ಪುರಿ | ಆಂಗ್ಲ, ಹಿಂದಿ, ಮಣಿ ಪುರಿ | ಆಂಗ್ಲ, ಹಿಂದಿ, ಮಣಿ ಪುರಿ |
| 17 | ಮೇಘಾಲಯ | ಆಂಗ್ಲ , ಘಾರೋ, ಖಾಸಿ | ಆಂಗ್ಲ | ಆಂಗ್ಲ |
| 18 | ಮಿಜೋರಾಂ | ಮಿಜೋ, ಆಂಗ್ಲ | ಮಿಜೋ, ಆಂಗ್ಲ | ಮಿಜೋ, ಆಂಗ್ಲ |
| 19 | ನಾಗಾಲ್ಯಾಂಡ್ | ಅಂಗಾಮಿ, ಆವೋ, ಆಂಗ್ಲ, ಹಿಂದಿ, ಕೋನ್ಯಕ್, ಲೋಥಾ, ಸೇಮಾ | ಅಂಗಾಮಿ, ಆವೋ, ಆಂಗ್ಲ, ಹಿಂದಿ, ಕೋನ್ಯಕ್, ಲೋಥಾ, ಸೇಮಾ | ಅಂಗಾಮಿ, ಆವೋ, ಆಂಗ್ಲ, ಹಿಂದಿ, ಕೋನ್ಯಕ್, ಲೋಥಾ, ಸೇಮಾ |
| 20 | ಒಡಿಸ್ಸಾ | ಆಂಗ್ಲ, ಉಡಿಯಾ | ಆಂಗ್ಲ, ಹಿಂದಿ , ಉಡಿಯಾ | ಆಂಗ್ಲ, ಹಿಂದಿ , ಉಡಿಯಾ, ಸಂಸ್ಕೃತ |
| 21 | ಪಂಜಾಬ | ಆಂಗ್ಲ, ಹಿಂದಿ, ಪಂಜಾಬಿ | ಆಂಗ್ಲ ,ಹಿಂದಿ, ಪಂಜಾಬಿ | ಆಂಗ್ಲ, ಹಿಂದಿ, ಪಂಜಾಬಿ |
| 22 | ರಾಜ ಸ್ಥಾನ | ಹಿಂದಿ | ಹಿಂದಿ | ಹಿಂದಿ |

| | | | | |
|---|---|---|---|---|
| 23 | ಸಿಕ್ಕಿಂ | ಆಂಗ್ಲ | ಆಂಗ್ಲ | ಆಂಗ್ಲ |
| 24 | ತ್ರಿಪುರಾ | ಬಾಂಗ್ಲಾ, ಕೋಕ್ ಬೊರೋಕ್, ಆಂಗ್ಲ | ಬಾಂಗ್ಲಾ, ಆಂಗ್ಲ | ಬಾಂಗ್ಲ, ಆಂಗ್ಲ |
| 25 | ತಮಿಳು ನಾಡು | ಆಂಗ್ಲ , ತಮಿಳು | ತಮಿಳು , ತೆಲುಗು. ಮಲಯಾಳಂ. ಉರ್ದು, ಕನ್ನಡ | ತಮಿಳು , ತೆಲುಗು. ಮಲಯಾಳಂ. ಉರ್ದು,ಕನ್ನಡ |
| 26 | ಉತ್ತರಾ ಖಾಂಡ | ಹಿಂದಿ | ಆಂಗ್ಲ ಹಿಂದಿ ಉರ್ದು | ಆಂಗ್ಲ ಹಿಂದಿ ಉರ್ದು |
| 27 | ಉತ್ತರ ಪ್ರದೇಶ | ಹಿಂದಿ | ಆಂಗ್ಲ ಹಿಂದಿ, ಸಂಸ್ಕೃತ | ಆಂಗ್ಲ ಹಿಂದಿ, ಸಂಸ್ಕೃತ |
| 28 | ಪಶ್ಚಿಮ ಬಂಗಾಳ | ಬಾಂಗ್ಲಾ, | ಬಾಂಗ್ಲಾ, ಹಿಂದಿ, ಆಂಗ್ಲ, ಉರ್ದು, ಉಡಿಯಾ, ತಮಿಳು, ತೆಲುಗು, ಗುಜರಾತಿ, ತಿಬ್ಬತನ್, ನೇಪಾಲಿ | ಬಾಂಗ್ಲಾ,, ಹಿಂದಿ, ಆಂಗ್ಲ, ಉರ್ದು, ಉಡಿಯಾ, ತಮಿಳು, ತೆಲುಗು, ಗುಜರಾತಿ, ತಿಬ್ಬತನ್, ನೇಪಾಲಿ |
| 29 | ಅಂಡಮಾನ್ ಮತ್ತು ನಿಕೋಬಾರ್ | ಬಾಂಗ್ಲಾ, ಆಂಗ್ಲ, ಹಿಂದಿ, ತಮಿಳು, ತೆಲುಗು | ಬಾಂಗ್ಲಾ, ಆಂಗ್ಲ, ಹಿಂದಿ, ತಮಿಳು, ತೆಲುಗು | ಬಾಂಗ್ಲಾ, ಆಂಗ್ಲ, ಹಿಂದಿ, ತಮಿಳು, ತೆಲುಗು |
| 30 | ಚಂಡೀಗಢ | ಆಂಗ್ಲ, ಹಿಂದಿ, ಪಂಜಾಬಿ | ಆಂಗ್ಲ, ಹಿಂದಿ, ಪಂಜಾಬಿ | ಆಂಗ್ಲ, ಹಿಂದಿ, ಪಂಜಾಬಿ |
| 31 | ದಾದ್ರಾ ಮತ್ತು ನಾಗರ ಹವೇಲಿ | ಆಂಗ್ಲ, ಗುಜರಾತಿ, ಹಿಂದಿ, ಮರಾಠಿ | ಆಂಗ್ಲ, ಗುಜರಾತಿ, ಹಿಂದಿ,ಮರಾಠಿ, ಸಂಸ್ಕೃತ | ಆಂಗ್ಲ, ಗುಜರಾತಿ, ಹಿಂದಿ, ಮರಾಠಿ, ಸಂಸ್ಕೃತ |
| 32 | ದಿಯು ಮತ್ತು ದಾಮನ್ | ಗುಜರಾತಿ, ಆಂಗ್ಲ | ಗುಜರಾತಿ, ಆಂಗ್ಲ | ಗುಜರಾತಿ, ಆಂಗ್ಲ |
| 33 | ದೆಹಲಿ | ಆಂಗ್ಲ, ಹಿಂದಿ, ಉರ್ದು | ಆಂಗ್ಲ, ಹಿಂದಿ, ಉರ್ದು | ಆಂಗ್ಲ, ಹಿಂದಿ, ಉರ್ದು |

| | | | | |
|---|---|---|---|---|
| 34 | ಲಕ್ಷದ್ವೀಪ | ಮಲಯಾಳಮ್ | ಆಂಗ್ಲ, ಮಲಯಾಳಮ್ | ಆಂಗ್ಲ, ಮಲಯಾಳಮ್ |
| 35 | ಪುದುಚ್ಚೇರಿ | ಆಂಗ್ಲ , ತಮಿಳು | ಆಂಗ್ಲ , ತಮಿಳು | ಆಂಗ್ಲ , ತಮಿಳು |

ಮೂಲ: ಇಂಪ್ಲಿಮೆಂಟೇಶನ್ ಆಫ್ ಥ್ರೀ ಲ್ಯೆಂಗ್ವೇಜ್ ಫಾರ್ಮುಲಾ ಇನ್ ಇಂಡಿಯನ್ ಸ್ಕೂಲ್ಸ್- ಎ ಸ್ಟಡಿ, ಭಾಷಾ ವಿಭಾಗ, ಎನ್. ಸಿ.ಇ.ಆರ್.ಟಿ, ದೆಹಲಿ, 2009, ಪುಟ 80-83

ಬಹಳ ಸಂತೋಷದ ವಿಷಯವೇನೆಂದರೆ, ಪ್ರಸ್ತುತ ಸಮಯದಲ್ಲಿ ಹೆಚ್ಚು ಆದಿವಾಸಿ ಭಾಷೆಗಳು ಮಾಧ್ಯಮ ಭಾಷೆಯ ರೂಪದಲ್ಲಿ ಬಳಸಲಾಗುತ್ತಿದೆ ಹಾಗೂ ಈ ಭಾಷೆಗಳಲ್ಲಿ ಪ್ರಾಥಮಿಕ ಸ್ತರದಲ್ಲಿಯೂ ಪಠ್ಯವಸ್ತುವನ್ನು ತಯಾರಿಸಲಾಗುತ್ತಿದೆ. ಭವಿಷ್ಯದಲ್ಲಿ ಮತ್ತು ಅಧಿಕ ಸಂಖ್ಯೆಯಲ್ಲಿ ಭಾರತೀಯ ಭಾಷೆಗಳ (ಆದಿವಾಸಿ ಪ್ರದೇಶ ಭಾಷೆಗಳ ಸಹಿತ) ಮಾಧ್ಯಮ ಭಾಷೆಯಾಗಿ ಪ್ರಯೋಗ ಮಾಡಬೇಕಿದೆ. ಇದೇ ಈ ಪುಸ್ತಕದ ಉದ್ದೇಶವಾಗಿದೆ.

# ಉಲ್ಲೇಖ


- ಶಿಕ್ಷಣ ಆಯೋಗದ ವರದಿ, 1964-66, ಶಿಕ್ಷಣ ಸಚಿವಾಲಯ, 1966.
- ರಾಷ್ಟ್ರೀಯ ಶಿಕ್ಷಾನೀತಿ 1968, ಶಿಕ್ಷಣ ಸಚಿವಾಲಯ.
- ಕ್ರಿಯಾ ಕಾರ್ಯಕ್ರಮ 1992ರಾಷ್ಟ್ರೀಯ ಶಿಕ್ಷಣ ನೀತಿ1986) ಶಿಕ್ಷಣ ವಿಭಾಗ, ಶಿಕ್ಷಣ ಮಂತ್ರಾಲಯ.
- ರಾಷ್ಟ್ರೀಯ ಪಠ್ಯಕ್ರಮದ ನೆಲೆಗಟ್ಟು ಶಾಲಾ ಶಿಕ್ಷಣ 2000, ಎನ್.ಸಿ.ಇ.ಆರ್.ಟಿ
- ರಾಷ್ಟ್ರೀಯ ಪಠ್ಯಕ್ರಮದ ನೆಲೆಗಟ್ಟು 2005, ಎನ್.ಸಿ.ಇ.ಆರ್.ಟಿ
- ಭಾರತೀಯ ಭಾಷೆಗಳ ಶಿಕ್ಷಣ, ಸ್ಥಾನ ಕಾಗದ1.3,2006, ಎನ್ ಸಿ ಇ ಆರ್ ಟಿ
- ಪಟ್ನಾಯಕ್. ಡಿ. ಪಿ. 1986, ಸ್ಟಡಿ ಆಫ್ ಲ್ಯಾಂಗ್ವೇಜ್, ರಿಪೋರ್ಟ್, ನವದೆಹಲಿ, ಎನ್ ಸಿ ಇ ಆರ್ ಟಿ
- ಗಾಂಧಿ, ಎಮ್. ಕೆ, ಹಿಂದ್ ಸ್ವರಾಜ್, ಭಾರತೀಯ ಮತ, 1909
- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಅಧಿಕಾರ ಅಧಿನಿಯಮ, 2009, ಕಾನೂನು ಮತ್ತು ನ್ಯಾಯ ಸಚಿವಾಲಯ(ವಿಧಾನ ವಿಭಾಗ), ಭಾರತ ಸರಕಾರ
- ಚೋಮ್ಸ್ಕಿ, ಎನ್. 1959. ರಿವ್ಯೂ ಆಫ್ ಸ್ಕಿನ್ನರ್ಸ್ ವರ್ಬಲ್ ಬಿಹೇವಿಯರ್, ಲ್ಯಾಂಗ್ವೇಜ್35.1:26-58
- ವೈಗೋಟ್ಸಕಿ, ಎಲ್. ಎಸ್.1978. ಮೈಂಡ್ ಇನ್ ಸೊಸೈಟಿ, ದ ಡೆವೆಲೊಪ್ಮೆಂಟ್ ಆಫ್ ಹಯ್ಯರ್ ಸೈಕಾಲಜಿಕಲ್ ಪ್ರಾಸೆಸ್, ಕೇಂಬ್ರಿಡ್ಜ್, ಮಾಸ್, ಹಾರ್ವರ್ಡ್ ಯೂನಿವರ್ಸಿಟಿ ಪ್ರೆಸ್
- ಕಪೂರ್, ಕೆ. (2009). ಲ್ಯಾಂಗ್ವೇಜ್ ಅಂಡ್ ಮೀಡಿಯಂ ಆಫ್ ಅಂಡರ್ಸ್ಟ್ಯಾಂಡಿಂಗ್. ಜರ್ನಲ್ ಆಫ್ ಇಂಡಿಯನ್ ಎಜುಕೇಷನ್, ವಾಲ್ಯೂಮ್ XXXV,ನಂಬರ್. 1. ನವದೆಹಲಿ: ಎನ್. ಸಿ. ಇ. ಆರ್. ಟಿ (ISSN:0972-5628)
- ಕಪೂರ್, ಕೆ. ಈ ಎಲ್ ಟಿ ಅಂಡ್ ಸೋಶಿಯಲ್ ಜಸ್ಟೀಸ್ ಇನ್ ಮಲ್ಟಿಲಿಂಗ್ವಲ್ ಕ್ಲಾಸ್ ರೂಮ್, ಬೆಬಿಲೋನಿಯ, ಟೆಮಾ 1, 2021, ಪುಟ.24
- ಭಾರತೀಯ ಭಾಷೆಗಳ ಶಿಕ್ಷಣ, ಸ್ಥಾನ ಕಾಗದ 1.3,2006, ಎನ್ ಸಿ ಇ ಆರ್ ಟಿ
- ಹೋಲ್ಟ್, ಜಾನ್. ಶಿಕ್ಷಾ ಕಿ ಬಜಾಯ್. ನ್ಯೂ ಬೇಲೆಂಟಾಯಿನ್ ಬುಕ್ಸ್, 1974.
- ಆಂಗ್ಲ ಶಿಕ್ಷಣ, ಸ್ಥಾನ ಕಾಗದ1.4.2006, ಎನ್. ಸಿ. ಇ. ಆರ್. ಟಿ
- ಪ್ರಭು. ಎನ್ ಎಸ್. 1987. ಸೆಕೆಂಡ್ ಲ್ಯಾಂಗ್ವೇಜ್ ಪೆಡಗಾಜಿ. ಆಕ್ಸ್ಫರ್ಡ್ , ನ್ಯೂ ಯಾರ್ಕ್, ಆಕ್ಸ್ ಫರ್ಡ್ ಯೂನಿವರ್ಸಿಟಿ ಪ್ರೆಸ್.
- ಡೋವೇರಾ, ಎಸ್. 2005. ಇಲೇಕ್ಟಿಸಿಸಂ ಇನ್ ಮೆಥೊಡೋಲಾಜೀ. ಎಂಎಸ್., ಎನೆಫ್ ಜೀ. ಇಂಗ್ಲಿಷ್.
- ಫೆಲಿಸ್ಕ್, ಪಾಲ್. 1998. ಲರ್ನಿಂಗ್ ಟು ರೀಡ್ ಇಂಗ್ಲಿಷ್ : ದ ಮಿಕ್ಸ್ ಕೋಡ್ ವೇ. ಇನ್ ವಿವಿಯನ್ ಬೆರಿ ಅಂಡ್ ಆರ್ಥರ್ ಎಮ್ ಸಿ ನೇಲ್(ಸಂಪಾ.) ಪಾಲಿಸಿ ಅಂಡ್ ಪ್ರಾಕ್ಟೀಸ್ ಇನ್ ಲಾಂಗ್ವೇಜ್ ಎಜುಕೇಶನ್, ಹಾಂಗ್ ಕಾಂಗ್: ಡಿಪಾರ್ಟಮೆಂಟ್ ಆಫ್ ಕರಿಕುಲಮ್ ಸ್ಟಡೀಸ್, ಯೂನಿವರ್ಸಿಟಿ ಆಫ್ ಹಾಂಗ್ ಕಾಂಗ್. ಪುಟ. 175-193
- ವೆಸ್ಟ್, ಮೈಕಲ್, 1941. ಲರ್ನಿಂಗ್ ಟೂ ರೀಡ್ ಫಾರಿನ್ ಲಾಂಗ್ವೇಜ್, ಲಾಂಗ್ಮೆನ್: ಯು.ಕೆ. (ಲರ್ನಿಂಗ್ ಟು ರೀಡ್ ಎ ಫಾರಿನ್ ಲ್ಯಾಂಗ್ವೇಜ್ ಅಂಡ್ ಅದರ್ ಎಸ್ಸೇಸ್ ಆನ್ ಲಾಂಗ್ವೇಜ್ ಟೀಚಿಂಗ್.(ಹೊಸ ಆವೃತ್ತಿ)ಲಂಡನ್,

ನ್ಯೂಯಾರ್ಕ್, ಲಾಂಗ್ಮೆನ್, , ಗ್ರೀನ್ (1955)

- ಮ್ಯಾಥ್-ಮ್ಯಾಜಿಕ್, ಪುಸ್ತಕ 2, 2ನೇ ತರಗತಿಗಾಗಿ ಗಣಿತ ಪಠ್ಯಪುಸ್ತಕ, ಎನ್. ಸಿ. ಇ. ಆರ್.ಟಿ, 2007.
- ಲುಕಿಂಗ್ ಅರೌಂಡ್, ಎನ್ವಿರಾನ್ಮೆಂಟ್ ಸ್ಟಡೀಸ್, ಮೂರನೇ ತರಗತಿ ಪಠ್ಯಪುಸ್ತಕ, ಎನ್ ಸಿ ಇ ಆರ್ ಟಿ. 2006.
- ವಿತಾನ್ , ಭಾಗ-I, ಹಿಂದಿ ಭಾಷೆಯಲ್ಲಿ ಸ್ಟಡಿ ರೀಡರ್ XI ತರಗತಿಗೆ ಪೂರಕ ಪುಸ್ತಕ, ಎನ್. ಸಿ. ಇ. ಆರ್.ಟಿ, 2006
- ಹರಿಜನ, 9-7, 38, ಪುಟ ಸಂಖ್ಯೆ. 177, ಮಹಾತ್ಮ ಗಾಂಧಿಯವರ ಆಯ್ದ ಕೃತಿಗಳು (ಸಂ. V) ದಿ ವಾಯ್ಸ್ ಆಫ್ ಟ್ರೂತ್ (ಆನ್‌ಲೈನ್‌ನ ಪೂರ್ತಿ ಪುಸ್ತಕ) ಭಾಗ -II) ವಿಭಾಗ XI: ಮೂಲಭೂತ ಶಿಕ್ಷಣ ಮತ್ತು ವಿದ್ಯಾರ್ಥಿ ಮೂಲಭೂತ ಶಿಕ್ಷಣ)
- <https://www.mkgandhi.org/voiceoftruth/basiceducation.htm> ರೀಡ್ ಅ
- ಈ ಪುಸ್ತಕದ ಮೊದಲ ಭಾಗದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020, ಅಧ್ಯಾಯ 4.11, 4.12, 4.14, 4.18, 22.20
- ಭಾರತೀಯ ಭಾಷೆಗಳ ಬೋಧನೆ, ರಾಷ್ಟ್ರೀಯ ಫೋಕಸ್ ಸಮೂಹದ ಸ್ಥಾನ ಕಾಗದ

ಎಲ್ಲಾ ಶಿಕ್ಷಣವು ವಿದ್ಯಾರ್ಥಿಗಳ ಪ್ರಾದೇಶಿಕ ಭಾಷೆ(ಮಾತೃ ಭಾಷೆ) ಯ ಮುಖಾಂತರ ಕೊಡಬೇಕು.

— ಹೊಸ ಶಿಕ್ಷಣ(ನಯೀ ತಾಲೀಮ್), ಮಹಾತ್ಮಾ ಗಾಂಧಿ

ಶಿಕ್ಷಣದಲ್ಲಿ ಮಾತೃ ಭಾಷೆಯು ಶಿಶುವಿಗೆ ತಾಯಿಯ ಎದೆ ಹಾಲಿಗೆ ಸಮಾನ. ಎಲ್ಲಿಯವರೆಗೂ ಮಾತೃಭಾಷೆಯು ಶಿಕ್ಷಣದ ಮಾಧ್ಯಮವಾಗುವುದಿಲ್ಲವೋ ಅಲ್ಲಿಯವರೆಗೂ ಶಿಕ್ಷಣದ ಸಾರ್ವಭೌಮೀಕರಣ ಸಂಭವವಿಲ್ಲ

— ರವೀಂದ್ರನಾಥ ಠಾಗೋರ್

ಹೆಚ್ಚಿನ ಮಾಹಿತಿಗಾಗಿ www.ncert.nic.in ಅನ್ನು ದಯಮಾಡಿ ನೋಡಿ ಅಥವಾ ಕೃತಿಸ್ವಾಮ್ಯ ಪುಟದಲ್ಲಿ ನೀಡಲಾದ ವಿಳಾಸದ ವ್ಯಾಪಾರ ಪ್ರಬಂಧಕರನ್ನು ಸಂಪರ್ಕಿಸಿ.

32141

विद्यया ऽमृतमश्नुते

एन सी ई आर टी
NCERT

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಮಂಡಳಿ
NATIONAL COUNCIL OF EDUCATIONAL RESEARCH AND TRAINING

ISBN 978-93-5292-675-6